



(ಅವತೀರ್ಣ - ಮದೀನಾದಲ್ಲಿ)

1. ನೀವು ಒಪ್ಪಂದ ಮಾಡಿಕೊಂಡಿದ್ದ[1] 'ಬಹುದೇವವಿಶ್ವಾಸಿ'ಗಳಿಗೆ ಅಲ್ಲಾಹ್ ಮತ್ತು ಅವನ ಸಂದೇಶವಾಹಕನ ಕಡೆಯಿಂದ ಒಪ್ಪಂದ ವಿಮುಕ್ತತೆಯ ಘೋಷಣೆಯಿದು.[2]

بَرَآءَةٌ مِّنَ اللّٰهِ وَرَسُوْلِهٖٓ اِلَى الَّذِيْنَ عٰهَدْتُّمْ مِّنَ الْمُشْرِكِيْنَ ①

2. ಆದುದರಿಂದ ನೀವು ಇನ್ನೂ ನಾಲ್ಕು ತಿಂಗಳು ನಾಡಿನಲ್ಲಿ ಸಂಚರಿಸಿಕೊಳ್ಳಿರಿ. ನೀವು ಅಲ್ಲಾಹನನ್ನು ಪರಾಜಿತಗೊಳಿಸಲಾರಿರೆಂಬುದನ್ನೂ ಅಲ್ಲಾಹನು ಸತ್ಯನಿಷೇಧಿಗಳನ್ನು ಅವಮಾನಗೊಳಿಸಲಿರುವನೆಂಬುದನ್ನೂ ಚೆನ್ನಾಗಿ ತಿಳಿದುಕೊಳ್ಳಿರಿ.

فَسِيْحُوْا فِى الْاَرْضِ اَرْبَعَةَ اَشْهُرٍ وَّاعْلَمُوْٓا اَنَّكُمْ غَيْرُ مُعْجِزِى اللّٰهِ ۙ وَاَنَّ اللّٰهَ مُخْزِى الْكٰفِرِيْنَ ②

3. ಅಲ್ಲಾಹನೂ ಅವನ ಸಂದೇಶವಾಹಕರೂ 'ಬಹುದೇವವಿಶ್ವಾಸಿ'ಗಳಿಂದ ಹೊಣೆ ವಿಮುಕ್ತರಾಗಿರುವರೆಂದು ಅಲ್ಲಾಹ್ ಮತ್ತು

وَاَذَانٌ مِّنَ اللّٰهِ وَرَسُوْلِهٖٓ اِلَى النَّاسِ يَوْمَ الْحَجِّ الْاَكْبَرِ اَنَّ اللّٰهَ بَرِىٓءٌ

---

1. ಯಾವುದೇ ಜನಾಂಗದ ಬಗ್ಗೆ ಅವರು ಒಪ್ಪಂದದಲ್ಲಿ ವಂಚನೆ ಮಾಡಿ ಅದನ್ನು ಮುರಿಯುವರೆಂದು ನಿಮಗೆ ಶಂಕೆ ಇದ್ದರೆ ಅವರೊಂದಿಗಿನ ಒಪ್ಪಂದವನ್ನು ಬಹಿರಂಗವಾಗಿ ತಳ್ಳಿ ಬಿಡಿರಿ. ನಮ್ಮ ನಡುವೆ ಮುಂದೆ ಯಾವ ಒಪ್ಪಂದವೂ ಇಲ್ಲವೆಂದು ಅವರಿಗೆ ಎಚ್ಚರಿಕೆ ನೀಡಿರಿ. ಈ ನೀತಿ ಶಾಸ್ತ್ರದ ಆಧಾರದಲ್ಲೇ, ಒಪ್ಪಂದವಿದ್ದಾಗಲೂ ಸದಾ ಇಸ್ಲಾಮಿನ ವಿರುದ್ಧ ಸಂಚು ಹೂಡುತ್ತಿದ್ದ ಮತ್ತು ಸಂದರ್ಭ ಒದಗಿದಾಗ ಒಪ್ಪಂದವನ್ನು ಒತ್ತಟ್ಟಿಗಿರಿಸಿ ಶತ್ರುತ್ವಕ್ಕೆ ಅಣಿಯಾಗಿಸುತ್ತಿದ್ದ ಎಲ್ಲಾ ಜನಾಂಗಗಳೊಂದಿಗೆ ಒಪ್ಪಂದ ರದ್ದಾಗಿದೆಯೆಂದು ಘೋಷಿಸಲಾಯಿತು. ಈ ಘೋಷಣೆಯ ನಂತರ ಅರೇಬಿಯಾದ ಬಹುದೇವಾರಾಧಕರು ಇಕ್ಕಟ್ಟಿಗೆ ಸಿಲುಕಿದರು. ಒಂದೋ ಹೋರಾಡಲು ಸಿದ್ಧರಾಗಿ ಇಸ್ಲಾಮಿ ಶಕ್ತಿಯೊಂದಿಗೆ ಸಂಘರ್ಷಕ್ಕಿಳಿದು ತಮ್ಮ ಅಸ್ತಿತ್ವವನ್ನೇ ಕಳಕೊಳ್ಳಬೇಕು, ಇಲ್ಲವೇ ದೇಶ ಬಿಟ್ಟು ಹೊರಟು ಹೋಗಬೇಕು ಅಥವಾ ಇಸ್ಲಾಮ್ ಸ್ವೀಕರಿಸಿ ತಮ್ಮನ್ನೂ ತಮ್ಮ ಪ್ರದೇಶವನ್ನು ಆಗಲೇ ಇಸ್ಲಾಮಿ ರಾಷ್ಟ್ರದ ಅಧೀನವಾಗಿದ್ದ ಬಹುಭಾಗದ ವ್ಯವಸ್ಥೆಯ ವಶಕ್ಕೆ ಕೊಟ್ಟುಬಿಡಬೇಕು. ಇದನ್ನು ಬಿಟ್ಟರೆ ಅವರಿಗೆ ಬೇರೆ ದಾರಿಯೇ ಇರಲಿಲ್ಲ.

2. ಐದನೆಯ ರುಕೂಅ್‌ನ ಕೊನೆಯ ತನಕದ ಈ ಸೂಕ್ತಗಳು ಹಿ. ಶ. 9ರಲ್ಲಿ ಅವತೀರ್ಣಗೊಂಡಿದ್ದುವು. ಆಗಲೇ ಪ್ರವಾದಿವರ್ಯರು(ಸ) ಹ. ಅಬೂಬಕರ್‌ರನ್ನು(ರ) ಹಜ್ಜ್‌ಗೆ ಕಳುಹಿಸಿದ್ದರು. ಆನಂತರ ಈ ಸೂಕ್ತಗಳು ಅವತೀರ್ಣಗೊಂಡಾಗ ಪ್ರವಾದಿವರ್ಯರು(ಸ) ಹ. ಅಲೀಯವರನ್ನು(ರ) ಹಜ್ಜ್ ಯಾತ್ರಿಕರ ಸಮಸ್ತ ಸಮೂಹಕ್ಕೆ ಅದನ್ನು ಓದಿ ಕೇಳಿಸಲು ಕಳುಹಿಸಿಕೊಟ್ಟರು ಮತ್ತು ಈ ಕೆಳಗಿನ ನಾಲ್ಕು ವಿಷಯಗಳನ್ನು ಘೋಷಿಸುವಂತೆ ಹೇಳಿದರು. i) ಇಸ್ಲಾಮ್ ಧರ್ಮವನ್ನು ಸ್ವೀಕರಿಸಲು ಒಪ್ಪದ ಯಾರೂ ಸ್ವರ್ಗವನ್ನು ಪ್ರವೇಶಿಸಲಾರರು. ii) ಈ ವರ್ಷದ ನಂತರ ಯಾವ ಬಹುದೇವಾರಾಧಕನೂ ಹಜ್ಜ್ ಯಾತ್ರೆಗೆ ಬರಬಾರದು. iii) ಅಲ್ಲಾಹನ ಭವನದ ಸುತ್ತ ನಗ್ನರಾಗಿ ಪ್ರದಕ್ಷಿಣೆ ಮಾಡುವುದು ನಿಷಿದ್ಧ. iv) ಅಲ್ಲಾಹನ ಪ್ರವಾದಿಯ ಜತೆ ಒಪ್ಪಂದ ಬಾಕಿಯುಳಿದಿರುವ ಅರ್ಥಾತ್ ಒಪ್ಪಂದವನ್ನು ಮುರಿಯದಿರುವವರ ಜತೆಗೆ ಒಪ್ಪಂದವಿರುವಷ್ಟು ಕಾಲವೂ ಮೈತ್ರಿ ಬೆಳೆಸಲಾಗುವುದು. ಪ್ರವಾದಿವರ್ಯರ(ಸ) ಮಾರ್ಗದರ್ಶನದಂತೆ ಹ.ಅಲೀ(ರ) ದುಲ್‌ಹಜ್ಜ್ 10ರಂದು ಈ ಪ್ರಕಟಣೆ ಹೊರಡಿಸಿದರು.

ಅವನ ರಸೂಲರ ಕಡೆಯಿಂದ 'ಹಜ್ಜುಲ್ ಅಕ್ಬರ್' (ಮಹಾ ಹಜ್ಜ್ ಯಾತ್ರೆಯ)[3] ದಿನದಂದು ಮಾಡಲಾಗುತ್ತಿರುವ ಸಾರ್ವತ್ರಿಕ ಘೋಷಣೆಯಿದು. ನೀವು ಪಶ್ಚಾತ್ತಾಪ ಪಟ್ಟರೆ ನಿಮಗೇ ಒಳಿತು. ನೀವು ವಿಮುಖರಾದರೆ, ಅಲ್ಲಾಹನನ್ನು ಪರಾಜಿತಗೊಳಿಸಲಾರಿರೆಂದು ಚೆನ್ನಾಗಿ ತಿಳಿದುಕೊಳ್ಳಿರಿ. ಓ ಪೈಗಂಬರರೇ, ಸತ್ಯನಿಷೇಧಿಗಳಿಗೆ ವೇದನಾಯುಕ್ತ ಯಾತನೆಯ ಸುವಾರ್ತೆ ತಿಳಿಸಿಬಿಡಿರಿ.

مِّنَ الْمُشْرِكِينَ ۙ وَرَسُولُهُ ۚ فَإِن تُبْتُمْ فَهُوَ خَيْرٌ لَّكُمْ ۖ وَإِن تَوَلَّيْتُمْ فَاعْلَمُوا أَنَّكُمْ غَيْرُ مُعْجِزِي اللَّهِ ۗ وَبَشِّرِ الَّذِينَ كَفَرُوا بِعَذَابٍ أَلِيمٍ ③

4. ನೀವು ಒಪ್ಪಂದ ಮಾಡಿಕೊಂಡಿದ್ದು, ತಮ್ಮ ಒಪ್ಪಂದ ಪಾಲನೆಯಲ್ಲಿ ನಿಮ್ಮೊಂದಿಗೆ ಯಾವತ್ತೂ ಲೋಪವೆಸಗದಿದ್ದರೆ ಹಾಗೂ ನಿಮ್ಮ ವಿರುದ್ಧ ಯಾರಿಗೂ ಸಹಾಯ ಮಾಡದಿದ್ದರೆ, ಆ 'ಬಹುದೇವವಿಶ್ವಾಸಿ'ಗಳು ಇದಕ್ಕೆ ಹೊರತಾಗಿದ್ದಾರೆ. ಇಂಥವರೊಂದಿಗೆ ನೀವೂ ಅವಧಿಯವರೆಗೆ ಒಪ್ಪಂದವನ್ನು ಪಾಲಿಸಿರಿ. ಏಕೆಂದರೆ, ಅಲ್ಲಾಹನು 'ಧರ್ಮನಿಷ್ಠ'ರನ್ನೇ ಮೆಚ್ಚುತ್ತಾನೆ.

إِلَّا الَّذِينَ عَاهَدتُّم مِّنَ الْمُشْرِكِينَ ثُمَّ لَمْ يَنقُصُوكُمْ شَيْئًا وَلَمْ يُظَاهِرُوا عَلَيْكُمْ أَحَدًا فَأَتِمُّوا إِلَيْهِمْ عَهْدَهُمْ إِلَىٰ مُدَّتِهِمْ ۚ إِنَّ اللَّهَ يُحِبُّ الْمُتَّقِينَ ④

5. ನಿಷೇಧಿತ ಮಾಸಗಳು ಕಳೆದ ಬಳಿಕ[4] 'ಬಹುದೇವವಿಶ್ವಾಸಿ'ಗಳನ್ನು ಸಿಕ್ಕಲ್ಲಿ ವಧಿಸಿರಿ. ಅವರನ್ನು ಸೆರೆ ಹಿಡಿಯಿರಿ. ಮುತ್ತಿಗೆ ಹಾಕಿರಿ. ಬೇಹು ನಡೆಸುವಲ್ಲೆಲ್ಲ ಅವರನ್ನು ಹೊಂಚು ಹಾಕುತ್ತ ಕುಳಿತುಕೊಳ್ಳಿರಿ. ಮುಂದೆ ಅವರು ಪಶ್ಚಾತ್ತಾಪ ಪಟ್ಟರೆ, ನಮಾಝನ್ನು ಸಂಸ್ಥಾಪಿಸಿದರೆ ಮತ್ತು ಝಕಾತ್ ಕೊಟ್ಟರೆ ಅವರನ್ನು ಬಿಟ್ಟುಬಿಡಿರಿ.[5] ಅಲ್ಲಾಹನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

فَإِذَا انسَلَخَ الْأَشْهُرُ الْحُرُمُ فَاقْتُلُوا الْمُشْرِكِينَ حَيْثُ وَجَدتُّمُوهُمْ وَخُذُوهُمْ وَاحْصُرُوهُمْ وَاقْعُدُوا لَهُمْ كُلَّ مَرْصَدٍ ۚ فَإِن تَابُوا وَأَقَامُوا الصَّلَاةَ وَآتَوُا الزَّكَاةَ فَخَلُّوا سَبِيلَهُمْ ۚ إِنَّ اللَّهَ غَفُورٌ رَّحِيمٌ ⑤

6. 'ಬಹುದೇವವಿಶ್ವಾಸಿ'ಗಳ ಪೈಕಿ ಯಾರಾದರೂ (ಅಲ್ಲಾಹನ ವಾಣಿಯನ್ನಾಲಿಸಲಿಕ್ಕಾಗಿ) ನಿಮ್ಮೊಡನೆ ಅಭಯ ಯಾಚಿಸಿ ನಿಮ್ಮ

وَإِنْ أَحَدٌ مِّنَ الْمُشْرِكِينَ اسْتَجَارَكَ فَأَجِرْهُ حَتَّىٰ يَسْمَعَ كَلَامَ اللَّهِ ثُمَّ أَبْلِغْهُ

3. ಹಜ್ಜುಲ್ ಅಸ್ಗರ್(ಕಿರಿಯ ಹಜ್ಜ್)ಗೆ ಪ್ರತಿಯಾಗಿ ಹಜ್ಜುಲ್ ಅಕ್ಬರ್ (ಹಿರಿಯ ಹಜ್ಜ್) ಎಂಬ ಪದ ಪ್ರಯೋಗವಾಗಿದೆ. ಅರಬರು ಉಮ್ರಾಕ್ಕೆ ಕಿರಿಯ ಹಜ್ಜ್ ಎನ್ನುತ್ತಿದ್ದರು. ಇದಕ್ಕೆ ವಿರುದ್ಧವಾಗಿ ದುಲ್‌ಹಜ್ಜ್ ತಿಂಗಳ ನಿರ್ದಿಷ್ಟ ದಿನಾಂಕಗಳಂದು ನಡೆಯುವ ಹಜ್ಜ್‌ಗೆ ಹಜ್ಜುಲ್ ಅಕ್ಬರ್ ಎನ್ನಲಾಗುತ್ತದೆ.

4. ಇಲ್ಲಿ ನಿಷಿದ್ಧ ತಿಂಗಳುಗಳು ಎಂದರೆ ಸತ್ಯನಿಷೇಧಿಗಳಿಗೆ ಅವಧಿ ನೀಡಲಾಗಿದ್ದ ನಾಲ್ಕು ತಿಂಗಳುಗಳಾಗಿವೆ. ಈ ಅವಧಿಯಲ್ಲಿ ಸತ್ಯನಿಷೇಧಿಗಳ ಮೇಲೆ ಆಕ್ರಮಣ ನಡೆಸುವುದು ಮುಸ್ಲಿಮರ ಪಾಲಿಗೆ ಸಮ್ಮತವಾಗಿರಲಿಲ್ಲ. ಆದ್ದರಿಂದಲೇ ಅವುಗಳನ್ನು ನಿಷಿದ್ಧ ತಿಂಗಳುಗಳು ಎಂದು ಹೇಳಲಾಗಿದೆ.

5. ಅರ್ಥಾತ್- ಸತ್ಯನಿಷೇಧ ಮತ್ತು ಬಹುದೇವಾರಾಧನೆಯ ಬಗ್ಗೆ ಪ್ರಾಯಶ್ಚಿತ್ತಪಟ್ಟರೆ ಸಾಕಾಗಲಾರದು. ಅವರು ನಮಾಝ್ ಸಂಸ್ಥಾಪಿಸಬೇಕಾಗುವುದು. ಝಕಾತ್ ಕೊಡಬೇಕಾಗುವುದು. ಅನ್ಯಥಾ ಅವರು ಸತ್ಯನಿಷೇಧವನ್ನು ತೊರೆದು ಇಸ್ಲಾಮನ್ನು ಅಂಗೀಕರಿಸಿದ್ದಾರೆ ಎಂದು ಸಮ್ಮತಿಸಲಾಗದು.

ಬಳಿಗೆ ಬರಲಿಚ್ಛಿಸಿದರೆ ಅಲ್ಲಾಹನ ವಚನವನ್ನು ಅವನು ಆಲಿಸಿ ಕೊಳ್ಳುವವರೆಗೆ ಅವನಿಗೆ ಅಭಯ ನೀಡಿರಿ. ಅನಂತರ ಅವನನ್ನು ಅವನ ಸುರಕ್ಷಾಸ್ಥಾನಕ್ಕೆ ತಲುಪಿಸಿಬಿಡಿರಿ. ಅವರು ತಿಳುವಳಿಕೆಯಿಲ್ಲ ದವರಾದುದರಿಂದ ಹೀಗೆ ಮಾಡಬೇಕಾಗಿದೆ.

مَأْمَنَهُ ۚ ذَٰلِكَ بِأَنَّهُمْ قَوْمٌ لَّا يَعْلَمُونَ ۝٦

7. ಈ 'ಬಹುದೇವವಿಶ್ವಾಸಿ'ಗಳಿಗೆ ಅಲ್ಲಾಹ್ ಮತ್ತು ಅವನ ರಸೂಲರ ಬಳಿ ಒಪ್ಪಂದವಿರುವುದಾದರೂ ಹೇಗೆ? 'ಮಸ್ಜಿದುಲ್ ಹರಾಮ್'ನ ಬಳಿ ಒಪ್ಪಂದ ಮಾಡಿಕೊಂಡವರೊಡನೆ ಹೊರತು.[6] ಅವರು ನಿಮ್ಮೊಡನೆ ನೇರವಾಗಿರುವ ವರೆಗೂ ನೀವು ಅವರೊಡನೆ ನೇರ ವಾಗಿರಿ. ಏಕೆಂದರೆ ಅಲ್ಲಾಹನು 'ಧರ್ಮನಿಷ್ಠ'ರನ್ನು ಮೆಚ್ಚುತ್ತಾನೆ.

كَيْفَ يَكُونُ لِلْمُشْرِكِينَ عَهْدٌ عِندَ اللَّهِ وَ
عِندَ رَسُولِهِ إِلَّا الَّذِينَ عَاهَدتُّمْ عِندَ
الْمَسْجِدِ الْحَرَامِ ۖ فَمَا اسْتَقَامُوا لَكُمْ
فَاسْتَقِيمُوا لَهُمْ ۚ إِنَّ اللَّهَ يُحِبُّ الْمُتَّقِينَ ۝٧

8. ಆದರೆ ಅವರ ಹೊರತು ಇತರ 'ಬಹುದೇವವಿಶ್ವಾಸಿ'ಗಳೊಂದಿಗೆ ಒಪ್ಪಂದವಿರುವುದಾದರೂ ಹೇಗೆ? ಅವರ ಅವಸ್ಥೆಯೇನೆಂದರೆ, ಅವರು ನಿಮ್ಮ ಮೇಲೆ ಜಯಗಳಿಸಿದರೆ ನಿಮ್ಮ ವಿಷಯದಲ್ಲಿ ಬಾಂಧವ್ಯವನ್ನಾಗಲಿ ಒಪ್ಪಂದದ ಹೊಣೆಯನ್ನಾಗಲಿ ಪರಿಗಣಿಸುವು ದಿಲ್ಲ. ಅವರು ಬರೇ ಬಾಯಿ ಮಾತುಗಳಿಂದ ನಿಮ್ಮನ್ನು ಮೆಚ್ಚಿಸಲು ಯತ್ನಿಸುತ್ತಾರೆ. ಆದರೆ ಅವರ ಅಂತಃಕರಣಗಳು ನಿಷೇಧಿಸುತ್ತವೆ. ಅವರಲ್ಲಿ ಹೆಚ್ಚಿನವರು 'ಕರ್ಮಭ್ರಷ್ಟರು.'

كَيْفَ وَإِن يَظْهَرُوا عَلَيْكُمْ لَا يَرْقُبُوا فِيكُمْ
إِلًّا وَلَا ذِمَّةً ۚ يُرْضُونَكُم بِأَفْوَاهِهِمْ وَتَأْبَىٰ
قُلُوبُهُمْ وَأَكْثَرُهُمْ فَاسِقُونَ ۝٨

9. ಅವರು ಅಲ್ಲಾಹನ 'ಸೂಕ್ತ'ಗಳ ಬದಲಿಗೆ ಅತ್ಯಲ್ಪ ಬೆಲೆಯನ್ನು ಸ್ವೀಕರಿಸಿಕೊಂಡರು. ಅನಂತರ ಅಲ್ಲಾಹನ ಮಾರ್ಗಕ್ಕೆ ತಡೆಯಾಗಿ ನಿಂತರು. ಅವರು ಮಾಡುತ್ತಿದ್ದ ಕಾರ್ಯಗಳೆಲ್ಲ ಅತ್ಯಂತ ನಿಕೃಷ್ಟವಾಗಿದ್ದವು.

اشْتَرَوْا بِآيَاتِ اللَّهِ ثَمَنًا قَلِيلًا فَصَدُّوا عَن
سَبِيلِهِ ۚ إِنَّهُمْ سَاءَ مَا كَانُوا يَعْمَلُونَ ۝٩

10. ಒಬ್ಬ ಸತ್ಯವಿಶ್ವಾಸಿಯ ವಿಷಯದಲ್ಲಿ ಇವರು ಬಾಂಧವ್ಯವನ್ನಾಗಲಿ ಒಪ್ಪಂದದ ಹೊಣೆಯನ್ನಾಗಲಿ ಪರಿಗಣಿಸುವುದಿಲ್ಲ. ಅತಿರೇಕವು ಯಾವಾಗಲೂ ಅವರ ಕಡೆಯಿಂದಲೇ ಆಗಿದೆ.

لَا يَرْقُبُونَ فِي مُؤْمِنٍ إِلًّا وَلَا ذِمَّةً ۚ وَ
أُولَٰئِكَ هُمُ الْمُعْتَدُونَ ۝١٠

11. ಆದರೂ ಇವರು ಪಶ್ಚಾತ್ತಾಪ ಪಟ್ಟರೆ ಮತ್ತು ನಮಾಝನ್ನು ಸಂಸ್ಥಾಪಿಸಿ ಝಕಾತ್ ಕೊಟ್ಟರೆ, ನಿಮ್ಮ ಧರ್ಮಬಾಂಧವರಾಗಿರು ತ್ತಾರೆ.[7] ತಿಳುವಳಿಕೆಯುಳ್ಳವರಿಗೆ ನಾವು ನಮ್ಮ ಆದೇಶಗಳನ್ನು ವಿವರಿಸುತ್ತೇವೆ.

فَإِن تَابُوا وَأَقَامُوا الصَّلَاةَ وَآتَوُا الزَّكَاةَ
فَإِخْوَانُكُمْ فِي الدِّينِ ۗ وَنُفَصِّلُ الْآيَاتِ
لِقَوْمٍ يَعْلَمُونَ ۝١١

6. ಅರ್ಥಾತ್- ಕಿನಾನ, ಕುಝಾಅ ಮತ್ತು ಸಮ್ರಾ ಗೋತ್ರಗಳು.

7. ಅರ್ಥಾತ್- ನಮಾಝ್ ಮತ್ತು ಝಕಾತ್‌ನ ಪಾಲನೆ ಮಾಡದೆ ಕೇವಲ ಪ್ರಾಯಶ್ಚಿತ್ತಪಟ್ಟ ಮಾತ್ರಕ್ಕೆ ಅವರು ನಿಮ್ಮ ಧಾರ್ಮಿಕ ಸೋದರರಾಗಿ ಮಾರ್ಪಡುವುದಿಲ್ಲ. ಈ ಶರತ್ತನ್ನು ಅವರು ಈಡೇರಿಸಿದರೆ ಅವರ ಮೇಲೆ ಕೈ ಮಾಡುವುದು ಮತ್ತು ಅವರ ಜೀವ-

12. ಒಪ್ಪಂದದ ಅನಂತರ ಅವರು ಪುನಃ ತಮ್ಮ ಶಪಥಗಳನ್ನು ಮುರಿದು ನಿಮ್ಮ ಧರ್ಮದ ಮೇಲೆ ಆಕ್ರಮಣವೆಸಗಲಾರಂಭಿಸಿದರೆ 'ಸತ್ಯನಿಷೇಧ'ದ ಮುಂದಾಳುಗಳೊಂದಿಗೆ ಯುದ್ಧ ಮಾಡಿರಿ. ಏಕೆಂದರೆ, ಅವರ ಶಪಥಗಳನ್ನು ನಂಬಲಾಗದು. ಪ್ರಾಯಶಃ ಅವರು (ಪುನಃ ಖಡ್ಗ ಬಲದ ಮೂಲಕವೇ) ಹಿಂಜರಿಯಬಹುದು.[8]

وَإِن نَّكَثُوٓا۟ أَيْمَـٰنَهُم مِّنۢ بَعْدِ عَهْدِهِمْ وَطَعَنُوا۟ فِى دِينِكُمْ فَقَـٰتِلُوٓا۟ أَئِمَّةَ ٱلْكُفْرِ ۙ إِنَّهُمْ لَآ أَيْمَـٰنَ لَهُمْ لَعَلَّهُمْ يَنتَهُونَ ﴿١٢﴾

13. ತಮ್ಮ ಶಪಥಗಳನ್ನು ಮುರಿಯುತ್ತಲೇ ಇದ್ದು ಸಂದೇಶವಾಹಕರನ್ನು ದೇಶದಿಂದ ಹೊರಹಾಕಲು ನಿರ್ಧರಿಸಿದ ಮತ್ತು ಅತಿರೇಕವನ್ನಾರಂಭಿಸಿದವರೊಂದಿಗೆ ನೀವು ಯುದ್ಧ ಮಾಡುವುದಿಲ್ಲವೇ? ನೀವು ಅವರಿಗೆ ಹೆದರುತ್ತೀರಾ? ನೀವು ಸತ್ಯವಿಶ್ವಾಸಿಗಳಾಗಿದ್ದರೆ ನಿಮ್ಮ ಭಯಕ್ಕೆ ಅಲ್ಲಾಹನು ಹೆಚ್ಚು ಅರ್ಹನು.

أَلَا تُقَـٰتِلُونَ قَوْمًا نَّكَثُوٓا۟ أَيْمَـٰنَهُمْ وَهَمُّوا۟ بِإِخْرَاجِ ٱلرَّسُولِ وَهُم بَدَءُوكُمْ أَوَّلَ مَرَّةٍ ۚ أَتَخْشَوْنَهُمْ ۚ فَٱللَّهُ أَحَقُّ أَن تَخْشَوْهُ إِن كُنتُم مُّؤْمِنِينَ ﴿١٣﴾

14. ಅವರೊಡನೆ ಯುದ್ಧ ಮಾಡಿರಿ. ಅಲ್ಲಾಹನು ನಿಮ್ಮ ಕೈಗಳಿಂದ ಅವರಿಗೆ ಶಿಕ್ಷೆ ಕೊಡಿಸುವನು, ಅವರನ್ನು ಅವಮಾನಗೊಳಿಸುವನು, ಅವರ ವಿರುದ್ಧ ನಿಮಗೆ ಸಹಾಯ ಮಾಡುವನು. ಅನೇಕ ಸತ್ಯ ವಿಶ್ವಾಸಿಗಳ ಹೃದಯಗಳನ್ನು ತಣಿಸುವನು.

قَـٰتِلُوهُمْ يُعَذِّبْهُمُ ٱللَّهُ بِأَيْدِيكُمْ وَيُخْزِهِمْ وَيَنصُرْكُمْ عَلَيْهِمْ وَيَشْفِ صُدُورَ قَوْمٍ مُّؤْمِنِينَ ﴿١٤﴾

15. ಅವರ ಹೃದಯಗಳ ಬೇಗುದಿಯನ್ನು ಹೋಗಲಾಡಿಸುವನು ಮತ್ತು ತನಗಿಷ್ಟವಿದ್ದವರಿಗೆ 'ಪಶ್ಚಾತ್ತಾಪ'ದ ಅನುಗ್ರಹ ನೀಡುವನು.[9] ಅಲ್ಲಾಹನು ಸಕಲವನ್ನೂ ಬಲ್ಲವನೂ ಧೀಮಂತನೂ ಆಗಿರುತ್ತಾನೆ.

وَيُذْهِبْ غَيْظَ قُلُوبِهِمْ ۗ وَيَتُوبُ ٱللَّهُ عَلَىٰ مَن يَشَآءُ ۗ وَٱللَّهُ عَلِيمٌ حَكِيمٌ ﴿١٥﴾

16. ನಿಮ್ಮನ್ನು ಹೀಗೆಯೇ ಬಿಟ್ಟು ಬಿಡಲಾಗುವುದೆಂದು ನೀವೆಣಿಸಿದ್ದೀರಾ? ವಸ್ತುತಃ ನಿಮ್ಮ ಪೈಕಿ (ಅಲ್ಲಾಹನ ಮಾರ್ಗದಲ್ಲಿ) ಅತಿಯಾಗಿ ಪರಿಶ್ರಮಿಸಿದವರು ಮತ್ತು ಅಲ್ಲಾಹನನ್ನೂ ಸಂದೇಶವಾಹಕರನ್ನೂ ಸತ್ಯವಿಶ್ವಾಸಿಗಳನ್ನೂ ಹೊರತು ಅನ್ಯರನ್ನು ಆತ್ಮಮಿತ್ರರನ್ನಾಗಿ ಮಾಡಿಕೊಳ್ಳದವರೆಂದು ಅಲ್ಲಾಹನು ಇನ್ನೂ

أَمْ حَسِبْتُمْ أَن تُتْرَكُوا۟ وَلَمَّا يَعْلَمِ ٱللَّهُ ٱلَّذِينَ جَـٰهَدُوا۟ مِنكُمْ وَلَمْ يَتَّخِذُوا۟ مِن دُونِ ٱللَّهِ وَلَا رَسُولِهِۦ وَلَا ٱلْمُؤْمِنِينَ وَلِيجَةً ۚ وَٱللَّهُ خَبِيرٌۢ بِمَا تَعْمَلُونَ ﴿١٦﴾ ع

ಸೊತ್ತುಗಳ ವಿರುದ್ಧ ಮುಗಿ ಬೀಳುವುದು ನಿಮ್ಮ ಪಾಲಿಗೆ ನಿಷಿದ್ಧ. ಜತೆಗೆ ಅವರಿಗೆ ಆಗುವ ಇನ್ನೊಂದು ಪ್ರಯೋಜನವೆಂದರೆ ಇಸ್ಲಾಮೀ ಸಮಾಜದಲ್ಲಿ ಸಮಾನ ಹಕ್ಕುಗಳು ದೊರೆಯುವುದು. ಸಾಮಾಜಿಕ, ಸಾಂಸ್ಕೃತಿಕ ಮತ್ತು ಶಾಸನಾತ್ಮಕ ದೃಷ್ಟಿಯಿಂದ ಅವರು ಇತರ ಮುಸ್ಲಿಮರಂತೆಯೇ ಇರುವರು. ಅವರ ಪ್ರಗತಿಯ ಮಾರ್ಗದಲ್ಲಿ ಯಾವುದೇ ರೀತಿಯ ತಾರತಮ್ಯ ಅಡ್ಡಿಯಾಗಲಾರದು.

8. ಇಲ್ಲಿ ಒಪ್ಪಂದ ಮಾಡುವುದು ಮತ್ತು ಶಪಥ ಹಾಕುವುದೆಂದರೆ ತಾನು ಮುಸ್ಲಿಮನಾಗಿದ್ದೇನೆ ಎಂಬ ಕರಾರು ಮಾಡುವುದು ಮತ್ತು ಇಸ್ಲಾಮಿನ ಬಗ್ಗೆ ತನಗಿರುವ ನಿಷ್ಠೆಯ ಬಗ್ಗೆ ಶಪಥ ಹಾಕುವುದಾಗಿದೆ. ಅರ್ಥಾತ್ ಅವರು ಮುಸ್ಲಿಮರಾಗಿ ಮಾರ್ಪಟ್ಟ ನಂತರ ಪುನಃ ಸತ್ಯನಿಷೇಧದ ಕಡೆಗೆ ಮರಳಿದರೆ ಅವರೊಡನೆ ಯುದ್ಧ ಮಾಡಿರಿ. ಈ ಆದೇಶದ ಪ್ರಕಾರವೇ ಹ.ಅಬೂಬಕರ್(ರ) ಧರ್ಮಭ್ರಷ್ಟರ ವಿರುದ್ಧ ಯುದ್ಧ ಮಾಡಿದ್ದರು.

9. ಈ ಪ್ರಕಟಣೆ ಬರುತ್ತಲೇ ಅರೇಬಿಯಾದ ಸುತ್ತಮುತ್ತಲ ಪ್ರದೇಶದಲ್ಲಿ ಅಗ್ನಿ ಜ್ವಾಲೆಗಳೆದ್ದು ರಕ್ತರಂಜಿತ ಯುದ್ಧವೊಂದನ್ನು ನಾವು ಎದುರಿಸಬೇಕಾಗುವುದು ಎಂದು ಮುಸ್ಲಿಮರು ಭಯಪಡುತ್ತಿದ್ದರು. ನಿಮ್ಮ ಈ ಸಂದೇಹ ಸರಿಯಲ್ಲ. ಅದಕ್ಕೆ ವಿರುದ್ಧವಾದ ಪರಿಣಾಮವನ್ನು ನೀವು ಕಾಣಲಿರುವಿರಿ ಎಂದು ಅಲ್ಲಾಹನು ಈ ಸೂಕ್ತಗಳಲ್ಲಿ ಸಾಂತ್ವನ ನೀಡಿದ್ದಾನೆ.

ಕಂಡುಕೊಳ್ಳಲೇ ಇಲ್ಲ. ಅಲ್ಲಾಹ್ ನೀವು ಮಾಡುತ್ತಿರುವುದೆಲ್ಲವನ್ನೂ ಚೆನ್ನಾಗಿ ಬಲ್ಲವನಾಗಿರುತ್ತಾನೆ.

17. 'ಬಹುದೇವವಿಶ್ವಾಸಿ'ಗಳು ತಮ್ಮ ಮೇಲೆ ತಾವೇ ಸತ್ಯನಿಷೇಧಕ್ಕೆ ಸಾಕ್ಷಿಗಳಾಗಿರುವಾಗ ಅವರು ಅಲ್ಲಾಹನ ಮಸೀದಿಗಳ ಮೇಲ್ವಿಚಾರಕರೂ ಸೇವಕರೂ ಆಗಿರುವುದು ಅವರಿಗೆ ತಕ್ಕುದಲ್ಲ. ಅವರ ಸತ್ಕರ್ಮಗಳೆಲ್ಲ ವ್ಯರ್ಥವಾದುವು. ಅವರಿಗೆ ಸದಾಕಾಲ 'ನರಕ'ದಲ್ಲಿ ವಾಸಿಸಲಿಕ್ಕಿದೆ.

مَا كَانَ لِلْمُشْرِكِيْنَ اَنْ يَّعْمُرُوْا مَسٰجِدَ
اللّٰهِ شٰهِدِيْنَ عَلٰۤى اَنْفُسِهِمْ بِالْكُفْرِ ؕ اُولٰٓئِكَ
حَبِطَتْ اَعْمَالُهُمْ ۚۖ وَفِى النَّارِ هُمْ خٰلِدُوْنَ ﴿۱۷﴾

18. ಅಲ್ಲಾಹ್ ಮತ್ತು ಅಂತಿಮ ದಿನದ ಮೇಲೆ ವಿಶ್ವಾಸವಿರಿಸುವವರೂ ನಮಾಝನ್ನು ಸಂಸ್ಥಾಪಿಸುವವರೂ ಝಕಾತ್ ಕೊಡುವವರೂ ಅಲ್ಲಾಹನನ್ನು ಹೊರತು ಇನ್ನಾರನ್ನೂ ಭಯಪಡದವರೂ ಮಾತ್ರ ಅಲ್ಲಾಹನ ಮಸೀದಿಗಳನ್ನು ನೆಲೆಗೊಳಿಸುವವ(ಮೇಲ್ವಿಚಾರಕ ಮತ್ತು ಸೇವಕ)ರಾಗಬಲ್ಲರು. ಅವರು ಮಾತ್ರ ಸನ್ಮಾರ್ಗದಲ್ಲಿ ನಡೆಯುವರೆಂದು ನಿರೀಕ್ಷಿಸಬಹುದು.

اِنَّمَا يَعْمُرُ مَسٰجِدَ اللّٰهِ مَنْ اٰمَنَ بِاللّٰهِ
وَالْيَوْمِ الْاٰخِرِ وَاَقَامَ الصَّلٰوةَ وَاٰتَى الزَّكٰوةَ
وَلَمْ يَخْشَ اِلَّا اللّٰهَ فَعَسٰۤى اُولٰٓئِكَ اَنْ يَّكُوْنُوْا
مِنَ الْمُهْتَدِيْنَ ﴿۱۸﴾

19. ಹಜ್ಜ್ ಯಾತ್ರಿಕರಿಗೆ ಜಲಪಾನ ಮಾಡಿಸುವುದನ್ನು ಮತ್ತು ಮಸ್ಜಿದುಲ್ ಹರಾಮ್‌ನ ಸೇವೆಯನ್ನು ನೀವು ಅಲ್ಲಾಹನ ಹಾಗೂ ಅಂತಿಮ ದಿನದ ಮೇಲೆ ವಿಶ್ವಾಸವಿಟ್ಟು, ಅಲ್ಲಾಹನ ಮಾರ್ಗದಲ್ಲಿ ಜೀವದ ಹಂಗು ತೊರೆದು ಹೋರಾಟ ನಡೆಸಿದವನ ಕರ್ಮಕ್ಕೆ ಸರಿಸಮಾನವೆಂದು ಪರಿಗಣಿಸಿದಿರಾ?[10] ಅಲ್ಲಾಹನ ದೃಷ್ಟಿಯಲ್ಲಿ ಇವರಿಬ್ಬರು ಸರಿಸಮಾನರಲ್ಲ ಮತ್ತು ಅಲ್ಲಾಹ್ ಅಕ್ರಮಿಗಳಿಗೆ ಸನ್ಮಾರ್ಗದರ್ಶನ ಮಾಡಿಸುವುದಿಲ್ಲ.

اَجَعَلْتُمْ سِقَايَةَ الْحَآجِّ وَعِمَارَةَ الْمَسْجِدِ
الْحَرَامِ كَمَنْ اٰمَنَ بِاللّٰهِ وَالْيَوْمِ الْاٰخِرِ
وَجٰهَدَ فِىْ سَبِيْلِ اللّٰهِ ؕ لَا يَسْتَوٗنَ عِنْدَ
اللّٰهِ ؕ وَاللّٰهُ لَا يَهْدِى الْقَوْمَ الظّٰلِمِيْنَ ﴿۱۹﴾

20. ಸತ್ಯವಿಶ್ವಾಸವನ್ನು ಕೈಗೊಂಡ, ಅಲ್ಲಾಹನ ಮಾರ್ಗದಲ್ಲಿ ಮನೆ ಮಾರುಗಳನ್ನು ಬಿಟ್ಟು ಮತ್ತು ತನುಧನಗಳಿಂದ ಹೋರಾಟ ನಡೆಸಿದವರ ಪದವಿಯೇ ಅಲ್ಲಾಹನ ಬಳಿ ಉನ್ನತವಾಗಿರುತ್ತದೆ. ಅವರೇ ವಿಜಯಿಗಳು.

اَلَّذِيْنَ اٰمَنُوْا وَهَاجَرُوْا وَجٰهَدُوْا فِىْ
سَبِيْلِ اللّٰهِ بِاَمْوَالِهِمْ وَاَنْفُسِهِمْ ۙ اَعْظَمُ
دَرَجَةً عِنْدَ اللّٰهِ ؕ وَاُولٰٓئِكَ هُمُ الْفَآئِزُوْنَ ﴿۲۰﴾

21. ಅವರ ಪ್ರಭು ಅವರಿಗೆ ತನ್ನ ಕೃಪೆ, ಸಂಪ್ರೀತಿ ಮತ್ತು ಅವರಿಗಾಗಿ ಅನಂತ ಸುಖಭೋಗ ಸಾಧನಗಳಿರುವ ಸ್ವರ್ಗಗಳ ಸುವಾರ್ತೆ ನೀಡುತ್ತಾನೆ.

يُبَشِّرُهُمْ رَبُّهُمْ بِرَحْمَةٍ مِّنْهُ وَرِضْوَانٍ
وَّجَنّٰتٍ لَّهُمْ فِيْهَا نَعِيْمٌ مُّقِيْمٌ ۙ ﴿۲۱﴾

10. ಈ ವಾಣಿಯ ಮೂಲಕ ಅಲ್ಲಾಹನ ಭವನದ ಮೊಕ್ತೇಸರಗಿರಿಯನ್ನು ಮುಂದೆ ಬಹುದೇವಾ ರಾಧಕರು ಮಾಡುವಂತಿಲ್ಲ ಎಂಬ ತೀರ್ಮಾನವನ್ನು ನೀಡಲಾಗಿದೆ. ಕೇವಲ ಹಜ್ಜ್ ಯಾತ್ರಿಕರ ಸೇವೆ ಮಾಡುತ್ತಿದ್ದಾರೆಂಬ ಕಾರಣಕ್ಕಾಗಿ ಕುರೈಶ್‌ನ ಬಹುದೇವಾರಾಧಕರು ಅದರ ಬಾಧ್ಯಸ್ತರಾಗಿ ಮಾರ್ಪಡುವುದಿಲ್ಲ.

22. ಅವರು ಅವುಗಳಲ್ಲಿ ಸದಾಕಾಲ ವಾಸಿಸುತ್ತಿರುವವರು. ನಿಶ್ಚಯ ವಾಗಿಯೂ ಅಲ್ಲಾಹನ ಬಳಿ ಸೇವಾ ಪ್ರತಿಫಲ ನೀಡಲಿಕ್ಕಾಗಿ ಧಾರಾಳವಿದೆ.

خٰلِدِيْنَ فِيْهَآ اَبَدًا ؕ اِنَّ اللّٰهَ عِنْدَهٗۤ اَجْرٌ عَظِيْمٌ ﴿۲۲﴾

23. ಓ ಸತ್ಯವಿಶ್ವಾಸಿಗಳೇ, ನಿಮ್ಮ ಪಿತರೂ ನಿಮ್ಮ ಭ್ರಾತೃಗಳೂ 'ಸತ್ಯವಿಶ್ವಾಸ'ಕ್ಕೆ ಎದುರಾಗಿ 'ಸತ್ಯನಿಷೇಧ'ವನ್ನೇ ಇಷ್ಟಪಟ್ಟರೆ ಅವರನ್ನೂ ಆಪ್ತರನ್ನಾಗಿ ಮಾಡಿಕೊಳ್ಳಬೇಡಿರಿ. ನಿಮ್ಮಲ್ಲಾರಾದರೂ ಅವರನ್ನು ಆಪ್ತರನ್ನಾಗಿ ಮಾಡಿಕೊಂಡರೆ ಅವರೇ ಅಕ್ರಮಿ ಗಳಾಗುವರು.

يٰۤاَيُّهَا الَّذِيْنَ اٰمَنُوْا لَا تَتَّخِذُوْۤا اٰبَآءَكُمْ وَاِخْوَانَكُمْ اَوْلِيَآءَ اِنِ اسْتَحَبُّوا الْكُفْرَ عَلَى الْاِيْمَانِ ؕ وَمَنْ يَّتَوَلَّهُمْ مِّنْكُمْ فَاُولٰٓئِكَ هُمُ الظّٰلِمُوْنَ ﴿۲۳﴾

24. ಓ ಪೈಗಂಬರರೇ, ಹೇಳಿರಿ - ನಿಮ್ಮ ಪಿತರೂ ನಿಮ್ಮ ಮಕ್ಕಳೂ ನಿಮ್ಮ ಸೋದರರೂ ನಿಮ್ಮ ಪತ್ನಿಯರೂ ನಿಮ್ಮ ನೆಂಟರಿಷ್ಟರೂ ನೀವು ಸಂಪಾದಿಸಿದ ಸಂಪತ್ತೂ ಮಂದಗೊಳ್ಳಬಹುದೆಂದು ನೀವು ಭಯಪಡುತ್ತಿರುವ ನಿಮ್ಮ ವ್ಯಾಪಾರ ವಹಿವಾಟುಗಳೂ ನೀವು ಇಷ್ಟಪಡುತ್ತಿರುವ ನಿಮ್ಮ ನಿವಾಸಗಳೂ ನಿಮಗೆ - ಅಲ್ಲಾಹ್, ಅವನ ಸಂದೇಶವಾಹಕ ಮತ್ತು ಅವನ ಮಾರ್ಗದಲ್ಲಿ ಹೋರಾಟ ನಡೆಸುವುದಕ್ಕಿಂತಲೂ ಪ್ರಿಯವಾಗಿದ್ದರೆ, ಅಲ್ಲಾಹನ ತನ್ನ ತೀರ್ಮಾನವನ್ನು ನಿಮ್ಮ ಮುಂದೆ ತರುವವರೆಗೂ ಕಾದು ನಿಲ್ಲಿರಿ. ಅಲ್ಲಾಹನು 'ಕರ್ಮಭ್ರಷ್ಟ'ರಿಗೆ ಮಾರ್ಗದರ್ಶನ ಮಾಡುವು ದಿಲ್ಲ.

قُلْ اِنْ كَانَ اٰبَآؤُكُمْ وَاَبْنَآؤُكُمْ وَاِخْوَانُكُمْ وَاَزْوَاجُكُمْ وَعَشِيْرَتُكُمْ وَاَمْوَالُ ۨاقْتَرَفْتُمُوْهَا وَتِجَارَةٌ تَخْشَوْنَ كَسَادَهَا وَمَسٰكِنُ تَرْضَوْنَهَاۤ اَحَبَّ اِلَيْكُمْ مِّنَ اللّٰهِ وَرَسُوْلِهٖ وَجِهَادٍ فِيْ سَبِيْلِهٖ فَتَرَبَّصُوْا حَتّٰى يَاْتِيَ اللّٰهُ بِاَمْرِهٖ ؕ وَاللّٰهُ لَا يَهْدِى الْقَوْمَ الْفٰسِقِيْنَ ﴿۲۴﴾ ع

25. ಅಲ್ಲಾಹ್ ಇದಕ್ಕಿಂತ ಮುಂಚೆ ಅನೇಕ ಸಂದರ್ಭಗಳಲ್ಲಿ ನಿಮಗೆ ಸಹಾಯ ಮಾಡಿರುತ್ತಾನೆ. ಇದೀಗ ಹುನೈನ್ ಯುದ್ಧದ ದಿನ (ಅವನ ನೆರವಿನ ವೈಖರಿಯನ್ನು ನೀವು ಕಂಡಿರುತ್ತೀರಿ.)[11] ಅಂದು ನಿಮಗೆ ಸಂಖ್ಯಾಬಲದ ಜಂಬವಿತ್ತು. ಆದರೆ ಅದು ನಿಮಗೇನೂ ಫಲಕೊಡಲಿಲ್ಲ. ಭೂಮಿಯು ವಿಶಾಲವಿದ್ದೂ ನಿಮ್ಮ ಮಟ್ಟಿಗೆ ಸಂಕುಚಿತವಾಗಿಬಿಟ್ಟಿತು ಮತ್ತು ನೀವು ಬೆನ್ನು ತಿರುಗಿಸಿ ಓಟಕಿತ್ತಿರಿ.

لَقَدْ نَصَرَكُمُ اللّٰهُ فِيْ مَوَاطِنَ كَثِيْرَةٍ ۙ وَّيَوْمَ حُنَيْنٍ ۙ اِذْ اَعْجَبَتْكُمْ كَثْرَتُكُمْ فَلَمْ تُغْنِ عَنْكُمْ شَيْـًٔا وَّضَاقَتْ عَلَيْكُمُ الْاَرْضُ بِمَا رَحُبَتْ ثُمَّ وَلَّيْتُمْ مُّدْبِرِيْنَ ﴿۲۵﴾

11. ಹುನೈನ್ ಯುದ್ಧ ಹಿ. ಶ. 8ರ ಶವ್ವಾಲ್ ತಿಂಗಳಲ್ಲಿ ಈ ಸೂಕ್ತಗಳು ಅವತೀರ್ಣಗೊಳ್ಳುವ ಸುಮಾರು ಹನ್ನೆರಡು-ಹದಿಮೂರು ತಿಂಗಳು ಮೊದಲು ಮಕ್ಕಾ ಮತ್ತು ತಾಯಿಫ್‌ನ ನಡುವೆ ಹುನೈನ್ ಕಣಿವೆಯಲ್ಲಿ ನಡೆದಿತ್ತು. ಈ ಯುದ್ಧದಲ್ಲಿ ಮುಸ್ಲಿಮರ ಕಡೆಯಲ್ಲಿ ಹನ್ನೆರಡು ಸಾವಿರ ಸೈನಿಕರಿದ್ದರು. ಇನ್ನೊಂದೆಡೆ ಸತ್ಯನಿಷೇಧಿಗಳು ಅವರಿಗಿಂತ ಬಹಳ ಕಡಿಮೆ ಸಂಖ್ಯೆಯಲ್ಲಿದ್ದರು. ಅದರ ಹೊರತಾಗಿಯೂ ಹವಾಝಿನ್ ಗೋತ್ರದ ಬಿಲ್ಲುಗಾರರು, ಮುಸ್ಲಿಮರು ಬೆನ್ನು ತಿರುಗಿಸಿಕೊಳ್ಳುವಂತೆ ಮಾಡಿದರು. ಇಸ್ಲಾಮೀ ಸೇನೆ ಅಸ್ತವ್ಯಸ್ತಗೊಂಡಿತು. ಆ ವೇಳೆ ಪ್ರವಾದಿವರ್ಯರು(ಸ) ಮತ್ತು ಪ್ರಾಣವನ್ನು ಪಣಕ್ಕಿಟ್ಟ ಅವರ ಕೆಲವೇ ಕೆಲವು ಅನುಚರರು ವಿಚಲಿತ ರಾಗದೆ ನಿಂತಿದ್ದರು. ಅವರ ದೃಢಚಿತ್ತತೆಯಿಂದಾಗಿಯೇ ಸೇನೆಗೆ ಮತ್ತೊಮ್ಮೆ ಸಜ್ಜು ಗೊಳ್ಳಲು ಸಾಧ್ಯವಾಯಿತು. ಕೊನೆಗೆ ಮುಸ್ಲಿಮರೇ ಜಯಶಾಲಿಗಳಾದರು. ಅನ್ಯಥಾ ಮಕ್ಕಾ ವಿಜಯದಿಂದ ಗಳಿಸಿರುವುದಕ್ಕಿಂತ ಹೆಚ್ಚಿನದನ್ನು ಹುನೈನ್ ಯುದ್ಧದ ಮೂಲಕ ಕಳೆದು ಕೊಳ್ಳಬೇಕಾಗುತ್ತಿತ್ತು.

26. ಅನಂತರ ಅಲ್ಲಾಹನು ತನ್ನ ಪ್ರಶಾಂತತೆಯನ್ನು ತನ್ನ ರಸೂಲರ ಮೇಲೂ ಸತ್ಯವಿಶ್ವಾಸಿಗಳ ಮೇಲೂ ಇಳಿಸಿದನು ಮತ್ತು ನಿಮಗೆ ಕಾಣದಂತಹ ಸೈನ್ಯವನ್ನು ಇಳಿಸಿ ಸತ್ಯನಿಷೇಧಿಗಳನ್ನು ಶಿಕ್ಷಿಸಿದನು. ಸತ್ಯವನ್ನು ನಿಷೇಧಿಸುವವರಿಗೆ ಇದೇ ಪ್ರತಿಫಲ.

ثُمَّ اَنْزَلَ اللّٰهُ سَكِيْنَتَهٗ عَلٰى رَسُوْلِهٖ وَعَلَى الْمُؤْمِنِيْنَ وَاَنْزَلَ جُنُوْدًا لَّمْ تَرَوْهَا وَعَذَّبَ الَّذِيْنَ كَفَرُوْا ؕ وَذٰلِكَ جَزَآءُ الْكٰفِرِيْنَ ﴿۲۶﴾

27. ಹೀಗೆ ಶಿಕ್ಷೆಕೊಟ್ಟ ಬಳಿಕ ಅಲ್ಲಾಹನು ತನಗಿಷ್ಟವಿದ್ದವರಿಗೆ ಪಶ್ಚಾತ್ತಾಪ ಪಡುವ ಅನುಗ್ರಹ ನೀಡುತ್ತಾನೆ.[12] (ಇದನ್ನೂ ನೀವು ಕಂಡು ಕೊಂಡಿರಿ.) ಅಲ್ಲಾಹನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

ثُمَّ يَتُوْبُ اللّٰهُ مِنْۢ بَعْدِ ذٰلِكَ عَلٰى مَنْ يَّشَآءُ ؕ وَاللّٰهُ غَفُوْرٌ رَّحِيْمٌ ﴿۲۷﴾

28. ಓ ಸತ್ಯವಿಶ್ವಾಸಿಗಳೇ, ಬಹುದೇವವಿಶ್ವಾಸಿಗಳು ಅಶುದ್ಧರಾಗಿರುತ್ತಾರೆ.* ಆದುದರಿಂದ ಈ ವರ್ಷದ ಬಳಿಕ ಅವರು ಮಸ್ಜಿದುಲ್ ಹರಾಮಿನ ಬಳಿ ಸುಳಿಯಬಾರದು.[13] ನಿಮಗೆ ದಾರಿದ್ರ್ಯದ ಭಯ ವಿದ್ದರೆ ಅಲ್ಲಾಹನಿಚ್ಛಿಸಿದರೆ ನಿಮ್ಮನ್ನು ತನ್ನ ಅನುಗ್ರಹದಿಂದ ಸಂಪನ್ನಗೊಳಿಸಲೂಬಹುದು. ಅಲ್ಲಾಹನು ಸರ್ವಜ್ಞನೂ ಯುಕ್ತಿ ಪೂರ್ಣನೂ ಆಗಿರುತ್ತಾನೆ.

يٰۤاَيُّهَا الَّذِيْنَ اٰمَنُوْۤا اِنَّمَا الْمُشْرِكُوْنَ نَجَسٌ فَلَا يَقْرَبُوا الْمَسْجِدَ الْحَرَامَ بَعْدَ عَامِهِمْ هٰذَا ۚ وَاِنْ خِفْتُمْ عَيْلَةً فَسَوْفَ يُغْنِيْكُمُ اللّٰهُ مِنْ فَضْلِهٖۤ اِنْ شَآءَ ؕ اِنَّ اللّٰهَ عَلِيْمٌ حَكِيْمٌ ﴿۲۸﴾

29. ಅಲ್ಲಾಹ್ ಹಾಗೂ ಅಂತಿಮ ದಿವಸದ ಮೇಲೆ ವಿಶ್ವಾಸವಿರಿಸದ, ಅಲ್ಲಾಹ್ ಹಾಗೂ ಅವನ ರಸೂಲರು ನಿಷಿದ್ಧವೆಂದು ಸಾರಿರುವುದನ್ನು ನಿಷಿದ್ಧಮಾಡಿಕೊಳ್ಳದ ಮತ್ತು ಸತ್ಯಧರ್ಮವನ್ನು ತಮ್ಮ ಧರ್ಮವನ್ನಾಗಿ ಮಾಡಿಕೊಳ್ಳದ ಗ್ರಂಥದವರು ತಮ್ಮ ಕೈಯಿಂದಲೇ 'ಜಿಝಿಯ' (ರಕ್ಷಣಾಕರ) ಕೊಟ್ಟು ಅಧೀನ ರಾಗುವವರೆಗೂ (ಅವರೊಡನೆ ಹೋರಾಡಿರಿ.)[14]

قَاتِلُوا الَّذِيْنَ لَا يُؤْمِنُوْنَ بِاللّٰهِ وَلَا بِالْيَوْمِ الْاٰخِرِ وَلَا يُحَرِّمُوْنَ مَا حَرَّمَ اللّٰهُ وَرَسُوْلُهٗ وَلَا يَدِيْنُوْنَ دِيْنَ الْحَقِّ مِنَ الَّذِيْنَ اُوْتُوا الْكِتٰبَ حَتّٰى يُعْطُوا الْجِزْيَةَ عَنْ يَّدٍ وَّهُمْ صٰغِرُوْنَ ﴿۲۹﴾

30. 'ಉಝೈರ್' ದೇವಪುತ್ರನೆಂದು ಯಹೂದಿಯರು ಹೇಳುತ್ತಾರೆ.

وَقَالَتِ الْيَهُوْدُ عُزَيْرُ ۨابْنُ اللّٰهِ وَقَالَتِ

12. ಹುನೈನ್ ಯುದ್ಧದಲ್ಲಿ ಸೋಲನುಭವಿಸಿದ ಸತ್ಯನಿಷೇಧಿಗಳೆಲ್ಲರೂ ಆ ಬಳಿಕ ಇಸ್ಲಾಮ್ ಸ್ವೀಕರಿಸಿದರು. ಅದರ ಕಡೆಗೇ ಈ ಮೂಲಕ ಸೂಚಿಸಲಾಗಿದೆ.

*ಅವರ ವಿಶ್ವಾಸ, ನಡತೆ, ಕರ್ಮಗಳು ಹಾಗೂ ಅಜ್ಞಾನಜನ್ಯ ಜೀವನ ಪದ್ಧತಿಯೂ ಅಶುದ್ಧವಾಗಿದೆ.

13. ಅರ್ಥಾತ್- ಮುಂದೆ ಅವರ ಪಾಲಿಗೆ ಹಜ್ಜ್ ಮತ್ತು ಅಲ್ಲಾಹನ ಭವನದ ಸಂದರ್ಶನ ಮಾತ್ರವಲ್ಲದೆ ಮಸ್ಜಿದುಲ್ ಹರಾಮ್‌ನ ಆವರಣದೊಳಗೆ ಪ್ರವೇಶವೂ ನಿಷಿದ್ಧವಾಗಿದೆ.

14. ಅರ್ಥಾತ್ ಅವರು ವಿಶ್ವಾಸ ತಾಳಬೇಕು ಮತ್ತು ಸತ್ಯ ಧರ್ಮದ ಅನುಯಾಯಿಗಳಾಗಿ ಮಾರ್ಪಡಬೇಕು ಎಂಬುದು ಹೋರಾಟದ ಉದ್ದೇಶವಲ್ಲ. ಅವರ ಆಡಳಿತ ಕೊನೆಗೊಳ್ಳಬೇಕು ಎಂಬುದು ಇದರ ಉದ್ದೇಶ. ಅವರು ಭೂಮಿಯಲ್ಲಿ ಆಜ್ಞಾಧಿಕಾರಿಗಳಾಗಿಯೂ ಆದೇಶ ಕೊಡುವವರಾಗಿಯೂ ಇರಕೂಡದು. ಭೂಮಿಯ ಸುವ್ಯವಸ್ಥೆ ಕಾಪಾಡುವ, ಆದೇಶಕೊಡುವ ಮತ್ತು ನಾಯಕತ್ವದ ಅಧಿಕಾರಗಳು ಸತ್ಯಧರ್ಮದ ಅನುಯಾಯಿಗಳ ಬಳಿ ಇರಬೇಕು. ಗ್ರಂಥದವರು ಅವರ ಕೈಕೆಳಗೆ ಅಧೀನರಾಗಿ ಇರಬೇಕು. ಅನಂತರ ಅವರ ಪೈಕಿ ಯಾರು ಬೇಕಾದರೂ ಸ್ವಇಚ್ಛೆಯಿಂದ ಮುಸ್ಲಿಮರಾಗಬಹುದು. ಅನ್ಯಥಾ ಅವರು ಜಿಝಿಯಾ ತೆರುತ್ತಿರಬೇಕು. ಇಸ್ಲಾಮೀ ಸರ್ಕಾರ ದಿಮ್ಮಿಗಳಿಗೆ ನೀಡುವ ಸುರಕ್ಷೆಗೆ ಪ್ರತಿಯಾಗಿ ಈ ಜಿಝಿಯಾ ತೆರಿಗೆಯನ್ನು ಪಡೆಯಲಾಗುತ್ತದೆ. ಅಲ್ಲದೆ ಅವರು ಅಧೀನರಾಗಿರಲು ಸಮ್ಮತಿಸುತ್ತಾರೆ ಎಂಬುದನ್ನು ಸೂಚಿಸಲಿಕ್ಕೂ ಇದೊಂದು ಸಂಕೇತವಾಗಿದೆ.

ಮಸೀಹ್ (ಈಸಾ) ದೇವ ಪುತ್ರನೆಂದು ಕ್ರೈಸ್ತರು ಹೇಳುತ್ತಾರೆ. ಅವರು ತಮಗಿಂತ ಹಿಂದೆ ಸತ್ಯನಿಷೇಧಿಗಳಾಗಿದ್ದವರನ್ನು ಅನುಕರಿಸುತ್ತ ತಮ್ಮ ಬಾಯಿಗಳಿಂದ ಹೊರಡಿಸುವ ಅಸಂಬದ್ಧ ಮಾತುಗಳಿವು. ದೇವನ ಪ್ರಹಾರವಿದೆ ಅವರ ಮೇಲೆ. ಅವರು ಎಲ್ಲಿಂದ ಮೋಸಹೋಗುತ್ತಿರುವರೋ!

النَّصٰرَى الْمَسِيْحُ ابْنُ اللّٰهِ ؕ ذٰلِكَ قَوْلُهُمْ
بِاَفْوَاهِهِمْ ۚ يُضَاهِـُٔوْنَ قَوْلَ الَّذِيْنَ كَفَرُوْا
مِنْ قَبْلُ ؕ قٰتَلَهُمُ اللّٰهُ ۚ اَنّٰى يُؤْفَكُوْنَ ۝٣٠

31. ಅವರು ಅಲ್ಲಾಹನನ್ನು ಹೊರತು ತಮ್ಮ ವಿದ್ವಾಂಸರನ್ನೂ ಸಂತರನ್ನೂ ತಮ್ಮ ಪ್ರಭುಗಳನ್ನಾಗಿ ಮಾಡಿಕೊಂಡಿರುತ್ತಾರೆ[15] ಇದೇ ರೀತಿಯಲ್ಲಿ ಮರ್ಯಮರ ಪುತ್ರ ಮಸೀಹರನ್ನೂ (ಪ್ರಭುವಾಗಿ ಮಾಡಿಕೊಂಡಿದ್ದಾರೆ.) ವಸ್ತುತಃ ಅವರಿಗೆ ಏಕದೇವ ನನ್ನು ಹೊರತು ಇನ್ನಾರ ದಾಸ್ಯ ಆರಾಧನೆಯನ್ನೂ ಮಾಡಲು ಅಪ್ಪಣೆ ಕೊಡಲಾಗಿಲ್ಲ. ಆತನ ಹೊರತು ಅನ್ಯ-ಆರಾಧ್ಯರಾರೂ ಇಲ್ಲ. ಅವರಾಡುತ್ತಿರುವ ದೇವಸಹಭಾಗಿತ್ವ ಪರ ಮಾತುಗಳಿಂದ ಅವನು ಅತ್ಯಂತ ಪರಿಶುದ್ಧನು.

اِتَّخَذُوْۤا اَحْبَارَهُمْ وَرُهْبَانَهُمْ اَرْبَابًا مِّنْ
دُوْنِ اللّٰهِ وَالْمَسِيْحَ ابْنَ مَرْيَمَ ۚ وَمَاۤ
اُمِرُوْۤا اِلَّا لِيَعْبُدُوْۤا اِلٰهًا وَّاحِدًا ۚ لَاۤ اِلٰهَ
اِلَّا هُوَ ؕ سُبْحٰنَهٗ عَمَّا يُشْرِكُوْنَ ۝٣١

32. ಅವರು ಅಲ್ಲಾಹನ ಜ್ಯೋತಿಯನ್ನು ತಮ್ಮ ಬಾಯಿಗಳಿಂದ ಊದಿ ನಂದಿಸಿಬಿಡಲು ಇಚ್ಛಿಸುತ್ತಾರೆ. ಆದರೆ ಅಲ್ಲಾಹ್ ತನ್ನ ಜ್ಯೋತಿಯನ್ನು ಪರಿಪೂರ್ಣಗೊಳಿಸದೆ ಬಿಡುವವನಲ್ಲ. ಇದು ಸತ್ಯನಿಷೇಧಿಗಳಿಗೆ ಎಷ್ಟೇ ಅಪ್ರಿಯವಾಗಲಿ.

يُرِيْدُوْنَ اَنْ يُّطْفِـُٔوْا نُوْرَ اللّٰهِ بِاَفْوَاهِهِمْ
وَيَاْبَى اللّٰهُ اِلَّاۤ اَنْ يُّتِمَّ نُوْرَهٗ وَلَوْ
كَرِهَ الْكٰفِرُوْنَ ۝٣٢

33. ತನ್ನ ರಸೂಲರನ್ನು ಸನ್ಮಾರ್ಗ ಮತ್ತು ಸತ್ಯಧರ್ಮದೊಂದಿಗೆ ಕಳುಹಿಸಿದಾತನು ಅಲ್ಲಾಹನೇ. (ಇದು) ಅದನ್ನು ಸಕಲ ಧರ್ಮಗಳ ಮೇಲೆ ಉತ್ಥಾನಗೊಳಿಸಲಿಕ್ಕಾಗಿ.[16] 'ಬಹುದೇವವಿಶ್ವಾಸಿ'ಗಳಿಗೆ ಇದು ಎಷ್ಟೇ ಅಪ್ರಿಯವಾಗಿರಲಿ.

هُوَ الَّذِيْۤ اَرْسَلَ رَسُوْلَهٗ بِالْهُدٰى وَ
دِيْنِ الْحَقِّ لِيُظْهِرَهٗ عَلَى الدِّيْنِ كُلِّهٖ ۙ
وَلَوْ كَرِهَ الْمُشْرِكُوْنَ ۝٣٣

15. ಪ್ರವಾದಿವಚನದ ಮೂಲಕ ತಿಳಿದುಬರುವುದೇನೆಂದರೆ ಮೊದಲು ಕ್ರೈಸ್ತರಾಗಿದ್ದ ಅದಿ ಬಿನ್ ಹಾತಿಮ್ ಪ್ರವಾದಿವರ್ಯರ(ಸ) ಬಳಿ ಬಂದು ಇಸ್ಲಾಮ್ ಸ್ವೀಕರಿಸಿದ ಬಳಿಕ, "ಈ ಸೂಕ್ತದಲ್ಲಿ ನಮ್ಮ ಮೇಲೆ ವಿದ್ವಾಂಸರನ್ನು ಮತ್ತು ಸಂತರನ್ನು ದೇವರುಗಳನ್ನಾಗಿ ಮಾಡಿರುವ ಆರೋಪ ಹೊರಿಸಲಾಗಿದೆ. ಇದರ ಸತ್ಯಾಂಶವೇನು?" ಎಂದು ಕೇಳಿದರು. ಪ್ರವಾದಿವರ್ಯರು(ಸ) ಉತ್ತರಿಸುತ್ತಾ ಹೇಳಿದರು, "ಅವರು ನಿಷೇಧಿಸುವುದನ್ನು ನೀವು ನಿಮ್ಮ ಪಾಲಿಗೆ ನಿಷಿದ್ಧಗೊಳಿಸಿಕೊಳ್ಳುತ್ತೀರಿ. ಅವರು ಧರ್ಮಸಮ್ಮತಗೊಳಿಸುವುದನ್ನೂ ನೀವು ನಿಮ್ಮ ಪಾಲಿಗೆ ಧರ್ಮಸಮ್ಮತಗೊಳಿಸಿಕೊಳ್ಳುತ್ತೀರಿ. ಇದು ನಿಜವಲ್ಲವೇ?" "ಹೌದು ಹಾಗೆ ನಾವು ಮಾಡುತ್ತೇವೆ" ಎಂದು ಅವರು ಹೇಳಿದರು. ಅದಕ್ಕೆ ಪ್ರವಾದಿವರ್ಯರು(ಸ), "ಅವರನ್ನು ದೇವರಾಗಿ ಮಾಡಿಕೊಳ್ಳುವುದರ ಅರ್ಥ ಇದುವೇ ಆಗಿದೆ" ಎಂದು ಹೇಳಿದರು. ಗ್ರಂಥದ ಆಧಾರವಿಲ್ಲದೆ ಯಾರಾದರೂ ಮನುಷ್ಯರ ಜೀವನಕ್ಕೆ ಸಿಂಧು ಅಸಿಂಧುಗಳ ಮೇರೆಯನ್ನು ಗೊತ್ತು ಪಡಿಸುವುದು ವಾಸ್ತವದಲ್ಲಿ ತನ್ನನ್ನು ದೇವತ್ವದ ಸ್ಥಾನದಲ್ಲಿ ಕುಳ್ಳಿರಿಸುವುದಕ್ಕೆ ಸಮಾನವಾಗಿದೆ. ಅವರ ವಿಧಿನಿರ್ಣಯದ ಅಧಿಕಾರವನ್ನು ಸಮ್ಮತಿಸುವುದು ವಾಸ್ತವದಲ್ಲಿ ಅವರನ್ನೇ ದೇವರಾಗಿ ಮಾಡಿಕೊಂಡಂತೆ ಎಂದು ಇದರಿಂದ ವ್ಯಕ್ತವಾಗುತ್ತದೆ.

16. 'ಅದ್ದೀನ್' ಎಂಬ ಪದವನ್ನು ನಾವು ಧರ್ಮ ಎಂದು ಅನುವಾದಿಸಿದ್ದೇವೆ. ಅರಬಿ ಭಾಷೆಯಲ್ಲಿ 'ದೀನ್' ಎಂಬ ಶಬ್ದ ಜೀವನ ವ್ಯವಸ್ಥೆ ಅಥವಾ ಬದುಕಿನ ಪದ್ಧತಿಗೆ ಉಪಯೋಗಿಸಲ್ಪಡುತ್ತದೆ. ಅದರ ನಿರ್ಮಾತೃವನ್ನು ಅನುಸರಣೆಯೋಗ್ಯವೆಂದು ಬಗೆದು ಅನುಸರಿಸಬೇಕಾಗುತ್ತದೆ. ಒಟ್ಟಿನಲ್ಲಿ ಪ್ರವಾದಿಗಳ ಆಗಮನೋದ್ದೇಶ ಅವರು ದೇವನ ವತಿಯಿಂದ ತಂದಿರುವ ಸನ್ಮಾರ್ಗ ಮತ್ತು ಸದ್ಧರ್ಮವನ್ನು 'ದೀನ್'ನ

34. ಓ ಸತ್ಯವಿಶ್ವಾಸಿಗಳೇ, ಗ್ರಂಥದವರ ಅಧಿಕಾಂಶ ವಿದ್ವಾಂಸರೂ ಸಂತರೂ ಜನರ ಸಂಪತ್ತನ್ನು ಅನುಚಿತ ವಿಧಾನಗಳಿಂದ ಕಬಳಿಸುತ್ತಾರೆ ಮತ್ತು ಅವರನ್ನು ಅಲ್ಲಾಹನ ಮಾರ್ಗದಿಂದ ತಡೆಯುತ್ತಾರೆ. ಚಿನ್ನವನ್ನೂ ಬೆಳ್ಳಿಯನ್ನೂ ಸಂಗ್ರಹಿಸಿಟ್ಟು ಅವುಗಳನ್ನು ದೇವ ಮಾರ್ಗದಲ್ಲಿ ಖರ್ಚು ಮಾಡದವರಿಗೆ ವೇದನಾಯುಕ್ತ ಯಾತನೆಯ ಸುವಾರ್ತೆ ನೀಡಿರಿ.

يَٰٓأَيُّهَا ٱلَّذِينَ ءَامَنُوٓا۟ إِنَّ كَثِيرًا مِّنَ ٱلْأَحْبَارِ
وَٱلرُّهْبَانِ لَيَأْكُلُونَ أَمْوَٰلَ ٱلنَّاسِ
بِٱلْبَٰطِلِ وَيَصُدُّونَ عَن سَبِيلِ ٱللَّهِ ۗ
وَٱلَّذِينَ يَكْنِزُونَ ٱلذَّهَبَ وَٱلْفِضَّةَ
وَلَا يُنفِقُونَهَا فِى سَبِيلِ ٱللَّهِ فَبَشِّرْهُم
بِعَذَابٍ أَلِيمٍ ﴿٣٤﴾

35. ಈ ಚಿನ್ನ-ಬೆಳ್ಳಿಗಳ ಮೇಲೆ ನರಕಾಗ್ನಿಯನ್ನು ಉರಿಸಲಾಗುವುದು. ತರುವಾಯ ಅದರಿಂದಲೇ ಅವರ ಹಣೆಗಳಿಗೂ ಪಾರ್ಶ್ವಗಳಿಗೂ ಬೆನ್ನುಗಳಿಗೂ ಬರೆ ಹಾಕಲಾಗುವುದು. "ನೀವು ನಿಮಗಾಗಿ ಸಂಗ್ರಹಿಸಿಟ್ಟಿದ್ದ ಸಂಪತ್ತು ಇದುವೇ, ಈಗ ನೀವು ಕೂಡಿಹಾಕಿದ್ದ ಸಂಪತ್ತನ್ನು ಸವಿಯಿರಿ" (ಎನ್ನಲಾಗುವುದು.)

يَوْمَ يُحْمَىٰ عَلَيْهَا فِى نَارِ جَهَنَّمَ فَتُكْوَىٰ
بِهَا جِبَاهُهُمْ وَجُنُوبُهُمْ وَظُهُورُهُمْ ۖ
هَٰذَا مَا كَنَزْتُمْ لِأَنفُسِكُمْ فَذُوقُوا۟
مَا كُنتُمْ تَكْنِزُونَ ﴿٣٥﴾

36. ನಿಶ್ಚಯವಾಗಿಯೂ ಅಲ್ಲಾಹನು ಭೂಮಿ-ಆಕಾಶಗಳನ್ನು ಸೃಷ್ಟಿಸಿದಂದಿನಿಂದಲೂ ಅಲ್ಲಾಹನ ಲಿಖಿತದಲ್ಲಿ ತಿಂಗಳುಗಳ ಸಂಖ್ಯೆ ಹನ್ನೆರಡೇ ಇದೆ. ಅವುಗಳ ಪೈಕಿ ನಾಲ್ಕು ತಿಂಗಳುಗಳು ನಿಷಿದ್ಧವಾಗಿವೆ.[17] ಇದುವೇ ಸರಿಯಾದ ನಿಯಮ. ಆದುದರಿಂದ ಈ ನಾಲ್ಕು ತಿಂಗಳುಗಳಲ್ಲಿ ನಿಮ್ಮ ಮೇಲೆ ಅಕ್ರಮವೆಸಗಬೇಡಿರಿ ಮತ್ತು ಬಹುದೇವವಿಶ್ವಾಸಿಗಳೆಲ್ಲರೂ ಒಟ್ಟಾಗಿ ನಿಮ್ಮೊಡನೆ ಹೋರಾಟ ನಡೆಸುವಂತೆ ನೀವೂ ಒಟ್ಟಾಗಿ ಅವರೊಡನೆ ಹೋರಾಟ ನಡೆಸಿರಿ.[18] ಅಲ್ಲಾಹನು ಧರ್ಮನಿಷ್ಠರೊಂದಿಗೇ ಇದ್ದಾನೆಂಬುದನ್ನು ಅರಿಯಿರಿ.

إِنَّ عِدَّةَ ٱلشُّهُورِ عِندَ ٱللَّهِ ٱثْنَا عَشَرَ
شَهْرًا فِى كِتَٰبِ ٱللَّهِ يَوْمَ خَلَقَ ٱلسَّمَٰوَٰتِ
وَٱلْأَرْضَ مِنْهَآ أَرْبَعَةٌ حُرُمٌ ۚ ذَٰلِكَ
ٱلدِّينُ ٱلْقَيِّمُ ۚ فَلَا تَظْلِمُوا۟ فِيهِنَّ
أَنفُسَكُمْ ۚ وَقَٰتِلُوا۟ ٱلْمُشْرِكِينَ كَآفَّةً
كَمَا يُقَٰتِلُونَكُمْ كَآفَّةً ۚ وَٱعْلَمُوٓا۟ أَنَّ ٱللَّهَ
مَعَ ٱلْمُتَّقِينَ ﴿٣٦﴾

37. 'ನಸೀ' ಎಂಬುದು ಸತ್ಯನಿಷೇಧದಲ್ಲಿ ಇನ್ನೊಂದು ಹೆಚ್ಚಳ.

إِنَّمَا ٱلنَّسِىٓءُ زِيَادَةٌ فِى ٱلْكُفْرِ ۖ يُضَلُّ بِهِ

ಸ್ಥಾನದಲ್ಲಿರುವ ಇತರೆಲ್ಲ ವ್ಯವಸ್ಥೆ ಮತ್ತು ಪದ್ಧತಿಗಳ ಮೇಲೆ ಪ್ರಬಲಗೊಳಿಸುವುದಾಗಿದೆ ಎಂದು ಈ ಸೂಕ್ತದಲ್ಲಿ ತಿಳಿಸಲಾಗಿದೆ. ತಾವು ತಂದಿರುವ ಜೀವನ ವ್ಯವಸ್ಥೆಯನ್ನು ಇತರ ವ್ಯವಸ್ಥೆಯ ಆಶ್ರಯದಲ್ಲಿ ಅಧೀನವಾಗಿರಿಸಲು ಮತ್ತು ಆ ವ್ಯವಸ್ಥೆಯು ನೀಡಿರುವ ರಿಯಾಯಿತಿ ಮತ್ತು ಅವಕಾಶಗಳ ಮಟ್ಟಕ್ಕೆ ಅದನ್ನು ಹೊಂದಿಕೊಳ್ಳುವಂತೆ ಮಾಡಲಿಕ್ಕಾಗಿ ಯಾವ ಪ್ರವಾದಿಯೂ ಬಂದಿರಲಿಲ್ಲ. ಅವರು ಭೂಮಿ-ಆಕಾಶಗಳ ಅಧಿಪತಿಯ ಪ್ರತಿನಿಧಿಗಳಾಗಿ ಬರುತ್ತಾರೆ ಮತ್ತು ತಮ್ಮೊಡೆಯನ ಸತ್ಯವ್ಯವಸ್ಥೆ ಪ್ರಬಲವಾಗುವುದನ್ನು ಅವರು ಕಾಣಬಯಸುತ್ತಾರೆ. ಲೋಕದಲ್ಲಿ ಇತರ ಜೀವನ ವ್ಯವಸ್ಥೆಯಿದ್ದರೂ ಅದು ದೈವಿಕ ವ್ಯವಸ್ಥೆಯು ನೀಡಿರುವ ಅವಕಾಶಗಳ ಮಿತಿಗಳಲ್ಲಿರಬೇಕು. ಜಿಝಿಯಾ ಪಾವತಿಸಿದಾಗ ದಿಮ್ಮಿಗಳಿಗೆ ತಮ್ಮ ಜೀವನ ಪದ್ಧತಿಯನ್ನು ಪಾಲಿಸಲು ಅವಕಾಶವಿರುವಂತಿರಬೇಕು. ಅದರ ಸ್ಥಿತಿ, ಸತ್ಯನಿಷೇಧಿಗಳು ಪ್ರಬಲರಾಗಿ ಸದ್ಧರ್ಮದ ವಕ್ತಾರರು ದಿಮ್ಮಿಗಳಾಗಿ ಮಾರ್ಪಡುವಂತಾಗಬಾರದು.

17. ನಿಷಿದ್ಧ ತಿಂಗಳುಗಳೆಂದರೆ ಹಜ್ಜ್ ನಿರ್ವಹಿಸಲಿಕ್ಕಾಗಿ ಇರುವ ದುಲ್‌ಕಅದ್, ದುಲ್‌ಹಜ್ಜ್ ಮತ್ತು ಮುಹರ್ರಮ್ ಹಾಗೂ ಉಮ್ರಾಕ್ಕಾಗಿ ಇರುವ ರಜಬ್ ತಿಂಗಳು.

18. ಅರ್ಥಾತ್- ಈ ತಿಂಗಳುಗಳಲ್ಲೂ ಬಹುದೇವಾರಾಧಕರು ಹೋರಾಟವನ್ನು ನಿಲ್ಲಿಸದಿದ್ದರೆ, ಅವರು ಸಂಘಟಿತರಾಗಿ ನಿಮ್ಮ ವಿರುದ್ಧ ಹೋರಾಡುವಂತೆ, ನೀವೂ ಸಂಘಟಿತರಾಗಿ ಅವರ ವಿರುದ್ಧ ಹೋರಾಡಿರಿ. ಅಲ್‌ಬಕರಃ ಅಧ್ಯಾಯದ 194ನೆಯ ಸೂಕ್ತ, ಈ ಸೂಕ್ತದ ವಿವರಣೆಯಾಗಿದೆ.

ಇದರಿಂದ ಸತ್ಯನಿಷೇಧಿಗಳು ಪಥಭ್ರಷ್ಟತೆಯಲ್ಲಿ ಸಿಲುಕಿಸಲ್ಪಡುತ್ತಾರೆ. ಅಲ್ಲಾಹನು ನಿಷಿದ್ಧಗೊಳಿಸಿದ ತಿಂಗಳುಗಳ ಸಂಖ್ಯೆ ಭರ್ತಿಯಾಗುವಂತೆ ಹಾಗೂ ಅಲ್ಲಾಹನು 'ನಿಷಿದ್ಧ'ಗೊಳಿಸಿದುದನ್ನು 'ಧರ್ಮಸಮ್ಮತ'ವನ್ನಾಗಿ ಮಾಡಿಕೊಳ್ಳಲಿಕ್ಕಾಗಿ ಒಂದು ವರ್ಷ, ಒಂದು ತಿಂಗಳನ್ನು ಧರ್ಮಬದ್ಧಗೊಳಿಸಿಕೊಳ್ಳುತ್ತಾರೆ ಮತ್ತು ಇನ್ನೊಂದು ವರ್ಷ ಅದನ್ನು 'ನಿಷಿದ್ಧ'ಗೊಳಿಸಿಕೊಳ್ಳುತ್ತಾರೆ.[19] ಅವರ ದುಷ್ಕರ್ಮಗಳನ್ನು ಅವರಿಗೆ ಮನೋಹರಗೊಳಿಸಲಾಗಿದೆ. ಅಲ್ಲಾಹನು ಸತ್ಯನಿಷೇಧಿಗಳಿಗೆ ಮಾರ್ಗದರ್ಶನವನ್ನೀಯುವುದಿಲ್ಲ.

الَّذِينَ كَفَرُوا يُحِلُّونَهُ عَامًا وَيُحَرِّمُونَهُ عَامًا لِيُوَاطِئُوا عِدَّةَ مَا حَرَّمَ اللَّهُ فَيُحِلُّوا مَا حَرَّمَ اللَّهُ زُيِّنَ لَهُمْ سُوءُ أَعْمَالِهِمْ وَاللَّهُ لَا يَهْدِي الْقَوْمَ الْكَافِرِينَ ﴿٣٧﴾

38. ಓ ಸತ್ಯವಿಶ್ವಾಸಿಗಳೇ,[20] ಅಲ್ಲಾಹನ ಮಾರ್ಗದಲ್ಲಿ ಹೊರಡಲು ನಿಮ್ಮೊಡನೆ ಹೇಳಿದಾಗ ನೀವು ನೆಲಕ್ಕೆ ಅಂಟಿಕೊಂಡದ್ದೇಕೆ? ನೀವು ಪರಲೋಕಕ್ಕೆ ಪ್ರತಿಯಾಗಿ ಐಹಿಕ ಜೀವನವನ್ನು ಮೆಚ್ಚಿಕೊಂಡಿರಾ? ಹಾಗಿದ್ದರೆ ನಿಮಗೆ ತಿಳಿದಿರಲಿ! ಇಹಜೀವನದ ಈ ಸಾಮಾನು ಸಲಕರಣೆಗಳೆಲ್ಲ ಪರಲೋಕದಲ್ಲಿ ಅತ್ಯಲ್ಪವಾಗಿರುವುವು.

يَا أَيُّهَا الَّذِينَ آمَنُوا مَا لَكُمْ إِذَا قِيلَ لَكُمُ انْفِرُوا فِي سَبِيلِ اللَّهِ اثَّاقَلْتُمْ إِلَى الْأَرْضِ أَرَضِيتُمْ بِالْحَيَاةِ الدُّنْيَا مِنَ الْآخِرَةِ فَمَا مَتَاعُ الْحَيَاةِ الدُّنْيَا فِي الْآخِرَةِ إِلَّا قَلِيلٌ ﴿٣٨﴾

39. ನೀವು ಹೊರಡದಿದ್ದರೆ ಅಲ್ಲಾಹ್ ನಿಮಗೆ ವೇದನಾತ್ಮಕ ಶಿಕ್ಷೆ ಕೊಡುವನು ಮತ್ತು ನಿಮ್ಮ ಸ್ಥಾನದಲ್ಲಿ ಬೇರಾವುದಾದರೂ ಜನಾಂಗವನ್ನು ಎಬ್ಬಿಸುವನು. ನೀವು ಅವನಿಗೇನೂ ನಷ್ಟವನ್ನುಂಟು ಮಾಡಲಾರಿರಿ. ಅಲ್ಲಾಹನು ಪ್ರತಿಯೊಂದು ವಿಷಯದ ಸಾಮರ್ಥ್ಯವಿರುವವನು.

إِلَّا تَنْفِرُوا يُعَذِّبْكُمْ عَذَابًا أَلِيمًا وَيَسْتَبْدِلْ قَوْمًا غَيْرَكُمْ وَلَا تَضُرُّوهُ شَيْئًا وَاللَّهُ عَلَىٰ كُلِّ شَيْءٍ قَدِيرٌ ﴿٣٩﴾

40. ನೀವು ಪ್ರವಾದಿಯವರಿಗೆ ಸಹಾಯ ಮಾಡದಿದ್ದರೆ ಚಿಂತಿಲ್ಲ. ಸತ್ಯನಿಷೇಧಿಗಳು ಅವರನ್ನು ಹೊರ ಹಾಕಿದಾಗ, ಅವರು ಇಬ್ಬರ ಪೈಕಿ ಎರಡನೆಯವರಾಗಿದ್ದಾಗ, ಅವರಿಬ್ಬರೂ ಗುಹೆಯೊಳಗಿದ್ದಾಗ, ಅವರು ತಮ್ಮ ಸಂಗಾತಿಯೊಡನೆ, "ಖೇದಗೊಳ್ಳಬೇಡಿರಿ. ಅಲ್ಲಾಹ್

إِلَّا تَنْصُرُوهُ فَقَدْ نَصَرَهُ اللَّهُ إِذْ أَخْرَجَهُ الَّذِينَ كَفَرُوا ثَانِيَ اثْنَيْنِ إِذْ هُمَا فِي الْغَارِ إِذْ يَقُولُ لِصَاحِبِهِ لَا تَحْزَنْ إِنَّ اللَّهَ مَعَنَا

19. ಅರಬರಲ್ಲಿ ಎರಡು ವಿಧದ 'ನಸೀ' ಪ್ರಚಲಿತವಿತ್ತು. ಮೊದಲನೆಯದಾಗಿ ಯುದ್ಧ, ದರೋಡೆ, ಕೊಲೆಯ ಪ್ರತೀಕಾರ ಇತ್ಯಾದಿಗಳಿಗಾಗಿ ಅವರು ಯಾವುದಾದರೂ ನಿಷಿದ್ಧ ತಿಂಗಳನ್ನು ಧರ್ಮಸಮ್ಮತಗೊಳಿಸಿಕೊಳ್ಳುತ್ತಿದ್ದರು. ಅದಕ್ಕೆ ಪ್ರತಿಯಾಗಿ ಯಾವುದಾದರೂ ಧರ್ಮಸಮ್ಮತ ತಿಂಗಳನ್ನು ನಿಷಿದ್ಧಗೊಳಿಸಿ ತಿಂಗಳುಗಳ ಸಂಖ್ಯೆಯನ್ನು ಪೂರ್ತಿಗೊಳಿಸಿಕೊಳ್ಳುತ್ತಿದ್ದರು. ಎರಡನೆಯದಾಗಿ ಚಂದ್ರಮಾನ ವರ್ಷವನ್ನು ಸೌರಮಾನ ವರ್ಷದಲ್ಲಿ ಬದಲಾಯಿಸಲಿಕ್ಕಾಗಿ ಒಂದು ತಿಂಗಳನ್ನು ಅದರಲ್ಲಿ ಸೇರಿಸಿ ಬಿಡುತ್ತಿದ್ದರು. ಹಜ್ಜ್ ಸದಾ ಒಂದೇ ತಿಂಗಳಲ್ಲಿ ಬರಲು ಮತ್ತು ಚಂದ್ರಮಾನ ವರ್ಷದಂತೆ ವಿಭಿನ್ನ ಋತುಗಳಲ್ಲಿ ಹಜ್ಜ್ ಎದುರಾಗುವುದರಿಂದುಂಟಾಗುವ ತಾಪತ್ರಯಗಳನ್ನು ತಪ್ಪಿಸಲು ಅದರಿಂದ ಸಾಧ್ಯವಾಗುತ್ತಿತ್ತು. ಹೀಗೆ 33 ವರ್ಷಗಳ ಕಾಲ ಹಜ್ಜ್ ನಿಜವಾದ ಅವಧಿಗೆ ಪ್ರತಿಯಾಗಿ ಬೇರೆ ದಿನಾಂಕಗಳಲ್ಲೇ ನಡೆಯುತ್ತಾ ಬಂದಿತ್ತು. ಮೂವತ್ತನಾಲ್ಕನೆಯ ವರ್ಷದಲ್ಲಿ ಮಾತ್ರ ಒಮ್ಮೆ ಹಜ್ಜ್, ದುಲ್‌ಹಜ್ಜ್ 9 ಮತ್ತು 10ನೆಯ ತಾರೀಕಿನಂದೇ ನಡೆಯುತ್ತಿತ್ತು. ಪ್ರವಾದಿವರ್ಯರು(ಸ) ವಿದಾಯ ಹಜ್ಜ್ (ಹಜ್ಜತುಲ್ ವಿದಾಅ್) ನಿರ್ವಹಿಸಿದ ಸಂದರ್ಭದಲ್ಲಿ ಹಜ್ಜ್ ತನ್ನ ನಿಜವಾದ ದಿನಾಂಕಗಳಲ್ಲಿ ಬಂದಿತ್ತು. ಅಂದಿನಿಂದಲೇ 'ನಸೀ'ಯ ಪದ್ಧತಿಯನ್ನು ಕೊನೆಗೊಳಿಸಲಾಯಿತು.

20. ಈ ಸೂಕ್ತಗಳು 9ನೆಯ ರುಕೂಅ್‌ನ ಕೊನೆಯ ತನಕವೂ ತಬೂಕ್ ಯುದ್ಧಕ್ಕೆ ಸಿದ್ಧತೆ ನಡೆಸಲಾಗುತ್ತಿದ್ದ ಕಾಲದಲ್ಲಿ ಅವತೀರ್ಣಗೊಂಡಿತ್ತು.

ನಮ್ಮ ಜತೆಯಲ್ಲಿದ್ದಾನೆ"[21] ಎಂದು ಹೇಳುತ್ತಿದ್ದಾಗ ಅಲ್ಲಾಹ್ ಅವರಿಗೆ ಸಹಾಯ ಮಾಡಿರುತ್ತಾನೆ. ಆಗ ಅಲ್ಲಾಹ್ ಅವರ ಮೇಲೆ ತನ್ನ ಕಡೆಯಿಂದ ಮನಶ್ಶಾಂತಿಯನ್ನಿಳಿಸಿದನು ಮತ್ತು ನಿಮಗೆ ಕಾಣಿಸದ ಪಡೆಗಳ ಮೂಲಕ ಅವರಿಗೆ ನೆರವು ನೀಡಿದನು ಮತ್ತು ಸತ್ಯನಿಷೇಧಿಗಳ ವಚನವನ್ನು ಸೋಲಿಸಿದನು. ಅಲ್ಲಾಹನ ವಚನವಂತು ಉನ್ನತವಾಗಿಯೇ ಇದೆ. ಅಲ್ಲಾಹ್ ಮಹಾ ಪ್ರತಾಪಿಯೂ ಯುಕ್ತಿಪೂರ್ಣನೂ ಆಗಿರುತ್ತಾನೆ.

فَأَنزَلَ ٱللَّهُ سَكِينَتَهُۥ عَلَيْهِ وَأَيَّدَهُۥ بِجُنُودٍ
لَّمْ تَرَوْهَا وَجَعَلَ كَلِمَةَ ٱلَّذِينَ كَفَرُوا۟
ٱلسُّفْلَىٰ ۗ وَكَلِمَةُ ٱللَّهِ هِىَ ٱلْعُلْيَا ۗ وَٱللَّهُ
عَزِيزٌ حَكِيمٌ ﴿٤٠﴾

41. ಹಗುರವಾದ ಸ್ಥಿತಿಯಲ್ಲಾಗಲಿ, ಭಾರವಾದ ಸ್ಥಿತಿಯಲ್ಲಾಗಲಿ ಹೊರಡಿರಿ. ನಿಮ್ಮ ಧನಗಳಿಂದಲೂ ಜೀವಗಳಿಂದಲೂ ಅಲ್ಲಾಹನ ಮಾರ್ಗದಲ್ಲಿ ಹೋರಾಟ ನಡೆಸಿರಿ. ನೀವು ಅರಿತಿದ್ದರೆ ಇದು ನಿಮಗೆ ಉತ್ತಮ.

ٱنفِرُوا۟ خِفَافًا وَثِقَالًا وَجَٰهِدُوا۟ بِأَمْوَٰلِكُمْ
وَأَنفُسِكُمْ فِى سَبِيلِ ٱللَّهِ ۚ ذَٰلِكُمْ خَيْرٌ
لَّكُمْ إِن كُنتُمْ تَعْلَمُونَ ﴿٤١﴾

42. ಓ ಪೈಗಂಬರರೇ, ಲಾಭವು ಸುಲಭವಾಗಿ ಸಿಗುತ್ತಿದ್ದರೆ ಮತ್ತು ಪ್ರಯಾಣವು ಸುಗಮವಾಗಿರುತ್ತಿದ್ದರೆ ಅವರು ನಿಶ್ಚಯವಾಗಿಯೂ ನಿಮ್ಮನ್ನು ಹಿಂಬಾಲಿಸಲು ಸಿದ್ಧರಾಗುತ್ತಿದ್ದರು. ಆದರೆ ಈ ದಾರಿ ಅವರಿಗೆ ಬಹಳ ಕಠಿಣಕರವಾಗಿ ಬಿಟ್ಟಿತು.[22] ಈಗ ಅವರು "ನಮ್ಮಿಂದ ಹೊರಡಲು ಸಾಧ್ಯವಾಗುತ್ತಿದ್ದರೆ ಖಂಡಿತವಾಗಿಯೂ ನಿಮ್ಮೊಂದಿಗೆ ಬರುತ್ತಿದ್ದೆವು" ಎಂದು ಅಲ್ಲಾಹನಾಣೆ ಹಾಕುತ್ತ ಹೇಳುವರು. ಅವರು ತಮ್ಮನ್ನು ತಾವೇ ವಿನಾಶಕ್ಕೊಡ್ಡುತ್ತಿರುವರು. ಅವರು ಸುಳ್ಳುಗಾರರೆಂದು ಅಲ್ಲಾಹನು ಚೆನ್ನಾಗಿ ಬಲ್ಲನು.

لَوْ كَانَ عَرَضًا قَرِيبًا وَسَفَرًا قَاصِدًا
لَّٱتَّبَعُوكَ وَلَٰكِنۢ بَعُدَتْ عَلَيْهِمُ ٱلشُّقَّةُ ۚ
وَسَيَحْلِفُونَ بِٱللَّهِ لَوِ ٱسْتَطَعْنَا لَخَرَجْنَا
مَعَكُمْ يُهْلِكُونَ أَنفُسَهُمْ وَٱللَّهُ يَعْلَمُ
إِنَّهُمْ لَكَٰذِبُونَ ﴿٤٢﴾

43. ಓ ಪೈಗಂಬರರೇ, ಅಲ್ಲಾಹನು ನಿಮ್ಮನ್ನು ಕ್ಷಮಿಸಲಿ. ನೀವು ಅವರಿಗೇಕೆ ವಿನಾಯಿತಿ ನೀಡಿದಿರಿ? (ನೀವು ವಿನಾಯಿತಿ ನೀಡಬಾರದಿತ್ತು. ಆಗ) ಯಾರು ಸತ್ಯಸಂಧರೆಂಬುದು ನಿಮಗೆ ಪ್ರಕಟವಾಗುತ್ತಿತ್ತು. ಸುಳ್ಳುಗಾರರನ್ನು ನೀವು ತಿಳಿದುಕೊಳ್ಳುತ್ತಿದ್ದಿರಿ.

عَفَا ٱللَّهُ عَنكَ لِمَ أَذِنتَ لَهُمْ حَتَّىٰ يَتَبَيَّنَ
لَكَ ٱلَّذِينَ صَدَقُوا۟ وَتَعْلَمَ ٱلْكَٰذِبِينَ ﴿٤٣﴾

21. ಮಕ್ಕಾದ ಸತ್ಯನಿಷೇಧಿಗಳು ಪ್ರವಾದಿವರ್ಯರನ್ನು(ಸ) ವಧಿಸುವ ತೀರ್ಮಾನ ಮಾಡಿ ಬಿಟ್ಟಿದ್ದರು. ಅವರನ್ನು ಕೊಲ್ಲಲು ನಿಗದಿಪಡಿಸಲಾದ ರಾತ್ರಿಯಲ್ಲೇ ಪ್ರವಾದಿವರ್ಯರು(ಸ) ಮಕ್ಕಾದಿಂದ ಹೊರಟು ಮೂರು ದಿನ ಸೌರ್ ಗುಹೆಯಲ್ಲಿ ಅಡಗಿ ಕುಳಿತರು. ಅನಂತರ ಅವರು ಮದೀನಾಕ್ಕೆ ವಲಸೆ ಕೈಗೊಂಡರು. ಆ ವೇಳೆ ಹ. ಅಬೂಬಕರ್(ರ) ಮಾತ್ರ ಗುಹೆಯಲ್ಲಿ ಅವರ ಜತೆ ಗಿದ್ದರು. ಅದೇ ಸಂದರ್ಭವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

22. ಅರ್ಥಾತ್- ರೋಮ್‌ನಂತಹ ಶಕ್ತಿಯನ್ನು ಎದುರಿಸಬೇಕಾಗಿದೆ. ತೀವ್ರ ಬೇಸಿಗೆಯ ಕಾಲ ಬೇರೆ. ದೇಶದಲ್ಲಿ ಬರಗಾಲವಿದೆ. ಬಹಳ ಆಸೆ ಹೊತ್ತು ಕುಳಿತಿರುವ ಹೊಸ ವರ್ಷದ ಬೆಳೆಗಳು ಬಲಿತು ನಿಂತಿವೆ ಮತ್ತು ಬೆಳೆಕೊಯ್ಯುವ ದಿನಗಳು ಸಮೀಪವಿದೆ. ಇದನ್ನೆಲ್ಲಾ ಕಂಡು ಅವರಿಗೆ 'ತಬೂಕ್'ನ ಯಾತ್ರೆ ಅತ್ಯಂತ ತ್ರಾಸದಾಯಕವೆಂದು ಭಾಸವಾಯಿತು.

44. ಅಲ್ಲಾಹ್ ಮತ್ತು ನಿರ್ಣಾಯಕ ದಿನದ ಮೇಲೆ ವಿಶ್ವಾಸವಿಡುವವರು ತಮಗೆ ತನು-ಧನಗಳೊಂದಿಗೆ ಹೋರಾಟ ನಡೆಸುವುದರಿಂದ ವಿನಾಯಿತಿ ನೀಡಬೇಕೆಂದು ಎಂದೆಂದಿಗೂ ವಿನಂತಿಸಲಾರರು. ಅಲ್ಲಾಹನು ಧರ್ಮನಿಷ್ಠರನ್ನು ಚೆನ್ನಾಗಿ ಬಲ್ಲವನಾಗಿರುತ್ತಾನೆ.

لَا يَسْتَأْذِنُكَ الَّذِينَ يُؤْمِنُونَ بِاللَّهِ وَالْيَوْمِ
الْآخِرِ أَنْ يُجَاهِدُوا بِأَمْوَالِهِمْ وَأَنْفُسِهِمْ ۗ
وَاللَّهُ عَلِيمٌ بِالْمُتَّقِينَ ﴿٤٤﴾

45. ಅಲ್ಲಾಹ್ ಮತ್ತು ಅಂತಿಮ ದಿನದಲ್ಲಿ ವಿಶ್ವಾಸವಿರಿಸದವರು ಮಾತ್ರ ಇಂತಹ ನಿವೇದನೆಗಳನ್ನು ಮಾಡುತ್ತಾರೆ. ಅವರ ಹೃದಯಗಳಲ್ಲಿ ಸಂಶಯವಿದೆ. ಅವರು ತಮ್ಮ ಸಂಶಯಗಳಲ್ಲೇ ತಲ್ಲಣಗೊಳ್ಳುತ್ತಿದ್ದಾರೆ.

إِنَّمَا يَسْتَأْذِنُكَ الَّذِينَ لَا يُؤْمِنُونَ بِاللَّهِ
وَالْيَوْمِ الْآخِرِ وَارْتَابَتْ قُلُوبُهُمْ فَهُمْ
فِي رَيْبِهِمْ يَتَرَدَّدُونَ ﴿٤٥﴾

46. ಅವರ ಇಚ್ಛೆಯು ಹೊರಡುವುದೇ ಆಗಿರುತ್ತಿದ್ದರೆ ಅವರು ಅದಕ್ಕಾಗಿ ಸ್ವಲ್ಪವಾದರೂ ಸಿದ್ಧತೆ ಮಾಡುತ್ತಿದ್ದರು. ಆದರೆ ಅಲ್ಲಾಹನು ಅವರ ಏಳುವಿಕೆಯನ್ನು ಇಷ್ಟಪಟ್ಟಿರಲಿಲ್ಲ. ಆದುದರಿಂದ ಅವನು ಅವರನ್ನು ಉದಾಸೀನರನ್ನಾಗಿ ಮಾಡಿದನು. "ಕೂತಿರುವವರೊಂದಿಗೆ ನೀವು ಕೂತು ಕೊಳ್ಳಿರಿ" ಎನ್ನಲಾಯಿತು.

وَلَوْ أَرَادُوا الْخُرُوجَ لَأَعَدُّوا لَهُ عُدَّةً
وَلَٰكِنْ كَرِهَ اللَّهُ انْبِعَاثَهُمْ فَثَبَّطَهُمْ وَقِيلَ
اقْعُدُوا مَعَ الْقَاعِدِينَ ﴿٤٦﴾

47. ಅವರು ನಿಮ್ಮ ಸಂಗಡ ಹೊರಡುತ್ತಿದ್ದರೆ, ನಿಮ್ಮೊಳಗೆ ಕೇಡನ್ನೇ ಹೊರತು ಇನ್ನೇನನ್ನೂ ವರ್ಧಿಸುತ್ತಿರಲಿಲ್ಲ. ಅವರು ನಿಮ್ಮೊಳಗೆ ಗೊಂದಲಗಳನ್ನುಂಟು ಮಾಡಲಿಕ್ಕಾಗಿ ಶ್ರಮಿಸುತ್ತಿದ್ದರು. ಅವರ ಮಾತುಗಳಿಗೆ ಕಿವಿಗೊಡುವವರು ಇನ್ನೂ ನಿಮ್ಮ ಕೂಟದೊಳಗಿದ್ದಾರೆ. ಅಲ್ಲಾಹನು ಈ ಅಕ್ರಮಿಗಳನ್ನು ಚೆನ್ನಾಗಿ ಬಲ್ಲನು.

لَوْ خَرَجُوا فِيكُمْ مَا زَادُوكُمْ إِلَّا خَبَالًا
وَلَأَوْضَعُوا خِلَالَكُمْ يَبْغُونَكُمُ الْفِتْنَةَ وَفِيكُمْ
سَمَّاعُونَ لَهُمْ ۗ وَاللَّهُ عَلِيمٌ بِالظَّالِمِينَ ﴿٤٧﴾

48. ಇದಕ್ಕಿಂತ ಮೊದಲೂ ಅವರು 'ಗೊಂದಲ'ವನ್ನೆಬ್ಬಿಸಲು ಪ್ರಯತ್ನಿಸಿದ್ದರು. ಅವರ ಇಚ್ಛೆಗೆದುರಾಗಿ ಸತ್ಯವು ಪ್ರಕಟಗೊಂಡು ಅಲ್ಲಾಹನ ಕಾರ್ಯ ಜಯಪ್ರದವಾಗುವವರೆಗೂ ಅವರು ನಿಮ್ಮನ್ನು ಸೋಲಿಸಲಿಕ್ಕಾಗಿ ಅನೇಕ ವಿಧದ ಕುತಂತ್ರಗಳನ್ನು ನಡೆಸಿದ್ದರು.

لَقَدِ ابْتَغَوُا الْفِتْنَةَ مِنْ قَبْلُ وَقَلَّبُوا لَكَ
الْأُمُورَ حَتَّىٰ جَاءَ الْحَقُّ وَظَهَرَ أَمْرُ اللَّهِ
وَهُمْ كَارِهُونَ ﴿٤٨﴾

49. "ನನಗೆ ರಿಯಾಯಿತಿ ಕೊಟ್ಟು ಬಿಡಿರಿ. ನನ್ನನ್ನು 'ಪರೀಕ್ಷೆ'ಗೊಳಪಡಿಸಬೇಡಿರಿ." ಎಂದು ಹೇಳುವವರೂ ಅವರಲ್ಲಿದ್ದಾರೆ.- ತಿಳಿದುಕೊಳ್ಳಿರಿ. ಇವರು 'ಗೊಂದಲ'ದಲ್ಲೇ ಬಿದ್ದು ಕೊಂಡಿದ್ದಾರೆ. 'ನರಕ'ವು ಈ 'ಸತ್ಯನಿಷೇಧಿ'ಗಳನ್ನು ಸುತ್ತುವರಿದಿದೆ.

وَمِنْهُمْ مَنْ يَقُولُ ائْذَنْ لِي وَلَا تَفْتِنِّي ۚ
أَلَا فِي الْفِتْنَةِ سَقَطُوا ۗ وَإِنَّ جَهَنَّمَ
لَمُحِيطَةٌ بِالْكَافِرِينَ ﴿٤٩﴾

50. ನಿಮಗೆ ಹಿತವಾದರೆ ಅವರಿಗೆ ಖೇದವಾಗುತ್ತದೆ. ನಿಮಗೆ ವಿಪತ್ತುಂಟಾದರೆ ಅವರು ಮುಖ ತಿರುಗಿಸಿ ಆನಂದ ತುಂದಿಲರಾಗಿ ಮರಳುತ್ತಾರೆ ಮತ್ತು ನಾವು ನಮ್ಮ ವ್ಯವಹಾರವನ್ನು ಮೊದಲೇ ಸರಿಪಡಿಸಿಕೊಂಡುದು ಬಹಳ ಒಳಿತಾಯಿತೆನ್ನುತ್ತ ಸಾಗುತ್ತಾರೆ.

إِنْ تُصِبْكَ حَسَنَةٌ تَسُؤْهُمْ ۖ وَإِنْ تُصِبْكَ
مُصِيبَةٌ يَقُولُوا قَدْ أَخَذْنَا أَمْرَنَا مِنْ
قَبْلُ وَيَتَوَلَّوْا وَهُمْ فَرِحُونَ ﴿٥٠﴾

51. ಅವರೊಡನೆ ಹೇಳಿರಿ- ಅಲ್ಲಾಹನೇ ನಮಗಾಗಿ ಲಿಖಿತಗೊಳಿಸಿದುದರ ಹೊರತು ಬೇರಾವುದೂ (ಒಳಿತು ಅಥವಾ ಕೆಡುಕು) ನಮ್ಮನ್ನು ಬಾಧಿಸುವುದಿಲ್ಲ. ಅಲ್ಲಾಹನೇ ನಮ್ಮ ಮಾಲಿಕನಾಗಿರುತ್ತಾನೆ. ಸತ್ಯವಿಶ್ವಾಸಿಗಳು ಅವನ ಮೇಲೆಯೇ ಭರವಸೆಯನ್ನಿಡಬೇಕು.

قُلْ لَّنْ يُّصِيْبَنَآ اِلَّا مَا كَتَبَ اللّٰهُ لَنَا ۚ هُوَ مَوْلٰىنَا ۚ وَعَلَى اللّٰهِ فَلْيَتَوَكَّلِ الْمُؤْمِنُوْنَ ﴿٥١﴾

52. ಅವರೊಡನೆ ಹೇಳಿರಿ- ನೀವು ನಮ್ಮ ವಿಷಯದಲ್ಲಿ ನಿರೀಕ್ಷಿಸುತ್ತಿರುವುದು ಎರಡು ಒಳಿತುಗಳ ಪೈಕಿ ಒಂದಲ್ಲದೆ ಇನ್ನೇನು?[23] ಅಲ್ಲಾಹನೇ ನಿಮಗೆ ಶಿಕ್ಷೆ ಕೊಡುತ್ತಾನೋ ಅಥವಾ ನಮ್ಮ ಕೈಗಳಿಂದ ಕೊಡಿಸುತ್ತಾನೋ ಎಂದು ನಾವು ನಿಮ್ಮ ವಿಷಯದಲ್ಲಿ ನಿರೀಕ್ಷಿಸುತ್ತಿದ್ದೇವೆ. ಸರಿ; ಇನ್ನು ನೀವೂ ನಿರೀಕ್ಷಿಸುತ್ತಲಿರಿ, ನಾವೂ ನಿಮ್ಮೊಂದಿಗೆ ನಿರೀಕ್ಷಿಸುತ್ತಿರುತ್ತೇವೆ.

قُلْ هَلْ تَرَبَّصُوْنَ بِنَآ اِلَّآ اِحْدَى الْحُسْنَيَيْنِ ۗ وَنَحْنُ نَتَرَبَّصُ بِكُمْ اَنْ يُّصِيْبَكُمُ اللّٰهُ بِعَذَابٍ مِّنْ عِنْدِهٖٓ اَوْ بِاَيْدِيْنَا ۖ فَتَرَبَّصُوْٓا اِنَّا مَعَكُمْ مُّتَرَبِّصُوْنَ ﴿٥٢﴾

53. ಅವರೊಡನೆ ಹೇಳಿರಿ- ನೀವು (ನಿಮ್ಮ ಸಂಪತ್ತುಗಳನ್ನು) ಸಸಂತೋಷ ಖರ್ಚು ಮಾಡಿರಿ ಅಥವಾ ಅರೆಮನಸ್ಸಿನಿಂದ ಹೇಗಿದ್ದರೂ ಅವು ಸ್ವೀಕರಿಸಲ್ಪಡಲಾರವು. ಏಕೆಂದರೆ ನೀವು ಕರ್ಮಭ್ರಷ್ಟರಾಗಿರುತ್ತೀರಿ.

قُلْ اَنْفِقُوْا طَوْعًا اَوْ كَرْهًا لَّنْ يُّتَقَبَّلَ مِنْكُمْ ۗ اِنَّكُمْ كُنْتُمْ قَوْمًا فٰسِقِيْنَ ﴿٥٣﴾

54. ಅವರು ಅಲ್ಲಾಹ್ ಮತ್ತು ಅವನ ರಸೂಲರನ್ನು ನಿಷೇಧಿಸಿದರು. ಅವರು ನಮಾಝಿಗೆ ಆಲಸ್ಯದೊಂದಿಗೆ ಬರುತ್ತಾರೆ. ದೇವ ಮಾರ್ಗದಲ್ಲಿ ಒಲ್ಲದ ಮನಸ್ಸಿನಿಂದ ಖರ್ಚು ಮಾಡುತ್ತಾರೆ. ಇದರ ಹೊರತು ಅವರ ಸಂಪತ್ತು ಸ್ವೀಕರಿಸದಿರಲು ಇನ್ನಾವ ಕಾರಣವೂ ಇಲ್ಲ.

وَمَا مَنَعَهُمْ اَنْ تُقْبَلَ مِنْهُمْ نَفَقٰتُهُمْ اِلَّآ اَنَّهُمْ كَفَرُوْا بِاللّٰهِ وَبِرَسُوْلِهٖ وَلَا يَاْتُوْنَ الصَّلٰوةَ اِلَّا وَهُمْ كُسَالٰى وَلَا يُنْفِقُوْنَ اِلَّا وَهُمْ كٰرِهُوْنَ ﴿٥٤﴾

55. ಇವರ ಸಂಪತ್ತು ಮತ್ತು ಸಂತತಿಗಳ ಆಧಿಕ್ಯವನ್ನು ಕಂಡು ಮೋಸಹೋಗಬೇಡಿರಿ. ಅಲ್ಲಾಹ್ ಇವುಗಳ ಮೂಲಕವೇ ಅವರಿಗೆ ಇಹಜೀವನದಲ್ಲಿಯೂ ಶಿಕ್ಷೆ ಕೊಡ ಬೇಕೆಂದೂ ಇವರು ಪ್ರಾಣ ಬಿಡುವುದು ಸತ್ಯನಿಷೇಧಾವಸ್ಥೆಯಲ್ಲೇ ಆಗಬೇಕೆಂದೂ ಇಚ್ಛಿಸುತ್ತಾನೆ.

فَلَا تُعْجِبْكَ اَمْوَالُهُمْ وَلَآ اَوْلَادُهُمْ ۗ اِنَّمَا يُرِيْدُ اللّٰهُ لِيُعَذِّبَهُمْ بِهَا فِى الْحَيٰوةِ الدُّنْيَا وَتَزْهَقَ اَنْفُسُهُمْ وَهُمْ كٰفِرُوْنَ ﴿٥٥﴾

56. ನಾವು ನಿಮ್ಮವರೇ ಆಗಿರುತ್ತೇವೆಂದು ಅಲ್ಲಾಹನಾಣೆ ಹಾಕುತ್ತ ಹೇಳುತ್ತಾರೆ. ವಸ್ತುತಃ ಅವರು ಎಷ್ಟು ಮಾತ್ರಕ್ಕೂ ನಿಮ್ಮ ಕೂಟದವರಲ್ಲ. ವಾಸ್ತವದಲ್ಲಿ ಅವರು ನಿಮ್ಮಿಂದ ಭಯಭೀತ ರಾಗಿರುವವರು.

وَيَحْلِفُوْنَ بِاللّٰهِ اِنَّهُمْ لَمِنْكُمْ ۗ وَمَا هُمْ مِّنْكُمْ وَلٰكِنَّهُمْ قَوْمٌ يَّفْرَقُوْنَ ﴿٥٦﴾

23. ಅರ್ಥಾತ್- ಅಲ್ಲಾಹನ ಮಾರ್ಗದ ಹುತಾತ್ಮತೆ ಅಥವಾ ಇಸ್ಲಾಮಿನ ವಿಜಯ.

57. ಅವರಿಗೆಲ್ಲಾದರೂ ಅಭಯಸ್ಥಾನ ಅಥವಾ ಗುಹೆ ಅಥವಾ ನುಗ್ಗಿ ಕುಳಿತಿರಲು ಸ್ಥಳ ಸಿಕ್ಕಿದರೆ, ಓಡಿ ಹೋಗಿ ಅದರೊಳಗೆ ಅವಿತು ಕೊಳ್ಳುತ್ತಿದ್ದರು.

لَوْ يَجِدُونَ مَلْجَأً أَوْ مَغَارَاتٍ أَوْ مُدَّخَلًا لَوَلَّوْا إِلَيْهِ وَهُمْ يَجْمَحُونَ ﴿٥٧﴾

58. ಓ ಪೈಗಂಬರರೇ, ಅವರಲ್ಲಿ ಕೆಲವರು ಸದಕಾತ್[24] (ಕಡ್ಡಾಯ ದಾನಗಳ) ವಿತರಣಾ ಕಾರ್ಯದ ಬಗ್ಗೆ ನಿಮ್ಮನ್ನು ಆಕ್ಷೇಪಿಸುತ್ತಾರೆ. ಆ ಸೊತ್ತಿನಿಂದ ಅವರಿಗೇನಾದರೂ ಕೊಟ್ಟು ಬಿಟ್ಟರೆ ತೃಪ್ತ ರಾಗುತ್ತಾರೆ. ಕೊಡದಿದ್ದರೆ ಸಿಟ್ಟಾಗುತ್ತಾರೆ.

وَمِنْهُمْ مَنْ يَلْمِزُكَ فِي الصَّدَقَاتِ فَإِنْ أُعْطُوا مِنْهَا رَضُوا وَإِنْ لَمْ يُعْطَوْا مِنْهَا إِذَا هُمْ يَسْخَطُونَ ﴿٥٨﴾

59. ಅಲ್ಲಾಹ್ ಮತ್ತು ರಸೂಲರು ಅವರಿಗೆ ಕೊಟ್ಟುದರಲ್ಲಿ ಅವರು ತೃಪ್ತಿಪಟ್ಟು, "ಅಲ್ಲಾಹ್ ನಮಗೆ ಸಾಕು. ಅವನು ತನ್ನ ಅನುಗ್ರಹದಿಂದ ಇನ್ನೂ ಧಾರಾಳವಾಗಿ ನೀಡುವನು ಮತ್ತು ಅವನ ರಸೂಲರೂ ನಮಗೆ ದಯಪಾಲಿಸುವರು. ನಾವು ಅಲ್ಲಾಹನ ಕಡೆಗೇ ಭರವಸೆಯನ್ನಿರಿಸಿಕೊಂಡಿದ್ದೇವೆ" ಎನ್ನುತ್ತಿದ್ದರೆ ಅದೆಷ್ಟು ಉತ್ತಮವಾಗುತ್ತಿತ್ತು.

وَلَوْ أَنَّهُمْ رَضُوا مَا آتَاهُمُ اللَّهُ وَرَسُولُهُ وَقَالُوا حَسْبُنَا اللَّهُ سَيُؤْتِينَا اللَّهُ مِنْ فَضْلِهِ وَرَسُولُهُ إِنَّا إِلَى اللَّهِ رَاغِبُونَ ﴿٥٩﴾

60. ವಾಸ್ತವದಲ್ಲಿ ಈ 'ಕಡ್ಡಾಯದಾನ'ಗಳು (ಫಕೀರ) ಬಡವರಿಗೆ, (ಮಿಸ್ಕೀನ್) ದರಿದ್ರರಿಗೆ,[25] 'ಕಡ್ಡಾಯದಾನ'ಗಳ ಕಾರ್ಯಗಳಲ್ಲಿ ನೇಮಕಗೊಂಡವರಿಗೆ, ಮನವೊಲಿಸ ಬೇಕಾದ ಅಗತ್ಯವಿರುವವ ರಿಗೆ,[26] ಕೊರಳು ಬಿಡಿಸುವುದಕ್ಕೆ,[27] ಸಾಲಗಾರರಿಗೆ ನೆರವು ನೀಡ ಲಿಕ್ಕೆ ಅಲ್ಲಾಹನ ಮಾರ್ಗದಲ್ಲಿ[28] ಮತ್ತು ಪ್ರಯಾಣಿಕರ

إِنَّمَا الصَّدَقَاتُ لِلْفُقَرَاءِ وَالْمَسَاكِينِ وَالْعَامِلِينَ عَلَيْهَا وَالْمُؤَلَّفَةِ قُلُوبُهُمْ وَفِي الرِّقَابِ وَالْغَارِمِينَ وَفِي سَبِيلِ اللَّهِ وَابْنِ السَّبِيلِ فَرِيضَةً مِنَ اللَّهِ

24. ಅರ್ಥಾತ್- ಝಕಾತ್‌ನ ಸೊತ್ತು.

25. ಫಕೀರರು ಅಥವಾ ಬಡವರು ಎಂದರೆ ತಮ್ಮ ಉಪಜೀವನಕ್ಕಾಗಿ ಇತರರ ಸಹಾಯದ ಆಶ್ರಯದಲ್ಲಿರುವವರು. ಮಿಸ್ಕೀನ್‌ಗಳು ಎಂದರೆ ಸಾಮಾನ್ಯ ಅಪೇಕ್ಷಿತರಿಗಿಂತಲೂ ಹೆಚ್ಚು ಸಂಕಷ್ಟದ ಸ್ಥಿತಿಯಲ್ಲಿರುವವರು.

26. 'ತಾಲೀಫುಲ್ ಕಲ್ಬ್' ಎಂದರೆ ಮನವೊಲಿಸುವುದಾಗಿದೆ. ಈ ಆದೇಶದ ಇಂಗಿತವೇನೆಂದರೆ - ಇಸ್ಲಾಮನ್ನು ವಿರೋಧಿಸುವಲ್ಲಿ ಸಕ್ರಿಯರಾಗಿರುವವರಿಗೆ ಒಂದು ವೇಳೆ ಸಂಪತ್ತು ನೀಡಿ ಅವರ ದ್ವೇಷಾಗ್ನಿಯನ್ನು ತಣಿಸಲು ಸಾಧ್ಯವಿದ್ದರೆ, ಸತ್ಯನಿಷೇಧಿಗಳ ಪಾಳಯದಲ್ಲಿ ಸಕ್ರಿಯರಾಗಿರುವವರು ಸಂಪತ್ತಿಗಾಗಿ ಅವರಿಂದ ಸಂಬಂಧ ಕಡಿದು ಮುಸ್ಲಿಮರ ಸಹಾಯಕರಾಗಿ ಮಾರ್ಪಡುವುದಿದ್ದರೆ, ಆಗ ತಾನೇ ಇಸ್ಲಾಮ್ ಸ್ವೀಕರಿಸಿರುವ ಮತ್ತು ಹಣದಿಂದ ಅವರಿಗೆ ನೆರವಾಗದಿದ್ದರೆ ಪುನಃ ಸತ್ಯನಿಷೇಧದ ಕಡೆಗೆ ಮರಳುವಂತಹ ಶಂಕೆಯಿರುವ ದುರ್ಬಲ ವಿಶ್ವಾಸಿಗಳು ನಿಮ್ಮ ಜತೆಗಿದ್ದರೆ ಅವರಿಗೆ ನಿರಂತರ ಭತ್ಯೆ ಅಥವಾ ಸಾಂದರ್ಭಿಕ ಉಡುಗೊರೆ ನೀಡಿ ಇಸ್ಲಾಮಿನ ಸಹಾಯಕರಾಗಿ, ಅನುಯಾಯಿಯಾಗಿ ಅಥವಾ ಕನಿಷ್ಠಪಕ್ಷ ನಿರುಪದ್ರವಿ ಶತ್ರುವಾಗಿ ಮಾರ್ಪಡಿಸಬಹುದಾಗಿದೆ.

27. ಕೊರಳು ಬಿಡಿಸುವುದು ಎಂದರೆ ಗುಲಾಮರ ವಿಮೋಚನೆ ಮಾಡುವುದು.

28. 'ಅಲ್ಲಾಹನ ಮಾರ್ಗದಲ್ಲಿ' ಎಂಬುದು ಒಂದು ಸಾಮಾನ್ಯ ಪ್ರಯೋಗ. ಅಲ್ಲಾಹನ ಸಂಪ್ರೀತಿ ಪ್ರಾಪ್ತವಾಗುವ ಸತ್ಕಾರ್ಯಗಳೆಲ್ಲವೂ ಇದರ ಅರ್ಥವ್ಯಾಪ್ತಿಯಲ್ಲಿ ಬರುತ್ತವೆ. ಈ ಅಭಿಪ್ರಾಯದ ಆಧಾರದಲ್ಲೇ ವಿದ್ವಾಂಸರ ಒಂದು ವಿಭಾಗ ಝಕಾತ್‌ನ ಹಣವನ್ನು ಎಲ್ಲಾ ವಿಧದ ಸತ್ಕಾರ್ಯಗಳಲ್ಲಿ ವ್ಯಯಿಸಬಹುದಾಗಿದೆ ಎಂಬ ಅಭಿಪ್ರಾಯವನ್ನು ಹೊಂದಿದೆ. ಆದರೆ ಬಹುತೇಕ ವಿದ್ವಾಂಸರ ಪ್ರಕಾರ ಅಲ್ಲಾಹನ ಮಾರ್ಗದಲ್ಲಿ ಎಂದರೆ 'ಅಲ್ಲಾಹನ ಮಾರ್ಗದ ಹೋರಾಟವಾಗಿದೆ. ಅರ್ಥಾತ್ ಸತ್ಯನಿಷೇಧದ ವ್ಯವಸ್ಥೆಯನ್ನು ಅಳಿಸಿ ಅಲ್ಲಿ ಇಸ್ಲಾಮೀ ವ್ಯವಸ್ಥೆಯನ್ನು ಸ್ಥಾಪಿಸಲು ನಡೆಸುವ ಪ್ರಯತ್ನ. ಈ ಹೋರಾಟದಲ್ಲಿ ನಿರತರಾಗಿರುವವರ ಪ್ರಯಾಣ ವೆಚ್ಚ, ವಾಹನ ಖರ್ಚು, ಶಸ್ತ್ರಾಸ್ತ್ರ ಮತ್ತು ಸಾಧನಾನುಕೂಲತೆಗಳು ಇತ್ಯಾದಿಗಳನ್ನು ಒದಗಿಸಲಿಕ್ಕೂ ಝಕಾತ್‌ನಿಂದ ನೆರವು ನೀಡಬಹುದು. ಅವರು ಸ್ವತಃ ಸುಭಿಕ್ಷೆಯಲ್ಲಿರುವವರಾಗಿದ್ದು ನೆರವಿನ ಅವಶ್ಯಕತೆ ಅವರಿಗೆ ಇಲ್ಲದಿದ್ದರೂ ಸರಿಯೇ.

وَاللّٰهُ عَلِيْمٌ حَكِيْمٌ ﴿٦٠﴾

ಆದರಕ್ಕಾಗಿ[29] ಖರ್ಚು ಮಾಡಲಿಕ್ಕಾಗಿರುತ್ತವೆ. ಅಲ್ಲಾಹನ ಕಡೆಯ ಒಂದು ಕಡ್ಡಾಯವಿದು. ಅಲ್ಲಾಹನು ಸರ್ವಜ್ಞನೂ ಮಹಾ ಧೀಮಂತನೂ ಆಗಿರುತ್ತಾನೆ.

وَمِنْهُمُ الَّذِيْنَ يُؤْذُوْنَ النَّبِيَّ وَيَقُوْلُوْنَ هُوَ اُذُنٌ ؕ قُلْ اُذُنُ خَيْرٍ لَّكُمْ يُؤْمِنُ بِاللّٰهِ وَيُؤْمِنُ لِلْمُؤْمِنِيْنَ وَرَحْمَةٌ لِّلَّذِيْنَ اٰمَنُوْا مِنْكُمْ ؕ وَالَّذِيْنَ يُؤْذُوْنَ رَسُوْلَ اللّٰهِ لَهُمْ عَذَابٌ اَلِيْمٌ ﴿٦١﴾

61. ಇವರಲ್ಲಿ ಕೆಲವರು ತಮ್ಮ ಮಾತುಗಳಿಂದ ಪ್ರವಾದಿವರ್ಯರಿಗೆ ಕೀಟಲೆ ಕೊಡುತ್ತಾರೆ ಮತ್ತು "ಇದೋರ್ವ ಕಿವಿಸೋಲುವ ವ್ಯಕ್ತಿ" ಎನ್ನುತ್ತಾರೆ. ಹೇಳಿರಿ- "ಅವರು ನಿಮ್ಮ ಹಿತಕ್ಕಾಗಿ ಹಾಗಾಗಿದ್ದಾರೆ. ಅವರು ಅಲ್ಲಾಹನ ಮೇಲೆ ವಿಶ್ವಾಸವಿರಿಸುತ್ತಾರೆ. ಸತ್ಯ ವಿಶ್ವಾಸಿಗಳ ಮೇಲೆ ಭರವಸೆಯನ್ನಿರಿಸುತ್ತಾರೆ ಮತ್ತು ನಿಮ್ಮ ಪೈಕಿ ಸತ್ಯವಿಶ್ವಾಸಿಗಳ ಮೇಲೆ ಕರುಣಾಮಯಿಯಾಗಿದ್ದಾರೆ. ಅಲ್ಲಾಹನ ರಸೂಲರಿಗೆ ಕೀಟಲೆ ಕೊಡುವವರಿಗಾಗಿ ವೇದನಾಯುಕ್ತ ಶಿಕ್ಷೆಯಿದೆ."

يَحْلِفُوْنَ بِاللّٰهِ لَكُمْ لِيُرْضُوْكُمْ ۚ وَاللّٰهُ وَرَسُوْلُهٗۤ اَحَقُّ اَنْ يُّرْضُوْهُ اِنْ كَانُوْا مُؤْمِنِيْنَ ﴿٦٢﴾

62. ಅವರು ನಿಮ್ಮನ್ನು ಮೆಚ್ಚಿಸಲಿಕ್ಕಾಗಿ ನಿಮ್ಮ ಮೇಲೆ ಅಲ್ಲಾಹನಾಣೆ ಹಾಕುತ್ತಾರೆ. ವಸ್ತುತಃ ಅವರು ಸತ್ಯವಿಶ್ವಾಸಿಗಳಾಗಿದ್ದರೆ ಅಲ್ಲಾಹ್ ಮತ್ತು ಅವನ ಸಂದೇಶವಾಹಕರು ಮೆಚ್ಚಿಸಲು ಹೆಚ್ಚು ಅರ್ಹರಾಗಿರುತ್ತಾರೆ.

اَلَمْ يَعْلَمُوْۤا اَنَّهٗ مَنْ يُّحَادِدِ اللّٰهَ وَرَسُوْلَهٗ فَاَنَّ لَهٗ نَارَ جَهَنَّمَ خَالِدًا فِيْهَا ؕ ذٰلِكَ الْخِزْيُ الْعَظِيْمُ ﴿٦٣﴾

63. ಅಲ್ಲಾಹ್ ಮತ್ತು ರಸೂಲರನ್ನು ವಿರೋಧಿಸುವವನಿಗೆ ನರಕಾಗ್ನಿ ಕಾದಿದ್ದು ಅದರಲ್ಲಿ ಅವನು ಸದಾಕಾಲ ವಾಸಿಸುವನೆಂದು ಅವರಿಗೆ ತಿಳಿಯದೇ? ಇದು ಅತಿ ದೊಡ್ಡ ಅಪಮಾನವಾಗಿರುತ್ತದೆ.

يَحْذَرُ الْمُنٰفِقُوْنَ اَنْ تُنَزَّلَ عَلَيْهِمْ سُوْرَةٌ تُنَبِّئُهُمْ بِمَا فِيْ قُلُوْبِهِمْ ؕ قُلِ اسْتَهْزِءُوْا ۚ اِنَّ اللّٰهَ مُخْرِجٌ مَّا تَحْذَرُوْنَ ﴿٦٤﴾

64. ತಮ್ಮ ಅಂತರಂಗದಲ್ಲಿರುವ ರಹಸ್ಯಗಳನ್ನು ಬಹಿರಂಗ ಗೊಳಿಸುವಂತಹ 'ಅಧ್ಯಾಯ'ವೊಂದು ಅವತೀರ್ಣವಾಗಿಬಿಡುವುದೋ ಎಂದು ಈ 'ಕಪಟವಿಶ್ವಾಸಿ'ಗಳು ಹೆದರುತ್ತಾರೆ. ಓ ಪೈಗಂಬರರೇ, ಅವರೊಡನೆ ಹೇಳಿರಿ, "ಇನ್ನೂ ಅಪಹಾಸ್ಯ ಮಾಡಿರಿ. ನಿಶ್ಚಯವಾಗಿಯೂ ಯಾವ ವಿಷಯವು ಬಹಿರಂಗ ಗೊಳ್ಳುವ ಬಗ್ಗೆ ನೀವು ಹೆದರುತ್ತಿದ್ದಿರೋ ಅದನ್ನು ಅಲ್ಲಾಹನು ಬಹಿರಂಗಗೊಳಿಸುವವನಿದ್ದಾನೆ."

وَلَئِنْ سَاَلْتَهُمْ لَيَقُوْلُنَّ اِنَّمَا كُنَّا نَخُوْضُ وَنَلْعَبُ ؕ قُلْ اَبِاللّٰهِ وَاٰيٰتِهٖ وَرَسُوْلِهٖ

65. "ನೀವು ಏನು ಮಾಡುತ್ತಿದ್ದಿರಿ?" ಎಂದು ಅವರೊಡನೆ ಕೇಳಿದರೆ "ನಾವು ಹಾಸ್ಯ ವಿನೋದಗಳಲ್ಲಿ ತಲ್ಲೀನರಾಗಿದ್ದೆವು"[30] ಎಂದು

29. ಪ್ರಯಾಣಿಕ ತನ್ನ ಸ್ವಂತ ಸ್ಥಳದಲ್ಲಿ ಸಿರಿವಂತನಾಗಿದ್ದು, ಪ್ರಯಾಣದ ವೇಳೆ ಅವನು ಅಪೇಕ್ಷಿತನಾಗಿ ಮಾರ್ಪಟ್ಟಿದ್ದರೆ ಝಕಾತ್‌ನಿಂದ ಅಂತಹವನಿಗೂ ನೆರವು ನೀಡಬಹುದು.

30. ತಬೂಕ್ ಯುದ್ಧದ ಸಂದರ್ಭದಲ್ಲಿ ಕಪಟವಿಶ್ವಾಸಿಗಳು ತಮ್ಮ ಸಭೆಗಳಲ್ಲಿ ಕುಳಿತು ಪ್ರವಾದಿವರ್ಯರು(ಸ) ಮತ್ತು ಮುಸ್ಲಿಮರ

ಥಟ್ಟನೆ ಹೇಳಿಬಿಡುವರು. ಅವರೊಡನೆ ಹೇಳಿರಿ,- ನಿಮ್ಮ ಹಾಸ್ಯ ವಿನೋದಗಳು ಅಲ್ಲಾಹ್, ಅವನ ವಚನಗಳು ಮತ್ತು ಅವನ ರಸೂಲರೊಂದಿಗೇ ಆಗಿತ್ತೇ?

كُنْتُمْ تَسْتَهْزِءُوْنَ ﴿٦٥﴾

66. ಈಗ ನೆಪಗಳನ್ನೊಡ್ಡದಿರಿ. ನೀವು ವಿಶ್ವಾಸವಿಟ್ಟ ಬಳಿಕ ನಿಷೇಧಿಸಿರುತ್ತೀರಿ. ನಾವು ನಿಮ್ಮಲ್ಲಿ ಒಂದು ಕೂಟವನ್ನು ಕ್ಷಮಿಸಿಬಿಟ್ಟರೂ ಇನ್ನೊಂದು ಕೂಟವನ್ನು ಖಂಡಿತವಾಗಿಯೂ ಶಿಕ್ಷಿಸುವೆವು. ಏಕೆಂದರೆ ಅವರು ಅಪರಾಧಿಗಳು.

لَا تَعْتَذِرُوْا قَدْ كَفَرْتُمْ بَعْدَ اِيْمَانِكُمْ ؕ
اِنْ نَّعْفُ عَنْ طَآئِفَةٍ مِّنْكُمْ نُعَذِّبْ
طَآئِفَةًۢ بِاَنَّهُمْ كَانُوْا مُجْرِمِيْنَ ﴿٦٦﴾

ع ١٤

وقف لازم

67. ಕಪಟವಿಶ್ವಾಸಿ ಪುರುಷರೂ ಕಪಟವಿಶ್ವಾಸಿ ಸ್ತ್ರೀಯರೂ ಪರಸ್ಪರ ಅನ್ಯೋನ್ಯರು. ಅವರು ಕೆಡುಕಿನ ಆಜ್ಞೆ ಕೊಡುತ್ತಾರೆ, ಒಳಿತುಗಳಿಂದ ತಡೆಯುತ್ತಾರೆ ಮತ್ತು ತಮ್ಮ ಕೈಗಳನ್ನು ಸತ್ಕಾರ್ಯಗಳಿಂದ ತಡೆದಿಡುತ್ತಾರೆ. ಅವರು ಅಲ್ಲಾಹನನ್ನು ಮರೆತುಬಿಟ್ಟರು. ಆಗ ಅಲ್ಲಾಹನೂ ಅವರನ್ನು ಮರೆತುಬಿಟ್ಟನು. ನಿಶ್ಚಯವಾಗಿಯೂ ಈ ಕಪಟವಿಶ್ವಾಸಿಗಳೇ ಕರ್ಮಭ್ರಷ್ಟರು.

اَلْمُنٰفِقُوْنَ وَالْمُنٰفِقٰتُ بَعْضُهُمْ مِّنْۢ بَعْضٍ ۘ
يَاْمُرُوْنَ بِالْمُنْكَرِ وَيَنْهَوْنَ عَنِ الْمَعْرُوْفِ
وَيَقْبِضُوْنَ اَيْدِيَهُمْ ؕ نَسُوا اللّٰهَ فَنَسِيَهُمْ ؕ
اِنَّ الْمُنٰفِقِيْنَ هُمُ الْفٰسِقُوْنَ ﴿٦٧﴾

68. ಅಲ್ಲಾಹನು ಕಪಟವಿಶ್ವಾಸಿ ಪುರುಷರಿಗೂ ಕಪಟವಿಶ್ವಾಸಿ ಸ್ತ್ರೀಯರಿಗೂ ಸತ್ಯನಿಷೇಧಿಗಳಿಗೂ ನರಕಾಗ್ನಿಯ ವಾಗ್ದಾನ ಮಾಡಿರುತ್ತಾನೆ. ಅವರು ಅದರಲ್ಲಿ ಸದಾಕಾಲ ವಾಸಿಸುವರು. ಅದೇ ಅವರಿಗೆ ಯೋಗ್ಯವಾಗಿದೆ. ಅವರ ಮೇಲೆ ಅಲ್ಲಾಹನ ಅಭಿಶಪನವಿದೆ ಮತ್ತು ಅವರಿಗೆ ಶಾಶ್ವತ ಶಿಕ್ಷೆಯಿದೆ.

وَعَدَ اللّٰهُ الْمُنٰفِقِيْنَ وَالْمُنٰفِقٰتِ وَالْكُفَّارَ
نَارَ جَهَنَّمَ خٰلِدِيْنَ فِيْهَا ؕ هِيَ حَسْبُهُمْ ۚ
وَلَعَنَهُمُ اللّٰهُ ۚ وَلَهُمْ عَذَابٌ مُّقِيْمٌ ﴿٦٨﴾

69. ನಿಮ್ಮ ರೀತಿ ನೀತಿಗಳೆಲ್ಲ ನಿಮ್ಮ ಪೂರ್ವಿಕರಂತೆಯೇ ಇವೆ. ಅವರು ನಿಮಗಿಂತ ಹೆಚ್ಚು ಸುಶಕ್ತರೂ ನಿಮಗಿಂತ ಅಧಿಕ ಧನಾಢ್ಯರೂ ಸಂತತಿ ಸಮೃದ್ಧರೂ ಆಗಿದ್ದರು. ಅನಂತರ ಅವರು ತಮ್ಮ ಪಾಲಿನ ಲೌಕಿಕ ಸುಖಭೋಗಗಳನ್ನುಂಡರು. ನೀವು ಸಹ ಅವರಂತೆಯೇ ನಿಮ್ಮ ಪಾಲಿನ ಸುಖಭೋಗಗಳನ್ನುಂಡಿರಿ. ಅವರು ಬಿದ್ದಿದ್ದಂತಹ ಕುತರ್ಕಗಳಲ್ಲಿ ನೀವೂ ಬಿದ್ದಿರಿ. ಅವರ

كَالَّذِيْنَ مِنْ قَبْلِكُمْ كَانُوْٓا اَشَدَّ مِنْكُمْ
قُوَّةً وَّ اَكْثَرَ اَمْوَالًا وَّ اَوْلَادًا ؕ فَاسْتَمْتَعُوْا
بِخَلَاقِهِمْ فَاسْتَمْتَعْتُمْ بِخَلَاقِكُمْ كَمَا
اسْتَمْتَعَ الَّذِيْنَ مِنْ قَبْلِكُمْ بِخَلَاقِهِمْ
وَخُضْتُمْ كَالَّذِيْ خَاضُوْا ؕ اُولٰٓئِكَ حَبِطَتْ

ಅಪಹಾಸ್ಯ ಮಾಡುತ್ತಿದ್ದರು. ಪ್ರಾಮಾಣಿಕವಾಗಿ ಜಿಹಾದ್‌ಗೆ ಸಿದ್ಧರಾಗುವವರನ್ನು ಗೇಲಿ ಮಾಡಿ ಅವರ ಧೈರ್ಯವನ್ನು ಉಡುಗಿಸಲು ಪ್ರಯತ್ನಿಸುತ್ತಿದ್ದರು. ಅವರ ಅನೇಕ ಮಾತುಗಳು ಉಲ್ಲೇಖಿಸಲ್ಪಟ್ಟಿವೆ. ಉದಾಹರಣೆಗೆ ಒಂದು ಸಭೆಯಲ್ಲಿ ಕೆಲವು ಕಪಟವಿಶ್ವಾಸಿಗಳು ಸೇರಿ ಹರಟೆ ಕೊಚ್ಚುತ್ತಿದ್ದರು. ಒಬ್ಬ ಹೇಳಿದ, "ರೋಮನ್ನರನ್ನೂ ನೀವು ಅರಬರಂತೆಯೇ ಭಾವಿಸಿದ್ದೀರೇನು? ನಾಳೆ ನೋಡುವಿರಂತೆ. ಹೋರಾಡಲು ಬಂದಿರುವ ಈ ಪರಾಕ್ರಮಿಗಳು ಹಗ್ಗದಲ್ಲಿ ಕಟ್ಟಲ್ಪಟ್ಟಿರುವರು." ಇನ್ನೊಬ್ಬ ಹೇಳಿದ, "ಮೇಲಿನಿಂದ ನೂರು ನೂರು ಕೊರಡೆಯೇಟು ಬಾರಿಸಬೇಕೆಂಬ ಆದೇಶ ಬಂದರೆ ಬಹಳ ಮೋಜೆನಿಸೀತು." ಪ್ರವಾದಿವರ್ಯರು(ಸ) ಯುದ್ಧಕ್ಕೆ ಸಿದ್ಧತೆ ನಡೆಸುತ್ತಿರುವುದನ್ನು ಕಂಡು ಇನ್ನೊಬ್ಬ ಕಪಟವಿಶ್ವಾಸಿ ತನ್ನ ಮಿತ್ರರೊಂದಿಗೆ ಹೀಗೆಂದನು, "ಇವರನ್ನು ನೋಡಿ! ಇವರು ರೋಮ್ ಮತ್ತು ಸಿರಿಯಾದ ಕೋಟೆಗಳನ್ನು ಜಯಿಸಲು ಹೊರಟಿದ್ದಾರೆ."

أَعۡمَٰلُهُمۡ فِي ٱلدُّنۡيَا وَٱلۡأٓخِرَةِۖ وَأُوْلَٰٓئِكَ
هُمُ ٱلۡخَٰسِرُونَ ٦٩

ಪರಿಣಾಮವೇನಾಯಿತೆಂದರೆ ಇಹ-ಪರಗಳಲ್ಲಿ ಅವರ ಕರ್ಮಗಳೆಲ್ಲ ನಿಷ್ಫಲಗೊಂಡವು. ಅವರೇ ನಷ್ಟದಲ್ಲಿದ್ದಾರೆ.

أَلَمۡ يَأۡتِهِمۡ نَبَأُ ٱلَّذِينَ مِن قَبۡلِهِمۡ قَوۡمِ
نُوحٖ وَعَادٖ وَثَمُودَ وَقَوۡمِ إِبۡرَٰهِيمَ
وَأَصۡحَٰبِ مَدۡيَنَ وَٱلۡمُؤۡتَفِكَٰتِۚ
أَتَتۡهُمۡ رُسُلُهُم بِٱلۡبَيِّنَٰتِۖ فَمَا كَانَ
ٱللَّهُ لِيَظۡلِمَهُمۡ وَلَٰكِن كَانُوٓاْ أَنفُسَهُمۡ
يَظۡلِمُونَ ٧٠

70. ಇವರಿಗೆ ಇವರ ಪೂರ್ವಿಕರ ಇತಿಹಾಸವು ತಲುಪಲಿಲ್ಲವೇ? ನೂಹರ ಜನಾಂಗ, ಆದ್, ಸಮೂದ್, ಇಬ್‌ರಾಹೀಮರ ಜನಾಂಗ, ಮದ್‌ಯನದವರು ಮತ್ತು ಬುಡಮೇಲು ಗೊಳಿಸಲಾದ ಆ ನಾಡುಗಳು.[31] ಅವರ ರಸೂಲರು ಅವರ ಬಳಿ ಪ್ರತ್ಯಕ್ಷ ಪ್ರಮಾಣಗಳನ್ನು ತೆಗೆದುಕೊಂಡು ಬಂದರು. ಅವರ ಮೇಲೆ ಅಕ್ರಮವೆಸಗುವುದು ಅಲ್ಲಾಹನ ಕಾರ್ಯವಾಗಿರಲಿಲ್ಲ. ಆದರೆ ಅವರು ಸ್ವತಃ ತಮ್ಮ ಮೇಲೆ ತಾವೇ ಅಕ್ರಮ ವೆಸಗುವವರಾಗಿದ್ದರು.

وَٱلۡمُؤۡمِنُونَ وَٱلۡمُؤۡمِنَٰتُ بَعۡضُهُمۡ أَوۡلِيَآءُ
بَعۡضٖۚ يَأۡمُرُونَ بِٱلۡمَعۡرُوفِ وَيَنۡهَوۡنَ عَنِ
ٱلۡمُنكَرِ وَيُقِيمُونَ ٱلصَّلَوٰةَ وَيُؤۡتُونَ ٱلزَّكَوٰةَ
وَيُطِيعُونَ ٱللَّهَ وَرَسُولَهُۥٓۚ أُوْلَٰٓئِكَ سَيَرۡحَمُهُمُ
ٱللَّهُۗ إِنَّ ٱللَّهَ عَزِيزٌ حَكِيمٞ ٧١

[ವಕ್ಫ್ ಗುರುತು, ಬಲ ಅಂಚು: وقف لازم]

71. ಸತ್ಯವಿಶ್ವಾಸಿ ಪುರುಷರು ಮತ್ತು ಸತ್ಯವಿಶ್ವಾಸಿ ಸ್ತ್ರೀಯರು ಇವರೆಲ್ಲ ಪರಸ್ಪರ ಆಪ್ತರು; ಅವರು ಒಳಿತುಗಳ ಅಪ್ಪಣೆ ಕೊಡುತ್ತಾರೆ ಮತ್ತು ಕೆಡುಕುಗಳಿಂದ ತಡೆಯುತ್ತಾರೆ. ನಮಾಝ್ ಸಂಸ್ಥಾಪಿಸುತ್ತಾರೆ, ಝಕಾತ್ ಕೊಡುತ್ತಾರೆ ಮತ್ತು ಅಲ್ಲಾಹ್ ಹಾಗೂ ಅವನ ರಸೂಲರ ಅನುಸರಣೆ ಮಾಡುತ್ತಾರೆ. ಇವರ ಮೇಲೆ ಅಲ್ಲಾಹನ ಕರುಣೆ ಅವತೀರ್ಣಗೊಂಡೇ ತೀರುವುದು. ನಿಶ್ಚಯವಾಗಿಯೂ ಅಲ್ಲಾಹ್ ಮಹಾ ಪ್ರತಾಪಿಯೂ ಯುಕ್ತಿ ಪೂರ್ಣನೂ ಆಗಿರುತ್ತಾನೆ.

وَعَدَ ٱللَّهُ ٱلۡمُؤۡمِنِينَ وَٱلۡمُؤۡمِنَٰتِ جَنَّٰتٖ
تَجۡرِي مِن تَحۡتِهَا ٱلۡأَنۡهَٰرُ خَٰلِدِينَ فِيهَا
وَمَسَٰكِنَ طَيِّبَةٗ فِي جَنَّٰتِ عَدۡنٖۚ وَرِضۡوَٰنٞ
مِّنَ ٱللَّهِ أَكۡبَرُۚ ذَٰلِكَ هُوَ ٱلۡفَوۡزُ ٱلۡعَظِيمُ ٧٢

[ಬಲ ಅಂಚಿನ ಗುರುತು: الربع]

72. ಅಲ್ಲಾಹ್ ಈ ಸತ್ಯವಿಶ್ವಾಸಿ ಸ್ತ್ರೀ-ಪುರುಷರಿಗೆ ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವ ಸ್ವರ್ಗೋದ್ಯಾನಗಳನ್ನು ನೀಡುವ ವಾಗ್ದಾನ ಮಾಡುತ್ತಾನೆ. ಅವರು ಅದರಲ್ಲಿ ಸದಾ ವಾಸಿಸು ತ್ತಿರುವರು. ಆ ಸದಾ ಹಸುರಾದ ಉದ್ಯಾನಗಳಲ್ಲಿ ಅವರಿಗಾಗಿ ನಿರ್ಮಲ ವಸತಿ ಗೃಹ ಗಳಿರುವುವು. ಎಲ್ಲಕ್ಕೂ ಮಿಗಿಲಾಗಿ ಅವರಿಗೆ ಅಲ್ಲಾಹನ ಸಂಪ್ರೀತಿಯು ಪ್ರಾಪ್ತವಾಗುವುದು. ಇದುವೇ ಮಹಾ ಯಶಸ್ಸು.

يَٰٓأَيُّهَا ٱلنَّبِيُّ جَٰهِدِ ٱلۡكُفَّارَ وَٱلۡمُنَٰفِقِينَ
وَٱغۡلُظۡ عَلَيۡهِمۡۚ وَمَأۡوَىٰهُمۡ جَهَنَّمُۖ

73. ಓ ಪೈಗಂಬರರೇ,[32] ಸತ್ಯನಿಷೇಧಿಗಳ ಹಾಗೂ 'ಕಪಟವಿಶ್ವಾಸಿ'ಗಳ ವಿರುದ್ಧ ಉಗ್ರ ಹೋರಾಟ ನಡೆಸಿರಿ ಮತ್ತು ಅವರೊಡನೆ

31. ಅರ್ಥಾತ್- ಬುಡಮೇಲುಗೊಳಿಸಲಾದಂತಹ ಲೂತ್ ಜನಾಂಗದ ಜನವಾಸ ಪ್ರದೇಶಗಳು.

32. ಇಲ್ಲಿಂದ ತಬೂಕ್ ಯುದ್ಧದ ನಂತರ ಅವತೀರ್ಣಗೊಂಡ ಸೂಕ್ತಗಳು ಆರಂಭಗೊಳ್ಳುತ್ತವೆ.

وَبِئْسَ الْمَصِيرُ ﴿٧٣﴾

ಕಟುವಾಗಿ ವರ್ತಿಸಿರಿ. ಕೊನೆಗೆ ಅವರ ವಾಸಸ್ಥಾನವು ನರಕವಾಗಿದೆ ಮತ್ತು ಅದು ಅತ್ಯಂತ ಕೆಟ್ಟ ನಿವಾಸ.

يَحْلِفُونَ بِاللَّهِ مَا قَالُوا وَلَقَدْ قَالُوا
كَلِمَةَ الْكُفْرِ وَكَفَرُوا بَعْدَ إِسْلَامِهِمْ
وَهَمُّوا بِمَا لَمْ يَنَالُوا ۚ وَمَا نَقَمُوا إِلَّا
أَنْ أَغْنَاهُمُ اللَّهُ وَرَسُولُهُ مِنْ فَضْلِهِ ۚ
فَإِنْ يَتُوبُوا يَكُ خَيْرًا لَهُمْ ۖ وَإِنْ يَتَوَلَّوْا
يُعَذِّبْهُمُ اللَّهُ عَذَابًا أَلِيمًا فِي الدُّنْيَا
وَالْآخِرَةِ ۚ وَمَا لَهُمْ فِي الْأَرْضِ مِنْ
وَلِيٍّ وَلَا نَصِيرٍ ﴿٧٤﴾

74. ನಾವು ಆ ಮಾತನ್ನು ಹೇಳಲಿಲ್ಲವೆಂದು ಇವರು ಅಲ್ಲಾಹನಾಣೆ ಹಾಕುತ್ತ ಹೇಳುತ್ತಾರೆ. ವಸ್ತುತಃ ಅವರು ಖಂಡಿತವಾಗಿಯೂ ಆ ಸತ್ಯನಿಷೇಧದ ಮಾತನ್ನಾಡಿದ್ದಾರೆ.[33] ಅವರು ಇಸ್ಲಾಮ್ ಸ್ವೀಕರಿಸಿದ ಬಳಿಕ ಸತ್ಯವನ್ನು ನಿಷೇಧಿಸಿದ ಅಪರಾಧವೆಸಗಿದ್ದಾರೆ. ಅವರು ಏನೆಲ್ಲ ಮಾಡಬೇಕೆಂದೆಣಿಸಿದ್ದರೋ ಅವುಗಳನ್ನು ಮಾಡದಾದರು.[34] ಅವರ ಕೋಪವೆಲ್ಲ ತನ್ನ ಅನುಗ್ರಹದಿಂದ ಅಲ್ಲಾಹ್ ಮತ್ತು ಅವನ ರಸೂಲರು ಅವರನ್ನು ಸಂಪನ್ನ ಗೊಳಿಸಿದ್ದರಿಂದಲೇ ತಾನೆ. ಈಗ ಅವರು ತಮ್ಮ ನಿಲುಮೆಗಾಗಿ ಪಶ್ಚಾತ್ತಾಪ ಪಟ್ಟರೆ ಅದು ಅವರಿಗೇ ಒಳಿತು. ಅವರು ಪಶ್ಚಾತ್ತಾಪ ಪಡದಿದ್ದರೆ ಅಲ್ಲಾಹ್ ಅವರಿಗೆ ಇಹದಲ್ಲೂ ಪರದಲ್ಲೂ ಅತ್ಯಂತ ವೇದನಾಯುಕ್ತ ಶಿಕ್ಷೆ ಕೊಡುವನು. ಭೂಮಿಯಲ್ಲಿ ಇವರ ರಕ್ಷಕ ಮಿತ್ರರಾಗಲಿ, ಸಹಾಯಕರಾಗಲಿ ಯಾರೂ ಇಲ್ಲ.

وَمِنْهُمْ مَنْ عَاهَدَ اللَّهَ لَئِنْ آتَانَا مِنْ
فَضْلِهِ لَنَصَّدَّقَنَّ وَلَنَكُونَنَّ مِنَ الصَّالِحِينَ ﴿٧٥﴾

75. ಅವನು ತನ್ನ ಅನುಗ್ರಹದಿಂದ ನಮಗೇನಾದರೂ ಕೊಟ್ಟರೆ ನಾವೂ ದಾನ ಮಾಡುವೆವೆಂದೂ ಸಜ್ಜನರಾಗಿ ಬಾಳುವೆವೆಂದೂ ಅಲ್ಲಾಹ ನೊಡನೆ ಕರಾರು ಮಾಡಿದವರೂ ಅವರಲ್ಲಿ ಕೆಲವರಿದ್ದಾರೆ.

فَلَمَّا آتَاهُمْ مِنْ فَضْلِهِ بَخِلُوا بِهِ وَتَوَلَّوْا
وَهُمْ مُعْرِضُونَ ﴿٧٦﴾

76. ಆದರೆ, ಅಲ್ಲಾಹನು ತನ್ನ ಅನುಗ್ರಹದಿಂದ ಅವರನ್ನು ಸಂಪನ್ನರನ್ನಾಗಿ ಮಾಡಿದಾಗ ಅವರು ಜಿಪುಣತೆಗೆ ಇಳಿದರು ಮತ್ತು ತಮ್ಮ ಕರಾರಿನ ಗೊಡವೆಯೇ ಇಲ್ಲದಂತೆ ಅದರಿಂದ ವಿಮುಖರಾದರು.

فَأَعْقَبَهُمْ نِفَاقًا فِي قُلُوبِهِمْ إِلَىٰ يَوْمِ

77. ಪರಿಣಾಮವಾಗಿ ಅವರು ಅಲ್ಲಾಹನೊಡನೆ ಮಾಡಿದ ಕರಾರು

33. ಇಲ್ಲಿ ಸೂಚಿಸಲಾಗಿರುವ ಆ ಮಾತು ಯಾವುದು ಎಂಬ ಬಗ್ಗೆ ಸುದೃಢವಾದ ಯಾವುದೇ ವಿವರಣೆ ನಮಗೆ ಬಂದು ತಲಪಿಲ್ಲ. ಆದರೆ ಹದೀಸ್ ವರದಿಗಳಲ್ಲಿ ಆ ಕಾಲದ ಕಪಟವಿಶ್ವಾಸಿಗಳು ಆಡಿದ್ದ ಅಂತಹ ಅನೇಕ ಸತ್ಯನಿಷೇಧವನ್ನು ಸೂಚಿಸುವಂತಹ ಮಾತುಗಳು ಬಂದಿವೆ. ಉದಾಹರಣೆಗೆ ಕಪಟವಿಶ್ವಾಸಿಯೊಬ್ಬ ಮುಸ್ಲಿಮ್ ಯುವಕನೊಂದಿಗೆ ಮಾತನಾಡುತ್ತಾ ಹೇಳಿದ, "ಈ ವ್ಯಕ್ತಿ [ಪ್ರವಾದಿವರ್ಯರು(ಸ)] ಹೇಳುವುದೆಲ್ಲವೂ ಸತ್ಯವಾಗಿದ್ದರೆ ನಾವೆಲ್ಲರೂ ಕತ್ತೆಗಳಿಗಿಂತಲೂ ಕಡೆಯೆಂದಾಯಿತು" ಇನ್ನೊಂದು ಉಲ್ಲೇಖದ ಪ್ರಕಾರ ತಬೂಕ್‌ನ ಪ್ರಯಾಣದ ವೇಳೆ ಪ್ರವಾದಿವರ್ಯರ(ಸ) ಒಂಟೆ ಕಾಣೆಯಾಯಿತು. ಆಗ ಕಪಟವಿಶ್ವಾಸಿಗಳ ಒಂದು ಗುಂಪು ತಮ್ಮ ಕೂಟದಲ್ಲಿ ಕುಳಿತು ಆ ಬಗ್ಗೆ ಮನಸಾರೆ ಅಪಹಾಸ್ಯ ಮಾಡಿತು, "ಇವರು ಆಗಸದ ಸುದ್ದಿಗಳನ್ನೇನೋ ತಿಳಿಸುತ್ತಾರೆ. ಆದರೆ ತನ್ನ ಒಂಟೆ ಈಗ ಎಲ್ಲಿದೆ ಎಂದು ಮಾತ್ರ ಇವರಿಗೆ ತಿಳಿದಿಲ್ಲ."

34. ಇದು ಕಪಟವಿಶ್ವಾಸಿಗಳು ತಬೂಕ್ ಯುದ್ಧದ ವೇಳೆ ಹೂಡಿದ್ದ ಸಂಚುಗಳ ಕಡೆಗಿರುವ ಸೂಚನೆ. ಒಮ್ಮೆ ಅವರು ರಾತ್ರಿಯ ವೇಳೆ ಪ್ರಯಾಣದ ಸಂದರ್ಭದಲ್ಲಿ ಪ್ರವಾದಿವರ್ಯರನ್ನೂ(ಸ) ಪ್ರಪಾತಕ್ಕೆ ಎಸೆದು ಬಿಡುವ ಯೋಜನೆ ರೂಪಿಸಿದ್ದರು. ತಬೂಕ್‌ನಲ್ಲಿ ಮುಸ್ಲಿಮರಿಗೆ ಸೋಲಾದರೆ ಅಬ್ದುಲ್ಲಾ ಬಿನ್ ಉಬೈಗೆ ಕಿರೀಟಧಾರಣೆ ಮಾಡಿಸುವ ಬಗ್ಗೆಯೂ ಅವರು ಮೊದಲೇ ನಿರ್ಧರಿಸಿಕೊಂಡಿದ್ದರು.

ಭಂಗಕ್ಕಾಗಿಯೂ ಅವರು ಸುಳ್ಳು ಹೇಳಿದುದಕ್ಕಾಗಿಯೂ ಅಲ್ಲಾಹನು ಅವರ ಹೃದಯದಲ್ಲಿ 'ಕಾಪಟ್ಯ'ವನ್ನು ಇರಿಸಿ ಬಿಟ್ಟನು. ಅದು ಅವರು ಅವನ ಸನ್ನಿಧಿಯಲ್ಲಿ ಹಾಜರಾಗುವವರೆಗೂ ಅವರ ಬೆನ್ನು ಬಿಡದು.

يَلْقَوْنَهٗ بِمَآ اَخْلَفُوا اللّٰهَ مَا وَعَدُوْهُ
وَ بِمَا كَانُوْا يَكْذِبُوْنَ ۝٧٧

78. ಅಲ್ಲಾಹನಿಗೆ ಇವರ ರಹಸ್ಯ ಹಾಗೂ ಗೂಢಾಲೋಚನೆಯ ಅರಿವು ಕೂಡ ಇದೆ ಮತ್ತು ಅಲ್ಲಾಹನು ಅಗೋಚರ ವಿಷಯಗಳನ್ನೂ ಚೆನ್ನಾಗಿ ಅರಿಯುವವನು ಎಂಬುದೂ ಇವರಿಗೆ ತಿಳಿಯದೇ?

اَلَمْ يَعْلَمُوْٓا اَنَّ اللّٰهَ يَعْلَمُ سِرَّهُمْ وَ
نَجْوٰىهُمْ وَاَنَّ اللّٰهَ عَلَّامُ الْغُيُوْبِ ۝٧٨

79. ಸ್ವಯಂ ಪ್ರೇರಣೆಯಿಂದ ದಾನ ಮಾಡುವ ಸತ್ಯವಿಶ್ವಾಸಿಗಳ ಧನ ತ್ಯಾಗಗಳ ಬಗ್ಗೆ ಇವರು ವ್ಯಂಗ್ಯೋಕ್ತಿಗಳನ್ನಾಡುತ್ತಾರೆ ಮತ್ತು (ಅಲ್ಲಾಹನ ಮಾರ್ಗದಲ್ಲಿ ದಾನ ಮಾಡಲು) ಸ್ವತಃ ದೇಹಶ್ರಮ ವಹಿಸಿ ದುಡಿದು ಕೊಡುವ ಹೊರತು ತಮ್ಮ ಬಳಿ ಇನ್ನೇನೂ ಇಲ್ಲದಿರುವಂತಹವರನ್ನು ಗೇಲಿ ಮಾಡುತ್ತಾರೆ. (ಅಲ್ಲಾಹ್ ಇಂತಹ ಧನಿಕ ಲೋಭಿಗಳನ್ನು ಚೆನ್ನಾಗಿ ಬಲ್ಲನು.) ಹೀಗೆ ಗೇಲಿ ಮಾಡುವವರನ್ನು ಅಲ್ಲಾಹ್ ಗೇಲಿ ಮಾಡುತ್ತಾನೆ ಮತ್ತು ಅವರಿಗೆ ವೇದನಾಯುಕ್ತ ಶಿಕ್ಷೆ ಇದೆ.

اَلَّذِيْنَ يَلْمِزُوْنَ الْمُطَّوِّعِيْنَ مِنَ الْمُؤْمِنِيْنَ
فِى الصَّدَقٰتِ وَ الَّذِيْنَ لَا يَجِدُوْنَ اِلَّا
جُهْدَهُمْ فَيَسْخَرُوْنَ مِنْهُمْ ؕ سَخِرَ اللّٰهُ
مِنْهُمْ ۫ وَلَهُمْ عَذَابٌ اَلِيْمٌ ۝٧٩

80. ಓ ಪೈಗಂಬರರೇ, ನೀವು ಇಂತಹವರಿಗಾಗಿ ಕ್ಷಮಾಯಾಚನೆ ಮಾಡಿದರೂ ಮಾಡದಿದ್ದರೂ ಅವರನ್ನು ಕ್ಷಮಿಸಬೇಕೆಂದು ನೀವು ಎಪ್ಪತ್ತು ಸಲ ನಿವೇದಿಸಿಕೊಂಡರೂ ಅಲ್ಲಾಹನು ಅವರನ್ನು ಎಂದೆಂದಿಗೂ ಕ್ಷಮಿಸನು. ಕಾರಣವೇನೆಂದರೆ ಅವರು ಅಲ್ಲಾಹ್ ಹಾಗೂ ಅವನ ರಸೂಲರನ್ನು ನಿಷೇಧಿಸಿದ್ದಾರೆ ಮತ್ತು ಅಲ್ಲಾಹನು ಕರ್ಮಭ್ರಷ್ಟರಿಗೆ ಸನ್ಮಾರ್ಗದರ್ಶನ ಮಾಡುವುದಿಲ್ಲ.

اِسْتَغْفِرْ لَهُمْ اَوْ لَا تَسْتَغْفِرْ لَهُمْ ؕ اِنْ
تَسْتَغْفِرْ لَهُمْ سَبْعِيْنَ مَرَّةً فَلَنْ يَّغْفِرَ
اللّٰهُ لَهُمْ ؕ ذٰلِكَ بِاَنَّهُمْ كَفَرُوْا بِاللّٰهِ وَ
رَسُوْلِهٖ ؕ وَاللّٰهُ لَا يَهْدِى الْقَوْمَ الْفٰسِقِيْنَ ۝٨٠

81. ಹಿಂದೆ ಉಳಿದಿರಲು ವಿನಾಯಿತಿ ನೀಡಲ್ಪಟ್ಟವರು ಅಲ್ಲಾಹ್ ಹಾಗೂ ಅವನ ರಸೂಲರಿಗೆ ನೆರವಾಗದೆ ಮನೆಯಲ್ಲೇ ಕುಳಿತಿರುವ ಬಗ್ಗೆ ಸಂತಸಪಟ್ಟರು. ಧನ ಮತ್ತು ತನುಗಳಿಂದ ಅಲ್ಲಾಹನ ಮಾರ್ಗದಲ್ಲಿ ಹೋರಾಟ ನಡೆಸುವುದು ಅವರಿಗೆ ಇಷ್ಟವಿರಲಿಲ್ಲ. ಅವರು ಜನರೊಡನೆ, "ಈ ಕಠಿಣ ಉಷ್ಣದಲ್ಲಿ ಹೊರಡಬೇಡಿರಿ" ಎಂದರು. ಅವರೊಡನೆ ಹೇಳಿರಿ, "ನರಕಾಗ್ನಿಯು ಇದಕ್ಕಿಂತಲೂ ಹೆಚ್ಚು ಉಷ್ಣವಿದೆ." ಅಕಟ! ಅವರಿಗೆ ಇದರ ಪ್ರಜ್ಞೆಯಿರುತ್ತಿದ್ದರೆ!

فَرِحَ الْمُخَلَّفُوْنَ بِمَقْعَدِهِمْ خِلٰفَ رَسُوْلِ
اللّٰهِ وَكَرِهُوْٓا اَنْ يُّجَاهِدُوْا بِاَمْوَالِهِمْ
وَاَنْفُسِهِمْ فِىْ سَبِيْلِ اللّٰهِ وَقَالُوْا لَا
تَنْفِرُوْا فِى الْحَرِّ ؕ قُلْ نَارُ جَهَنَّمَ اَشَدُّ
حَرًّا ؕ لَوْ كَانُوْا يَفْقَهُوْنَ ۝٨١

82. ಈಗ ಅವರು ನಗುವುದನ್ನು ಕಡಿಮೆ ಮಾಡಬೇಕು. ಹೆಚ್ಚು

فَلْيَضْحَكُوْا قَلِيْلًا وَّ لْيَبْكُوْا كَثِيْرًا ۚ جَزَآءً

ಅಳಬೇಕು. ಏಕೆಂದರೆ ಅವರು ಗಳಿಸುತ್ತಲಿದ್ದ ಪಾಪಗಳ ಪ್ರತಿಫಲವು ಇಂತಹದೇ (ಅದರ ಬಗ್ಗೆ ಅಳಬೇಕಾದುದೇ).

بِمَا كَانُوْا يَكْسِبُوْنَ ﴿٨٢﴾

83. ಅಲ್ಲಾಹನು ನಿಮ್ಮನ್ನು ಅವರ ಬಳಿಗೆ ಹಿಂದಿರುಗಿಸಿದರೆ ಹಾಗೂ ಇನ್ನು ಮುಂದೆ ಅವರಲ್ಲಿ ಯಾವುದಾದರೊಂದು ಕೂಟವು ಯುದ್ಧಕ್ಕೆ ಹೊರಡಲು ನಿಮ್ಮೊಡನೆ ಅನುಮತಿ ಕೇಳಿದರೆ "ಇನ್ನು ನೀವು ನನ್ನೊಂದಿಗೆ ಹೊರಡಲಾರಿರಿ ಮತ್ತು ನನ್ನ ಸಂಗಡ ಯಾವತ್ತು ಶತ್ರುಗಳೊಂದಿಗೆ ಹೋರಾಟ ನಡೆಸಲಾರಿರಿ. ನೀವು ಈ ಮುಂಚೆ ಕುಳಿತಿರುವುದನ್ನೇ ಇಷ್ಟಪಟ್ಟಿದ್ದೀರಿ. ಆದುದರಿಂದ ಈಗಲೂ ಮನೆಯೊಳಗೆ ಕುಳಿತಿರುವವರೊಂದಿಗೇ ಕುಳಿತುಕೊಂಡು ಇರಿ" ಎಂದು ಹೇಳಿರಿ.

فَاِنْ رَّجَعَكَ اللّٰهُ اِلٰى طَآئِفَةٍ مِّنْهُمْ
فَاسْتَاْذَنُوْكَ لِلْخُرُوْجِ فَقُلْ لَّنْ تَخْرُجُوْا
مَعِىَ اَبَدًا وَّلَنْ تُقَاتِلُوْا مَعِىَ عَدُوًّا ؕ اِنَّكُمْ
رَضِيْتُمْ بِالْقُعُوْدِ اَوَّلَ مَرَّةٍ فَاقْعُدُوْا
مَعَ الْخٰلِفِيْنَ ﴿٨٣﴾

84. ಇನ್ನು ಮುಂದೆ ಅವರಲ್ಲಿ ಯಾರಾದರೂ ಮರಣ ಹೊಂದಿದರೆ ಅವನ 'ಜನಾಝಾ ನಮಾಝ್' ಅನ್ನು ನೀವು ಎಷ್ಟು ಮಾತ್ರಕ್ಕೂ ನಿರ್ವಹಿಸಬಾರದು ಮತ್ತು ಅವನ ಸಮಾಧಿಯ ಬಳಿ ಎಂದಿಗೂ ನಿಲ್ಲಬಾರದು, ಏಕೆಂದರೆ ಅವರು ಅಲ್ಲಾಹ್ ಮತ್ತು ಅವನ ರಸೂಲರನ್ನು ನಿಷೇಧಿಸಿದರು. ಅವರು ಕರ್ಮಭ್ರಷ್ಟರಾಗಿರುವ ಸ್ಥಿತಿಯಲ್ಲಿ ಸತ್ತಿದ್ದಾರೆ.

وَلَا تُصَلِّ عَلٰٓى اَحَدٍ مِّنْهُمْ مَّاتَ اَبَدًا
وَّلَا تَقُمْ عَلٰى قَبْرِهٖ ؕ اِنَّهُمْ كَفَرُوْا بِاللّٰهِ
وَرَسُوْلِهٖ وَمَاتُوْا وَهُمْ فٰسِقُوْنَ ﴿٨٤﴾

85. ಅವರ ಶ್ರೀಮಂತಿಕೆ ಮತ್ತು ಅವರ ಸಂತಾನಾಧಿಕ್ಯವು ನಿಮ್ಮನ್ನು ವಂಚಿಸದಿರಲಿ. ಅಲ್ಲಾಹನಂತು ಈ ಧನ ಮತ್ತು ಸಂತತಿಗಳ ಮೂಲಕ ಅವರನ್ನು ಇದೇ ಲೋಕದಲ್ಲಿ ಶಿಕ್ಷಿಸಲಿಕ್ಕೂ ಅವರ ಪ್ರಾಣಗಳು ಸತ್ಯನಿಷೇಧಾವಸ್ಥೆಯಲ್ಲಿ ಹೊರಟು ಹೋಗುವಂತಾಗ ಲಿಕ್ಕೂ ನಿರ್ಧರಿಸಿದ್ದಾನೆ.

وَلَا تُعْجِبْكَ اَمْوَالُهُمْ وَاَوْلَادُهُمْ ؕ اِنَّمَا
يُرِيْدُ اللّٰهُ اَنْ يُّعَذِّبَهُمْ بِهَا فِى الدُّنْيَا
وَتَزْهَقَ اَنْفُسُهُمْ وَهُمْ كٰفِرُوْنَ ﴿٨٥﴾

86. ಅಲ್ಲಾಹನ ಮೇಲೆ ವಿಶ್ವಾಸವಿಡಿರಿ ಮತ್ತು ಅವನ ರಸೂಲರೊಂದಿಗೆ ಕೂಡಿ ಹೋರಾಟ ನಡೆಸಿರಿ ಎಂಬ ವಿಷಯವನ್ನೊಳಗೊಂಡ ಅಧ್ಯಾಯವೆಂದಾದರೂ ಅವತೀರ್ಣಗೊಂಡಾಗ ಅವರಲ್ಲಿದ್ದ ಸ್ಥಿತಿ ವಂತರೇ ನಿಮ್ಮೊಡನೆ ನಮಗೆ ಜಿಹಾದ್‌ನಲ್ಲಿ (ಧರ್ಮಯುದ್ಧದಲ್ಲಿ) ಭಾಗವಹಿಸುವ ಬಗ್ಗೆ ವಿನಾಯಿತಿ ಕೊಡಬೇಕೆಂದು ಕೇಳತೊಡ ಗಿದುದನ್ನು ನೀವು ಕಂಡಿರಿ. "ಕುಳಿತಿರುವವರೊಂದಿಗೆ ಇರಲಿಕ್ಕಾಗಿ ನಮ್ಮನ್ನು ಬಿಟ್ಟುಬಿಡಿರಿ" ಎಂದು ಅವರು ಹೇಳಿದರು.

وَاِذَآ اُنْزِلَتْ سُوْرَةٌ اَنْ اٰمِنُوْا بِاللّٰهِ
وَجَاهِدُوْا مَعَ رَسُوْلِهِ اسْتَاْذَنَكَ اُولُوا
الطَّوْلِ مِنْهُمْ وَقَالُوْا ذَرْنَا نَكُنْ مَّعَ الْقٰعِدِيْنَ ﴿٨٦﴾

87. ಅವರು ಮನೆಯಲ್ಲಿ ಕುಳಿತುಕೊಂಡಿರುವ ಮಹಿಳೆಯರೊಂದಿಗೆ ಸೇರುವುದನ್ನು ಇಷ್ಟಪಟ್ಟರು. ಅವರ ಹೃದಯಗಳಿಗೆ ಮುದ್ರೆ

رَضُوْا بِاَنْ يَّكُوْنُوْا مَعَ الْخَوَالِفِ وَطُبِعَ
عَلٰى قُلُوْبِهِمْ فَهُمْ لَا يَفْقَهُوْنَ ﴿٨٧﴾

ಯೊತ್ತಲ್ಪಟ್ಟಿತು. ಆದುದರಿಂದ ಈಗ ಅವರಿಗೆ ಏನೂ ತೋಚುವುದಿಲ್ಲ.

88. ಇದಕ್ಕೆ ವ್ಯತಿರಿಕ್ತವಾಗಿ ರಸೂಲರೂ ರಸೂಲರೊಂದಿಗೆ ವಿಶ್ವಾಸವಿರಿಸಿದವರೂ ತಮ್ಮ ಧನಗಳಿಂದಲೂ ತನುಗಳಿಂದಲೂ ಹೋರಾಟ ನಡೆಸಿದರು. ಈಗ ಎಲ್ಲ ಒಳಿತುಗಳೂ ಅವರ ಪಾಲಿಗಿವೆ ಮತ್ತು ಅವರೇ ಯಶಸ್ವಿಗಳೂ ಆಗಿರುತ್ತಾರೆ.

لٰكِنِ الرَّسُوْلُ وَالَّذِيْنَ اٰمَنُوْا مَعَهٗ
جٰهَدُوْا بِاَمْوَالِهِمْ وَاَنْفُسِهِمْ ؕ وَاُولٰٓئِكَ
لَهُمُ الْخَيْرٰتُ ۫ وَاُولٰٓئِكَ هُمُ الْمُفْلِحُوْنَ ﴿٨٨﴾

89. ಅಲ್ಲಾಹನು ಅವರಿಗಾಗಿ ತಳಭಾಗದಲ್ಲಿ ಕಾಲುವೆಗಳು ಪ್ರವಹಿಸುತ್ತಿರುವ ಸ್ವರ್ಗೋದ್ಯಾನಗಳನ್ನು ಸಿದ್ಧಗೊಳಿಸಿಟ್ಟಿರುವನು. ಅವರು ಅವುಗಳಲ್ಲಿ ಸದಾಕಾಲ ವಾಸಿಸುವರು. ಇದುವೇ ಉನ್ನತವಾದ ವಿಜಯ.

اَعَدَّ اللّٰهُ لَهُمْ جَنّٰتٍ تَجْرِيْ مِنْ تَحْتِهَا
الْاَنْهٰرُ خٰلِدِيْنَ فِيْهَا ؕ ذٰلِكَ الْفَوْزُ الْعَظِيْمُ ﴿٨٩﴾ ع

90. ಅನೇಕ ಮಂದಿ 'ಗ್ರಾಮೀಣ' ಅರಬರೂ ಬಂದರು. ಅವರು ತಮಗೂ ಹಿಂದೆ ಉಳಿದಿರಲು ಅನುಮತಿ ನೀಡಲ್ಪಡಬೇಕೆಂದು ನೆಪ ಹೇಳಿದರು. ಅಲ್ಲಾಹ್ ಮತ್ತು ಅವನ ರಸೂಲರೊಂದಿಗೆ ಈಮಾನಿನ ಸುಳ್ಳು ಕರಾರನ್ನು ಮಾಡಿದ್ದವರು ಹೀಗೆ ಕುಳಿತುಬಿಟ್ಟರು. ಈ ಗ್ರಾಮೀಣರಲ್ಲಿ ಸತ್ಯನಿಷೇಧಿಗಳು ಸದ್ಯವೇ ವೇದನಾಯುಕ್ತ ಶಿಕ್ಷೆಯನ್ನು ಅನುಭವಿಸಲಿರುವರು.

وَجَآءَ الْمُعَذِّرُوْنَ مِنَ الْاَعْرَابِ لِيُؤْذَنَ
لَهُمْ وَقَعَدَ الَّذِيْنَ كَذَبُوا اللّٰهَ وَرَسُوْلَهٗ ؕ
سَيُصِيْبُ الَّذِيْنَ كَفَرُوْا مِنْهُمْ عَذَابٌ اَلِيْمٌ ﴿٩٠﴾

91. ದುರ್ಬಲರೂ ರೋಗಿಗಳೂ ಧರ್ಮಯುದ್ಧದಲ್ಲಿ ಪಾಲ್ಗೊಳ್ಳಲು ದಾರಿವೆಚ್ಚವೊದಗದವರೂ ನಿಷ್ಕಳಂಕ ಹೃದಯದೊಂದಿಗೆ ಅಲ್ಲಾಹ್ ಮತ್ತು ಅವನ ರಸೂಲರಿಗೆ ನಿಷ್ಠರಾಗಿದ್ದರೆ ಹಿಂದೆ ಉಳಿದು ಬಿಡುವುದರಲ್ಲಿ ಅಡ್ಡಿಯಿಲ್ಲ.[35] ಇಂತಹ ಸಜ್ಜನೋತ್ತಮರ ಬಗ್ಗೆ ಆಕ್ಷೇಪಕ್ಕೆ ಅವಕಾಶವಿಲ್ಲ. ಅಲ್ಲಾಹನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

لَيْسَ عَلَى الضُّعَفَآءِ وَلَا عَلَى الْمَرْضٰى وَلَا
عَلَى الَّذِيْنَ لَا يَجِدُوْنَ مَا يُنْفِقُوْنَ حَرَجٌ
اِذَا نَصَحُوْا لِلّٰهِ وَرَسُوْلِهٖ ؕ مَا عَلَى
الْمُحْسِنِيْنَ مِنْ سَبِيْلٍ ؕ وَاللّٰهُ غَفُوْرٌ رَّحِيْمٌ ﴿٩١﴾

92. ಇದೇ ರೀತಿಯಲ್ಲಿ ತಾವೇ ಬಂದು ನಮಗೆ ಸವಾರಿಗಾಗಿ ಏನಾದರೂ ಒದಗಿಸಿರೆಂದು ಕೇಳಿಕೊಂಡವರ ಬಗೆಗೂ ಯಾವತ್ತು ಆಕ್ಷೇಪಕ್ಕೆ ಅವಕಾಶವಿಲ್ಲ ಮತ್ತು ನಾನು ನಿಮಗೆ ಸವಾರಿಗಾಗಿ ಒದಗಿಸುವ ಯಾವ ವ್ಯವಸ್ಥೆಯನ್ನೂ ಮಾಡಲಾರೆನೆಂದು ನೀವು ಹೇಳಿದಾಗ ಅವರು ಅಸಹಾಯಕರಾಗಿ ಹಿಂದಿರುಗಿದರು. ಅವರ

وَّلَا عَلَى الَّذِيْنَ اِذَا مَاۤ اَتَوْكَ لِتَحْمِلَهُمْ
قُلْتَ لَاۤ اَجِدُ مَاۤ اَحْمِلُكُمْ عَلَيْهِ ۪ تَوَلَّوْا
وَّاَعْيُنُهُمْ تَفِيْضُ مِنَ الدَّمْعِ حَزَنًا اَلَّا

35. ಮೇಲ್ನೋಟಕ್ಕೆ ನೆಪಗಳನ್ನು ಹೊಂದಿರುವವರ ವೃದ್ಧಾಪ್ಯ, ರೋಗ ಅಥವಾ ಅಸಾಮರ್ಥ್ಯವು ಕ್ಷಮೆಗೆ ಸಾಕಾಗಲಾರದು. ಅವರು ಅಲ್ಲಾಹನ ಮತ್ತು ಪ್ರವಾದಿಯ ನೈಜ ನಿಷ್ಠಾವಂತರಾಗಿದ್ದಾಗ ಮಾತ್ರ ಇದು ಅವರ ಪಾಲಿಗೆ ಕ್ಷಮೆಗೆ ಕಾರಣವಾದೀತು. ಅನ್ಯಥಾ ಕರ್ತವ್ಯ ಪಾಲಿಸಬೇಕಾಗಿದ್ದ ಸಂದರ್ಭದಲ್ಲಿ ಅವನು ಅಸಮರ್ಥನೂ ರೋಗಿಯೂ ಆಗಿದ್ದನೆಂಬ ಕಾರಣಕ್ಕಾಗಿ ಮಾತ್ರ ಯಾರನ್ನೂ ಕ್ಷಮಿಸಲಾಗುವುದಿಲ್ಲ.

ಕಣ್ಣುಗಳಿಂದ ಅಶ್ರುಧಾರೆ ಇಳಿಯುತ್ತಿತ್ತು. ಅವರಿಗೆ ತಮ್ಮ ಸ್ವಂತ ಖರ್ಚಿನಿಂದ ಧರ್ಮಯುದ್ಧದಲ್ಲಿ ಭಾಗವಹಿಸಲು ನಾವು ಶಕ್ತರಾಗಿಲ್ಲವಲ್ಲಾ! ಎಂಬ ಅತೀವ ದುಃಖವಿತ್ತು.

يَجِدُوا مَا يُنفِقُونَ ﴿٩٢﴾

93. ಆದರೆ ಧನಿಕರಾಗಿದ್ದೂ ಧರ್ಮಯುದ್ಧದಲ್ಲಿ ಭಾಗವಹಿಸುವುದರಿಂದ ತಮಗೆ ವಿನಾಯಿತಿ ಕೊಡಬೇಕೆಂದು ನಿಮ್ಮೊಡನೆ ನಿವೇದಿಸಿ ಕೊಂಡವರು ಆಕ್ಷೇಪಾರ್ಹರು. ಅವರು ಮನೆಯೊಳಗಿರುವ ಸ್ತ್ರೀಯರೊಂದಿಗೆ ಸೇರಿಕೊಳ್ಳುವುದನ್ನು ಇಷ್ಟಪಟ್ಟರು. ಅಲ್ಲಾಹನು ಅವರ ಹೃದಯಗಳಿಗೆ ಮುದ್ರೆಯೊತ್ತಿಬಿಟ್ಟನು. ಆದುದರಿಂದ (ಅಲ್ಲಾಹನ ಬಳಿ ಅವರ ವರ್ತನೆಯ ಪರಿಣಾಮ ಯಾವ ರೂಪ ದಲ್ಲಿ ಹೊರಬೀಳಲಿದೆಯೆಂಬುದು) ಅವರಿಗೆ ತಿಳಿಯುವುದಿಲ್ಲ.

إِنَّمَا السَّبِيلُ عَلَى الَّذِينَ يَسْتَأْذِنُونَكَ
وَهُمْ أَغْنِيَاءُ ۚ رَضُوا بِأَن يَكُونُوا
مَعَ الْخَوَالِفِ وَطَبَعَ اللَّهُ عَلَىٰ قُلُوبِهِمْ
فَهُمْ لَا يَعْلَمُونَ ﴿٩٣﴾

94. *ನೀವು ಹಿಂದಿರುಗಿ ಅವರ ಬಳಿಗೆ ತಲುಪುವಾಗ ಅವರು ತರ ತರದ ನೆಪಗಳನ್ನೊಡ್ಡುವರು. ಆದರೆ, ನೀವು ಸ್ಪಷ್ಟವಾಗಿ (ಹೀಗೆ) ಹೇಳಿಬಿಡಬೇಕು- "ನೆಪಗಳನ್ನೊಡ್ಡಬೇಡಿರಿ. ನಾವು ನಿಮ್ಮ ಯಾವ ಮಾತನ್ನೂ ನಂಬಲಾರೆವು. ಅಲ್ಲಾಹನು ನಮಗೆ ನಿಮ್ಮ ಸ್ಥಿತಿ ಗತಿಗಳನ್ನು ತಿಳಿಸಿ ಬಿಟ್ಟಿರುವನು. ಇನ್ನು ಅಲ್ಲಾಹ್ ಮತ್ತು ಅವನ ರಸೂಲರು ನಿಮ್ಮ ವರ್ತನೆಯನ್ನು ನೋಡುವರು. ಅನಂತರ ನೀವು ವ್ಯಕ್ತ ಅವ್ಯಕ್ತಗಳನ್ನೆಲ್ಲ ಅರಿಯುವವನ ಕಡೆಗೆ ಮರಳಿಸಲ್ಪಡುವಿರಿ. ಅವನು ನೀವೇನೇನು ಮಾಡುತ್ತಿದ್ದಿರಿ ಎಂಬುದನ್ನು ನಿಮಗೆ ತಿಳಿಸುವನು."

يَعْتَذِرُونَ إِلَيْكُمْ إِذَا رَجَعْتُمْ إِلَيْهِمْ ۚ
قُل لَّا تَعْتَذِرُوا لَن نُّؤْمِنَ لَكُمْ قَدْ
نَبَّأَنَا اللَّهُ مِنْ أَخْبَارِكُمْ ۚ وَسَيَرَى اللَّهُ
عَمَلَكُمْ وَرَسُولُهُ ثُمَّ تُرَدُّونَ إِلَىٰ عَالِمِ
الْغَيْبِ وَالشَّهَادَةِ فَيُنَبِّئُكُم بِمَا
كُنتُمْ تَعْمَلُونَ ﴿٩٤﴾

الجزء ١١

95. ನೀವು ಮರಳುವಾಗ ಅವರನ್ನು ನೀವು ಬಿಟ್ಟುಬಿಡಬೇಕೆಂದು ಅವರು ನಿಮ್ಮ ಮುಂದೆ ಅಲ್ಲಾಹನಾಣೆಗಳನ್ನು ಹಾಕುವರು. ಆ ಪ್ರಕಾರ ಅವರನ್ನು ನೀವು ಬಿಟ್ಟೇ ಬಿಡಿರಿ. ಏಕೆಂದರೆ, ಅವರು ಮಾಲಿನ್ಯವಾಗಿರುತ್ತಾರೆ ಮತ್ತು ಅವರ ನಿಜವಾದ ವಾಸಸ್ಥಾನ ನರಕ. ಅದು ಅವರು ಗಳಿಸಿದುದರ ಫಲವಾಗಿ ಅವರಿಗೆ ಸಿಗುವುದು.

سَيَحْلِفُونَ بِاللَّهِ لَكُمْ إِذَا انقَلَبْتُمْ إِلَيْهِمْ
لِتُعْرِضُوا عَنْهُمْ ۖ فَأَعْرِضُوا عَنْهُمْ ۖ إِنَّهُمْ
رِجْسٌ ۖ وَمَأْوَاهُمْ جَهَنَّمُ جَزَاءً بِمَا
كَانُوا يَكْسِبُونَ ﴿٩٥﴾

96. ನೀವು ಅವರೊಂದಿಗೆ ಪ್ರಸನ್ನರಾಗಬೇಕೆಂದು ಅವರು ನಿಮ್ಮ ಮುಂದೆ ಆಣೆಗಳನ್ನು ಹಾಕುವರು. ವಸ್ತುತಃ ನೀವು ಅವರೊಂದಿಗೆ ಪ್ರಸನ್ನರಾಗಿಬಿಟ್ಟರೂ ಅಲ್ಲಾಹನು ಎಂದೆಂದಿಗೂ ಇಂತಹ ಕರ್ಮಭ್ರಷ್ಟರೊಂದಿಗೆ ಪ್ರಸನ್ನನಾಗಲಾರನು.

يَحْلِفُونَ لَكُمْ لِتَرْضَوْا عَنْهُمْ ۖ فَإِن تَرْضَوْا
عَنْهُمْ فَإِنَّ اللَّهَ لَا يَرْضَىٰ عَنِ الْقَوْمِ
الْفَاسِقِينَ ﴿٩٦﴾

*ಇಲ್ಲಿಂದ **11ನೆಯ** ಕಾಂಡ ಆರಂಭ.

97. ಈ ಬದವೀ ಅರಬರು ಸತ್ಯನಿಷೇಧದಲ್ಲಿಯೂ ಕಾಪಟ್ಯದಲ್ಲಿಯೂ ಅತಿ ಕಠೋರರಾಗಿದ್ದಾರೆ. ಅಲ್ಲಾಹನು ತನ್ನ ರಸೂಲರ ಮೇಲೆ ಅವತೀರ್ಣಗೊಳಿಸಿದ ಧರ್ಮದ ಮೇರೆಗಳ ಬಗ್ಗೆ ಅವರು ಅಜ್ಞರಾಗಿರುವ ಸಂಭವವೇ ಹೆಚ್ಚು.[36] ಅಲ್ಲಾಹನು ಸರ್ವಜ್ಞನೂ ಮಹಾ ಧೀಮಂತನೂ ಆಗಿರುತ್ತಾನೆ.

اَلۡاَعۡرَابُ اَشَدُّ كُفۡرًا وَّنِفَاقًا وَّاَجۡدَرُ اَلَّا
يَعۡلَمُوۡا حُدُوۡدَ مَاۤ اَنۡزَلَ اللّٰهُ عَلٰى رَسُوۡلِهٖ‌ؕ
وَاللّٰهُ عَلِيۡمٌ حَكِيۡمٌ ﴿۹۷﴾

98. ಅಲ್ಲಾಹನ ಮಾರ್ಗದಲ್ಲಿ ಒಂದಿಷ್ಟು ಖರ್ಚು ಮಾಡಿದರೂ ಅದನ್ನು ಬಲಾತ್ಕಾರದ ದಂಡನೆಯೆಂದು ತಿಳಿದುಕೊಳ್ಳುವವರೂ ಈ ಬದವೀ ಅರಬರಲ್ಲಿದ್ದಾರೆ ಮತ್ತು (ನೀವು ಯಾವುದಾದರೊಂದು ವಿಪತ್ತಿನಲ್ಲಿ ಸಿಕ್ಕಿಬಿಟ್ಟರೆ ನೀವು ಅವರನ್ನು ಬಿಗಿದಿರುವ ಈ ವ್ಯವಸ್ಥೆಯ ವಿಧೇಯತೆಯ ನೊಗವನ್ನು ತಮ್ಮ ಕೊರಳಿನಿಂದ ತೆಗೆದೆಸೆದುಬಿಡಬಹುದೆಂದು ಭಾವಿಸಿ) ನಿಮ್ಮ ಬಗ್ಗೆ ಕಾಲಚಕ್ರದ ಉರುಳಾಟವನ್ನು ನಿರೀಕ್ಷಿಸುತ್ತಾರೆ. ವಸ್ತುತಃ ಕೆಡುಕಿನ ಚಕ್ರವು ಅವರ ಮೇಲೆಯೇ ಉರುಳಿದೆ. ಅಲ್ಲಾಹನು ಸರ್ವಶ್ರುತನೂ ಸರ್ವಜ್ಞನೂ ಆಗಿರುತ್ತಾನೆ.

وَمِنَ الۡاَعۡرَابِ مَنۡ يَّتَّخِذُ مَا يُنۡفِقُ
مَغۡرَمًا وَّيَتَرَبَّصُ بِكُمُ الدَّوَآٮِٕرَ‌ؕ عَلَيۡهِمۡ
دَآٮِٕرَةُ السَّوۡءِ‌ؕ وَاللّٰهُ سَمِيۡعٌ عَلِيۡمٌ ﴿۹۸﴾

99. ಈ ಬದವೀ ಅರಬರಲ್ಲೇ ಅಲ್ಲಾಹ್ ಮತ್ತು ಅಂತಿಮ ದಿನದ ಮೇಲೆ ವಿಶ್ವಾಸವಿಡುವವರೂ ಕೆಲವರಿದ್ದಾರೆ. ಅವರು ತಾವು ಖರ್ಚು ಮಾಡುವುದನ್ನು ಅಲ್ಲಾಹನ ಸಾಮಿಪ್ಯ ಮತ್ತು ರಸೂಲರ ಕಡೆಯಿಂದ ಕೃಪಾಶೀರ್ವಾದ ಪಡೆಯುವ ಸಾಧನವನ್ನಾಗಿ ಮಾಡುತ್ತಾರೆ. ಅಹುದು, ಅದು ಅವರಿಗೆ ನಿಜಕ್ಕೂ ಸಾಮಿಪ್ಯದ ಸಾಧನವಾಗಿದೆ ಮತ್ತು ಅಲ್ಲಾಹ್ ನಿಶ್ಚಯವಾಗಿಯೂ ಅವರನ್ನು ತನ್ನ ಕರುಣೆಯೊಳಗೆ ಪ್ರವೇಶಗೊಳಿಸುವನು. ನಿಶ್ಚಯವಾಗಿಯೂ ಅಲ್ಲಾಹನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

وَمِنَ الۡاَعۡرَابِ مَنۡ يُّؤۡمِنُ بِاللّٰهِ وَ
الۡيَوۡمِ الۡاٰخِرِ وَيَتَّخِذُ مَا يُنۡفِقُ قُرُبٰتٍ
عِنۡدَ اللّٰهِ وَصَلَوٰتِ الرَّسُوۡلِ‌ؕ اَلَاۤ اِنَّهَا
قُرۡبَةٌ لَّهُمۡ‌ؕ سَيُدۡخِلُهُمُ اللّٰهُ فِىۡ رَحۡمَتِهٖ‌ؕ
اِنَّ اللّٰهَ غَفُوۡرٌ رَّحِيۡمٌ ﴿۹۹﴾ ع

36. ಬದವಿ ಅರಬರು ಎಂದರೆ ಮದೀನಾ ಸುತ್ತಮುತ್ತಲಿನ ಗ್ರಾಮೀಣ ಮತ್ತು ಮರುಭೂಮಿ ಪ್ರದೇಶದಲ್ಲಿ ವಾಸಿಸುವ ಅರಬರಾಗಿದ್ದಾರೆ. ಇವರು ಮದೀನಾದಲ್ಲಿ ಪ್ರಬಲ ಮತ್ತು ಸುವ್ಯವಸ್ಥಿತವಾದ ಶಕ್ತಿಯೊಂದು ಉದಯವಾಗುತ್ತಿರುವುದನ್ನು ಕಂಡು ಮೊದಲು ಅದಕ್ಕೆ ಮಾರು ಹೋದರು. ಆದರೆ ಅನಂತರ ಇಸ್ಲಾಮ್ ಮತ್ತು ಸತ್ಯನಿಷೇಧದ ಸಂಘರ್ಷಗಳ ಸಂದರ್ಭದಲ್ಲಿ ಒಂದು ಅವಧಿಯ ತನಕ ಅವರು ಸಂದರ್ಭ ಸಾಧಕತನದ ಧೋರಣೆ ಅನುಸರಿಸಿದರು. ಅನಂತರ ಇಸ್ಲಾಮೀ ಸರಕಾರದ ಪ್ರಾಬಲ್ಯ ನಜ್ದ್ ಮತ್ತು ಹಿಜಾಝ್‌ನ ಒಂದು ದೊಡ್ಡ ಭಾಗದಲ್ಲಿ ವ್ಯಾಪಿಸಿ, ವಿರೋಧಿ ಶಕ್ತಿಗಳ ಪ್ರಾಬಲ್ಯ ಕೊನೆಗೊಳ್ಳತೊಡಗಿದಾಗ, ಇನ್ನು ಇಸ್ಲಾಮಿನ ವರ್ತುಲದೊಳಕ್ಕೆ ಪ್ರವೇಶಿಸುವುದರಲ್ಲೇ ಹಿತವಿದೆ ಎಂದು ಅವರು ಭಾವಿಸಿದರು. ವಿಶ್ವಾಸ ತಂದಿದ್ದ ಮತ್ತು ಪ್ರಾಮಾಣಿಕವಾಗಿ ಅದರ ಬೇಡಿಕೆಗಳನ್ನು ಈಡೇರಿಸಲು ಸನ್ನದ್ಧರಾಗಿದ್ದ ಕೆಲವು ಮಂದಿಯೂ ಅವರಲ್ಲಿದ್ದರು. ಅವರ ಪ್ರಸ್ತುತ ಪರಿಸ್ಥಿತಿಯನ್ನೇ ಈ ಸೂಕ್ತದಲ್ಲಿ ವರ್ಣಿಸಲಾಗಿದೆ. ಅರ್ಥಾತ್ ಪಟ್ಟಣದವರಿಗೆ ಹೋಲಿಸಿದರೆ ಈ ಗ್ರಾಮ ಮರುಭೂಮಿಯ ನಿವಾಸಿಗಳು ಹೆಚ್ಚು ಕಾಪಟ್ಯದ ಧೋರಣೆಯನ್ನು ಹೊಂದಿದ್ದಾರೆ. ಸತ್ಯವನ್ನು ನಿರಾಕರಿಸುವ ಭಾವ ಅವರಲ್ಲಿ ಹೆಚ್ಚು ಕಂಡು ಬರುತ್ತದೆ. ಅನಂತರ ಅದರ ಕಾರಣವನ್ನೂ ವಿವರಿಸಲಾಗಿದೆ. ಪಟ್ಟಣದವರು ಜ್ಞಾನಿಗಳು ಮತ್ತು ಸತ್ಯದ ವಾಹಕರ ಸಹವಾಸದಿಂದ ಧರ್ಮ ಮತ್ತು ಅದರ ಮೇರೆಗಳ ಬಗ್ಗೆ ತಿಳುವಳಿಕೆಯನ್ನು ಗಳಿಸುತ್ತಾರೆ. ಆದರೆ ಬದವೀಗಳು ಹೊಟ್ಟೆ ಹೊರೆಯಲಿಕ್ಕಾಗಿ ಬದುಕುವ ಪ್ರಾಣಿಗಳಂತೆ ಸಮಸ್ತ ಜೀವನವನ್ನು ರಾತ್ರಿ ಹಗಲೆನ್ನದೆ ಜೀವನಾಧಾರ ಸಂಪಾದಿಸುವುದಕ್ಕಾಗಿ ಮುಡಿಪಾಗಿಡುತ್ತಾರೆ. ಪ್ರಾಣಿ ಸದೃಶ ಜೀವನಕ್ಕಿಂತ ಉನ್ನತವಾದ ಯಾವುದೇ ವಿಚಾರಗಳ ಬಗ್ಗೆ ಗಮನಹರಿಸಲಿಕ್ಕೂ ಅವರಿಗೆ ಅವಕಾಶ ದೊರೆಯುವುದಿಲ್ಲ. ಆದ್ದರಿಂದ ಧರ್ಮ ಮತ್ತು ಅದರ ಮೇರೆಗಳ ಬಗ್ಗೆ ಅವರು ಅಜ್ಞರಾಗಿರುವ ಸಾಧ್ಯತೆಗಳು ಹೆಚ್ಚಿವೆ. ಮುಂದೆ 122ನೆಯ ಸೂಕ್ತದಲ್ಲಿ ಅವರ ಈ ರೋಗಕ್ಕೆ ನಿವಾರಣೋಪಾಯವನ್ನು ಸೂಚಿಸಲಾಗಿದೆ.

100. ಈಮಾನಿನ ಕರೆಗೆ ಓಗೊಡುವುದರಲ್ಲಿ ಮೊದಲಿಗರಾದ ಮುಹಾಜಿರ್ ಮತ್ತು ಅನ್ಸಾರರೊಂದಿಗೂ ಅನಂತರ ಸತ್ಯಸಂಧತೆಯೊಂದಿಗೆ ಅವರನ್ನು ಹಿಂಬಾಲಿಸಿದವರೊಂದಿಗೂ ಅಲ್ಲಾಹನು ಪ್ರಸನ್ನನಾದನು ಮತ್ತು ಅಲ್ಲಾಹನೊಂದಿಗೆ ಅವರು ಪ್ರಸನ್ನರಾದರು. ಅಲ್ಲಾಹ್ ಅವರಿಗಾಗಿ ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವಂತಹ ಸ್ವರ್ಗೋದ್ಯಾನಗಳನ್ನು ಸಿದ್ಧಗೊಳಿಸಿಟ್ಟಿರುತ್ತಾನೆ. ಅವುಗಳಲ್ಲಿ ಅವರು ಸದಾ ವಾಸಿಸುತ್ತಿರುವರು. ಇದುವೇ ಅತ್ಯಂತ ಭವ್ಯ ಯಶಸ್ಸು.

وَالسّٰبِقُوْنَ الْاَوَّلُوْنَ مِنَ الْمُهٰجِرِيْنَ
وَالْاَنْصَارِ وَالَّذِيْنَ اتَّبَعُوْهُمْ بِاِحْسَانٍ
رَّضِيَ اللّٰهُ عَنْهُمْ وَرَضُوْا عَنْهُ وَاَعَدَّ
لَهُمْ جَنّٰتٍ تَجْرِيْ تَحْتَهَا الْاَنْهٰرُ خٰلِدِيْنَ
فِيْهَآ اَبَدًا ؕ ذٰلِكَ الْفَوْزُ الْعَظِيْمُ ﴿۱۰۰﴾

101. ನಿಮ್ಮ ಆಸುಪಾಸಿನಲ್ಲಿರುವ ಬದವೀಯರಲ್ಲಿ ಅನೇಕ ಕಪಟ ವಿಶ್ವಾಸಿಗಳಿದ್ದಾರೆ. ಅದೇ ರೀತಿಯಲ್ಲಿ ಮದೀನಾ ವಾಸಿಗಳಲ್ಲಿಯೂ ಕಪಟವಿಶ್ವಾಸಿಗಳಿದ್ದಾರೆ. ಅವರು ಕಾಪಟ್ಯದಲ್ಲಿ ನಿಸ್ಸೀಮರಾಗಿದ್ದಾರೆ. ನೀವು ಅವರನ್ನು ಅರಿತಿಲ್ಲ. ನಾವು ಅವರನ್ನು ಅರಿತಿದ್ದೇವೆ. ನಾವು ಅವರಿಗೆ ಇಮ್ಮಡಿ ಶಿಕ್ಷೆ ಕೊಡುವ ಕಾಲ ಸಮೀಪವಿದೆ. ಅನಂತರ ಅವರು ಬಹುದೊಡ್ಡ ಶಿಕ್ಷೆಗಾಗಿ ಮರಳಿ ತರಲ್ಪಡುವರು.

وَمِمَّنْ حَوْلَكُمْ مِّنَ الْاَعْرَابِ مُنٰفِقُوْنَ ؕۛ
وَمِنْ اَهْلِ الْمَدِيْنَةِ ؔۛ مَرَدُوْا عَلَى
النِّفَاقِ ۫ لَا تَعْلَمُهُمْ ؕ نَحْنُ نَعْلَمُهُمْ ؕ
سَنُعَذِّبُهُمْ مَّرَّتَيْنِ ثُمَّ يُرَدُّوْنَ اِلٰى
عَذَابٍ عَظِيْمٍ ۚ﴿۱۰۱﴾

ع وقف منزل

102. ತಮ್ಮ ಅಪರಾಧಗಳನ್ನು ಒಪ್ಪಿಕೊಂಡಂತಹ ಬೇರೆ ಕೆಲವರಿದ್ದಾರೆ. ಅವರ ಕರ್ಮ ಸಮ್ಮಿಶ್ರವಾಗಿದೆ. ಸ್ವಲ್ಪ ಸತ್ಕರ್ಮ ಮತ್ತು ಸ್ವಲ್ಪ ದುಷ್ಕರ್ಮ. ಅಲ್ಲಾಹ್ ಅವರ ಮೇಲೆ ಪುನಃ ದಯೆ ತೋರಲೂ ಸಾಕು. ಏಕೆಂದರೆ ಅವನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

وَاٰخَرُوْنَ اعْتَرَفُوْا بِذُنُوْبِهِمْ خَلَطُوْا
عَمَلًا صَالِحًا وَّاٰخَرَ سَيِّئًا ؕ عَسَى اللّٰهُ اَنْ
يَّتُوْبَ عَلَيْهِمْ ؕ اِنَّ اللّٰهَ غَفُوْرٌ رَّحِيْمٌ ﴿۱۰۲﴾

103. ಓ ಪೈಗಂಬರರೇ, ನೀವು ಅವರ ಸಂಪತ್ತುಗಳಿಂದ 'ದಾನ ಧರ್ಮ'ಗಳನ್ನು ಪಡೆದು ಅವರನ್ನು ಶುದ್ಧೀಕರಿಸಿರಿ ಮತ್ತು (ಸನ್ಮಾರ್ಗದಲ್ಲಿ) ಅವರನ್ನು ಮುಂದುವರಿಸಿರಿ ಮತ್ತು ಅವರಿಗಾಗಿ ಪ್ರಾರ್ಥಿಸಿರಿ. ಏಕೆಂದರೆ, ನಿಮ್ಮ ಪ್ರಾರ್ಥನೆಯು ಅವರ ಮನಶ್ಶಾಂತಿಗೆ ಕಾರಣವಾಗುವುದು. ಅಲ್ಲಾಹನು ಸರ್ವಶ್ರುತನೂ ಸರ್ವಜ್ಞನೂ ಆಗಿರುತ್ತಾನೆ.

خُذْ مِنْ اَمْوَالِهِمْ صَدَقَةً تُطَهِّرُهُمْ
وَتُزَكِّيْهِمْ بِهَا وَصَلِّ عَلَيْهِمْ ؕ اِنَّ صَلٰوتَكَ
سَكَنٌ لَّهُمْ ؕ وَاللّٰهُ سَمِيْعٌ عَلِيْمٌ ﴿۱۰۳﴾

104. ಅಲ್ಲಾಹ್ ತನ್ನ ದಾಸರ ಪಶ್ಚಾತ್ತಾಪವನ್ನು ಸ್ವೀಕರಿಸುವವನೂ ಅವರ ದಾನಗಳಿಗೆ ಸ್ವೀಕಾರ ನೀಡುವವನೂ ಅತ್ಯಧಿಕ ಕ್ಷಮಿಸುವವನೂ ಕರುಣಾನಿಧಿಯೂ ಆಗಿರುತ್ತಾನೆಂದು ಅವರಿಗೆ ತಿಳಿದಿಲ್ಲವೇ?

اَلَمْ يَعْلَمُوْٓا اَنَّ اللّٰهَ هُوَ يَقْبَلُ التَّوْبَةَ
عَنْ عِبَادِهٖ وَيَاْخُذُ الصَّدَقٰتِ وَاَنَّ اللّٰهَ
هُوَ التَّوَّابُ الرَّحِيْمُ ﴿۱۰۴﴾

105. ಓ ಪೈಗಂಬರರೇ, ಅವರೊಡನೆ ಹೇಳಿರಿ, "ನೀವು ಪ್ರವರ್ತಿಸಿರಿ. ನಿಮ್ಮ ವರ್ತನೆ ಈಗ ಹೇಗಿರುತ್ತದೆಂದು ಅಲ್ಲಾಹ್, ಅವನ ರಸೂಲ್ ಮತ್ತು ಸತ್ಯವಿಶ್ವಾಸಿಗಳು ವೀಕ್ಷಿಸುವರು. ಆ ಬಳಿಕ ಪ್ರತ್ಯಕ್ಷ ಮತ್ತು ರಹಸ್ಯಗಳೆಲ್ಲವನ್ನೂ ಅರಿಯುವಾತನ ಕಡೆಗೆ ನೀವು ಮರಳಿಸಲ್ಪಡುವಿರಿ. ನೀವೇನು ಮಾಡುತ್ತಲಿದ್ದಿರೆಂಬುದನ್ನು ಅವನು ನಿಮಗೆ ತೋರಿಸಿ ಕೊಡುವನು."

وَقُلِ اعْمَلُوا فَسَيَرَى اللّٰهُ عَمَلَكُمْ
وَرَسُولُهُ وَالْمُؤْمِنُونَ ۗ وَسَتُرَدُّونَ إِلَىٰ
عٰلِمِ الْغَيْبِ وَالشَّهَادَةِ فَيُنَبِّئُكُمْ بِمَا
كُنْتُمْ تَعْمَلُونَ ﴿١٠٥﴾

106. ಇನ್ನು ಕೆಲವರಿದ್ದಾರೆ. ಅವರ ಪ್ರಕರಣವು ಇನ್ನೂ ಅಲ್ಲಾಹನ ಆಜ್ಞೆಯನ್ನು ಅವಲಂಬಿಸಿದೆ. ಅವನು ಇಷ್ಟಪಟ್ಟರೆ ಅವರಿಗೆ ಶಿಕ್ಷೆ ಕೊಡಬಹುದು. ಇಷ್ಟಪಟ್ಟರೆ ಅವರ ಮೇಲೆ ಪುನಃ ದಯೆತೋರಲೂ ಬಹುದು. ಅಲ್ಲಾಹನು ಸರ್ವಜ್ಞನೂ ಯುಕ್ತಿಪೂರ್ಣನೂ ಆಗಿರುತ್ತಾನೆ.

وَآخَرُونَ مُرْجَوْنَ لِأَمْرِ اللّٰهِ إِمَّا يُعَذِّبُهُمْ
وَإِمَّا يَتُوبُ عَلَيْهِمْ ۗ وَاللّٰهُ عَلِيمٌ حَكِيمٌ ﴿١٠٦﴾

107. ಒಂದು ಮಸೀದಿ ಕಟ್ಟಿಸಿದ ಕೆಲವರಿದ್ದಾರೆ. ಅವರು ಅದನ್ನು (ಸತ್ಯಾಹ್ವಾನಕ್ಕೆ) ಹಾನಿಯನ್ನುಂಟು ಮಾಡಲಿಕ್ಕೂ (ಅಲ್ಲಾಹನ ದಾಸ್ಯ-ಆರಾಧನೆ ಮಾಡುವ ಬದಲಿಗೆ) ಸತ್ಯವನ್ನು ನಿಷೇಧಿಸಲಿಕ್ಕೂ ಸತ್ಯವಿಶ್ವಾಸಿಗಳೊಳಗೆ ಒಡಕನ್ನುಂಟು ಮಾಡಲಿಕ್ಕೂ (ಈ ತೋರಿಕೆಯ ಆರಾಧನಾಲಯವನ್ನು) ಈ ಮುಂಚೆ ಅಲ್ಲಾಹ್ ಮತ್ತು ಅವನ ರಸೂಲರ ವಿರುದ್ಧ ಯುದ್ಧಾಸಕ್ತನಾಗಿದ್ದವನಿಗೆ ಹೊಂಚುದಾಣವನ್ನಾಗಿಡುವ ಉದ್ದೇಶದಿಂದ ಕಟ್ಟಿಸಿರುತ್ತಾರೆ. ನಮ್ಮ ಉದ್ದೇಶವು ಒಳ್ಳೆಯದಾಗಿದ್ದಿತೇ ವಿನಾ ಇನ್ನಾವುದೂ ಇರಲಿಲ್ಲವೆಂದು ಅವರು ಖಂಡಿತವಾಗಿಯೂ ಪ್ರಮಾಣ ಮಾಡುತ್ತ ಹೇಳುವರು. ಆದರೆ ಅವರು ಸುಳ್ಳುಗಾರರೆಂಬುದಕ್ಕೆ ಅಲ್ಲಾಹನು ಸಾಕ್ಷಿಯಾಗಿದ್ದಾನೆ.

وَالَّذِينَ اتَّخَذُوا مَسْجِدًا ضِرَارًا وَ
كُفْرًا وَتَفْرِيقًا بَيْنَ الْمُؤْمِنِينَ وَإِرْصَادًا
لِمَنْ حَارَبَ اللّٰهَ وَرَسُولَهُ مِنْ قَبْلُ ۚ
وَلَيَحْلِفُنَّ إِنْ أَرَدْنَا إِلَّا الْحُسْنَىٰ ۖ وَ
اللّٰهُ يَشْهَدُ إِنَّهُمْ لَكَاذِبُونَ ﴿١٠٧﴾

108. ನೀವು ಎಷ್ಟು ಮಾತ್ರಕ್ಕೂ ಆ ಕಟ್ಟಡದೊಳಗೆ ನಿಲ್ಲಬಾರದು. ಆರಂಭದ ದಿನದಿಂದಲೇ ಧರ್ಮನಿಷ್ಠೆಯ ಮೇಲೆ ಸ್ಥಾಪಿತಗೊಂಡಿರುವ ಮಸೀದಿಯೇ (ಆರಾಧನೆಗಾಗಿ) ನಿಲ್ಲಲು ಯೋಗ್ಯವಾದುದು. ಶುದ್ಧವಾಗಿರಬೇಕೆಂದು ಇಚ್ಛಿಸುವವರು ಅದರಲ್ಲಿ ಇರುತ್ತಾರೆ. ಶುದ್ಧತೆಯನ್ನು ಪಾಲಿಸುವವರೇ ಅಲ್ಲಾಹನಿಗೆ ಇಷ್ಟವುಳ್ಳವರು.[37]

لَا تَقُمْ فِيهِ أَبَدًا ۚ لَمَسْجِدٌ أُسِّسَ
عَلَى التَّقْوَىٰ مِنْ أَوَّلِ يَوْمٍ أَحَقُّ أَنْ
تَقُومَ فِيهِ ۚ فِيهِ رِجَالٌ يُحِبُّونَ أَنْ
يَتَطَهَّرُوا ۚ وَاللّٰهُ يُحِبُّ الْمُطَّهِّرِينَ ﴿١٠٨﴾

37. ಮದೀನಾದಲ್ಲಿ ಆಗ ಎರಡು ಮಸೀದಿಗಳಿದ್ದವು. ಒಂದು ಕುಬಾ ಮಸೀದಿ ಅದು ನಗರದ ಹೊರವಲಯದಲ್ಲಿತ್ತು. ಇನ್ನೊಂದು ಮಸ್ಜಿದುನ್ನಬವಿ ಅದು ನಗರದ ಒಳಭಾಗದಲ್ಲಿತ್ತು. ಈ ಎರಡು ಮಸೀದಿಗಳಿರುವಾಗ ಮೂರನೆಯ ಮಸೀದಿಯನ್ನು ಕಟ್ಟುವ ಅವಶ್ಯಕತೆ

109. ತನ್ನ ಕಟ್ಟಡದ ಬುನಾದಿಯನ್ನು ಅಲ್ಲಾಹನ ಭಯ ಮತ್ತು ಅವನ ಸಂಪ್ರೀತಿಯ ಅಪೇಕ್ಷೆಯ ಮೇಲಿರಿಸಿದವನು ಉತ್ತಮನೋ ಅಥವಾ ತನ್ನ ಕಟ್ಟಡವನ್ನು ಒಂದು ಕಣಿವೆಯ ಟೊಳ್ಳಾದ ಅಸ್ಥಿರ ಅಂಚಿನಲ್ಲಿ ಕಟ್ಟಿಸಿದ್ದು ಅದರ ಸಹಿತ ನೆಟ್ಟಗೆ ನರಕಾಗ್ನಿಯಲ್ಲಿ ಹೋಗಿ ಬಿದ್ದವನೋ? ಅಲ್ಲಾಹನು ಇಂತಹ ಅಕ್ರಮಿಗಳಿಗೆ ಎಂದೆಂದಿಗೂ ನೇರಮಾರ್ಗವನ್ನು ತೋರಿಸುವುದಿಲ್ಲ.

أَفَمَنْ أَسَّسَ بُنْيَانَهُ عَلَىٰ تَقْوَىٰ مِنَ
اللَّهِ وَرِضْوَانٍ خَيْرٌ أَم مَّنْ أَسَّسَ بُنْيَانَهُ
عَلَىٰ شَفَا جُرُفٍ هَارٍ فَانْهَارَ بِهِ فِي نَارِ
جَهَنَّمَ ۗ وَاللَّهُ لَا يَهْدِي الْقَوْمَ الظَّالِمِينَ ١٠٩

110. ಅವರು ನಿರ್ಮಿಸಿದ ಕಟ್ಟಡವು ಅವರ ಹೃದಯದಲ್ಲಿ ಸದಾ ಸಂದೇಹದ ಮೂಲವಾಗಿ ಉಳಿಯುವುದು. ಅವರ ಹೃದಯಗಳೇ ಚೂರುಚೂರಾಗಬೇಕೇ ವಿನಾ (ಅದರೊಳಗಿಂದ ಪಾರಾಗುವ ಬೇರಾವ ದಾರಿಯೂ ಇಲ್ಲ.) ಅಲ್ಲಾಹನು ಸರ್ವಜ್ಞನೂ ಯುಕ್ತಿ ಪೂರ್ಣನೂ ಆಗಿರುತ್ತಾನೆ.

لَا يَزَالُ بُنْيَانُهُمُ الَّذِي بَنَوْا رِيبَةً فِي
قُلُوبِهِمْ إِلَّا أَن تَقَطَّعَ قُلُوبُهُمْ ۗ وَاللَّهُ
عَلِيمٌ حَكِيمٌ ١١٠

111. ವಾಸ್ತವದಲ್ಲಿ ಅಲ್ಲಾಹನು ಸತ್ಯವಿಶ್ವಾಸಿಗಳಿಂದ ಅವರ ತನು-ಧನಗಳನ್ನು ಸ್ವರ್ಗದ ಬದಲಿಗೆ ಖರೀದಿ ಮಾಡಿರುತ್ತಾನೆ.[38] ಅವರು ಅಲ್ಲಾಹನ ಮಾರ್ಗದಲ್ಲಿ ಹೋರಾಡುತ್ತಾರೆ, ವಧಿಸುತ್ತಾರೆ ಮತ್ತು ವಧಿಸಲ್ಪಡುತ್ತಾರೆ. ತೌರಾತ್, ಇಂಜೀಲ್ ಮತ್ತು ಕುರ್‌ಆನಿನಲ್ಲಿ ಅವರೊಡನೆ (ಮಾಡಲಾದ, ಸ್ವರ್ಗದ ವಾಗ್ದಾನವು) ಅಲ್ಲಾಹನ ಹೊಣೆಯಲ್ಲಿರುವ ದೃಢ ವಾಗ್ದಾನವಾಗಿದೆ. ಅಲ್ಲಾಹನಿಗಿಂತ ಮಿಗಿಲಾಗಿ ತನ್ನ ವಾಗ್ದಾನ ಪೂರೈಸುವವನು ಯಾರಿದ್ದಾನೆ? ಆದುದರಿಂದ ನೀವು ಆತನೊಂದಿಗೆ ಮಾಡಿಕೊಂಡಿರುವ ವ್ಯವಹಾರಕ್ಕಾಗಿ ಸಂತೋಷಪಡಿರಿ. ಇದುವೇ ಅತ್ಯಂತ ಹಿರಿಯ ವಿಜಯವಾಗಿದೆ.

إِنَّ اللَّهَ اشْتَرَىٰ مِنَ الْمُؤْمِنِينَ أَنفُسَهُمْ
وَأَمْوَالَهُم بِأَنَّ لَهُمُ الْجَنَّةَ ۚ يُقَاتِلُونَ
فِي سَبِيلِ اللَّهِ فَيَقْتُلُونَ وَيُقْتَلُونَ ۖ وَعْدًا
عَلَيْهِ حَقًّا فِي التَّوْرَاةِ وَالْإِنجِيلِ وَ
الْقُرْآنِ ۚ وَمَنْ أَوْفَىٰ بِعَهْدِهِ مِنَ اللَّهِ
فَاسْتَبْشِرُوا بِبَيْعِكُمُ الَّذِي بَايَعْتُم بِهِ ۚ
وَذَٰلِكَ هُوَ الْفَوْزُ الْعَظِيمُ ١١١

112. ಅಲ್ಲಾಹನ ಕಡೆಗೆ ಪದೇ ಪದೇ ಮರಳುವವರು,[39] ಅವನ

التَّائِبُونَ الْعَابِدُونَ الْحَامِدُونَ السَّائِحُونَ

ಇರಲಿಲ್ಲ. ಆದರೆ ಕಪಟವಿಶ್ವಾಸಿಗಳು ಒಂದು ನೆಪವನ್ನು ಹುಡುಕಿ ತೆಗೆದರು. ಮಳೆಯ ವೇಳೆ ಮತ್ತು ಚಳಿಗಾಲದ ರಾತ್ರಿಗಳಲ್ಲಿ ಸಾಮಾನ್ಯ ಜನರಿಗೆ ವಿಶೇಷವಾಗಿ ಆ ಮಸೀದಿಗಳಿಂದ ದೂರದಲ್ಲಿ ವಾಸಿಸುವ ಮುದುಕರು ಮತ್ತು ವಿಕಲಾಂಗರಿಗೆ ಐದು ಹೊತ್ತಿನ ನಮಾಝಿಗೆ ಹಾಜರಾಗುವುದು ಕಷ್ಟವಾಗುತ್ತದೆ. ಆದ್ದರಿಂದ ನಮಾಝಿಗಳ ಸೌಲಭ್ಯಕ್ಕಾಗಿ ಈ ಮಸೀದಿಯನ್ನು ನಿರ್ಮಿಸ ಬಯಸುತ್ತೇವೆ ಎಂದು ಹೇಳಿ ಅವರು ಮಸೀದಿಯ ನಿರ್ಮಾಣಕ್ಕೆ ಅನುಮತಿ ಪಡೆದರು. ಅನಂತರ ಅದನ್ನು ತಮ್ಮ ಸಂಚುಗಳ ಕೇಂದ್ರವನ್ನಾಗಿ ಮಾಡಿದರು. ಪ್ರವಾದಿವರ್ಯರನ್ನು(ಸ) ವಂಚಿಸಿ ಅವರಿಂದಲೇ ಅದರ ಉದ್ಘಾಟನೆ ಮಾಡಿಸಬೇಕೆಂದು ಅವರು ಬಯಸಿದ್ದರು. ಆದರೆ ಅಲ್ಲಾಹನು ಪ್ರವಾದಿವರ್ಯರಿಗೆ(ಸ) ಅವರ ಸಂಕಲ್ಪಗಳ ಬಗ್ಗೆ ಮೊದಲೇ ತಿಳಿಸಿದನು. ಆದ್ದರಿಂದ ತಬೂಕ್‌ನಿಂದ ಮರಳಿದ ಬಳಿಕ ಪ್ರವಾದಿವರ್ಯರು(ಸ) 'ಮಸ್ಜಿದುಝಿರಾರ್' ಎಂಬ ಆ ಮಸೀದಿಯನ್ನು ಧ್ವಂಸಗೊಳಿಸಿದರು.

38. ಇಲ್ಲಿ ದೇವನ ಮತ್ತು ದಾಸನ ನಡುವೆ ಇರುವ ಸತ್ಯವಿಶ್ವಾಸದ ವ್ಯವಹಾರವನ್ನು 'ಬೈಅ್' (ವ್ಯಾಪಾರ) ಎನ್ನಲಾಗಿದೆ. ಅರ್ಥಾತ್ ಸತ್ಯವಿಶ್ವಾಸ ಒಂದು ಒಪ್ಪಂದವಾಗಿದೆ. ಅದರ ಪ್ರಕಾರ ದಾಸ ತನ್ನ ದೇಹ ಮತ್ತು ಸೊತ್ತನ್ನು ದೇವನಿಗೆ ಮಾರಾಟಮಾಡುತ್ತಾನೆ. ಅದಕ್ಕೆ ಪ್ರತಿಯಾಗಿ ಮರಣೋತ್ತರ ಜೀವನದಲ್ಲಿ ಸ್ವರ್ಗವನ್ನು ನೀಡಲಾಗುವುದು ಎಂಬ ಆಶ್ವಾಸನೆಯನ್ನು ಅವನು ಸ್ವೀಕರಿಸಿಕೊಳ್ಳುತ್ತಾನೆ.

39. ಮೂಲದಲ್ಲಿ 'ಅತ್ತಾಯಿಬೂನ್' ಎಂಬ ಪದ ಪ್ರಯೋಗವಾಗಿದೆ. ಅದರ ಶಬ್ದಾರ್ಥ 'ತೌಬ ಮಾಡುವವರು ಅಥವಾ ಪ್ರಾಯಶ್ಚಿತ್ತ

ದಾಸ್ಯ-ಆರಾಧನೆ ಮಾಡುವವರು, ಅವನ ಗುಣಗಾನ ಮಾಡುವವರು, ಅವನಿಗಾಗಿ ಭೂಮಿಯಲ್ಲಿ ಸಂಚರಿಸುವವರು,[40] ಅವನ ಮುಂದೆ ಬಾಗುವವರು ಮತ್ತು ಸಾಷ್ಟಾಂಗವೆರಗುವವರು, ಒಳಿತಿನ ಆಜ್ಞೆ ನೀಡುವವರು, ಕೆಡುಕಿನಿಂದ ತಡೆಯುವವರು ಮತ್ತು ಅಲ್ಲಾಹನ ಮೇರೆಗಳ ರಕ್ಷಣೆ ಮಾಡುವವರು (ಅಲ್ಲಾಹನೊಂದಿಗೆ ತಮ್ಮ ವ್ಯವಹಾರವನ್ನು ಪೂರ್ತಿಗೊಳಿಸಿಕೊಂಡ ಆ 'ಸತ್ಯವಿಶ್ವಾಸಿ' ಗಳ ವೈಶಿಷ್ಟ್ಯಗಳಿವು.) ಓ ಪೈಗಂಬರರೇ, ಆ ಸತ್ಯವಿಶ್ವಾಸಿಗಳಿಗೆ ಶುಭವಾರ್ತೆ ನೀಡಿರಿ.

الرَّاكِعُونَ السَّاجِدُونَ الْآمِرُونَ بِالْمَعْرُوفِ
وَالنَّاهُونَ عَنِ الْمُنكَرِ وَالْحَافِظُونَ
لِحُدُودِ اللَّهِ ۗ وَبَشِّرِ الْمُؤْمِنِينَ ﴿١١٢﴾

113. ಮುಶ್ರಿಕರು ನರಕಕ್ಕೆ ಅರ್ಹರೆಂಬ ವಿಷಯ ವ್ಯಕ್ತವಾಗಿರುವಾಗ, ಅವರು ಆಪ್ತ ಬಂಧುಗಳೇ ಆಗಿದ್ದರೂ ಅವರ ಕ್ಷಮೆಗಾಗಿ ಪ್ರಾರ್ಥಿಸುವುದು ಪ್ರವಾದಿಗೂ ಸತ್ಯವಿಶ್ವಾಸ ಹೊಂದಿದವರಿಗೂ ಶೋಭಿಸುವುದಿಲ್ಲ.

مَا كَانَ لِلنَّبِيِّ وَالَّذِينَ آمَنُوا أَن يَسْتَغْفِرُوا
لِلْمُشْرِكِينَ وَلَوْ كَانُوا أُولِي قُرْبَىٰ مِن بَعْدِ
مَا تَبَيَّنَ لَهُمْ أَنَّهُمْ أَصْحَابُ الْجَحِيمِ ﴿١١٣﴾

114. ಇಬ್‌ರಾಹೀಮರು ತಮ್ಮ ಪಿತನಿಗಾಗಿ ಪ್ರಾರ್ಥಿಸಿದ್ದುದು ಅವರು ತಮ್ಮ ಪಿತನೊಂದಿಗೆ ಮಾಡಿದ ವಾಗ್ದಾನದ ಕಾರಣದಿಂದಾಗಿತ್ತು. ಆದರೆ ಅವರ ತಂದೆಯು ಅಲ್ಲಾಹನ ಶತ್ರುವೆಂಬ ವಿಷಯ ಅವರಿಗೆ ಮನವರಿಕೆಯಾದಾಗ ಅವರು ಅವನಿಂದ ಅಸಂತುಷ್ಟರಾದರು. ನಿಶ್ಚಯವಾಗಿಯೂ ಇಬ್‌ರಾಹೀಮರು ಬಹಳ ಕೋಮಲ ಹೃದಯದವರೂ ಸಹನಶೀಲರೂ ಆಗಿದ್ದರು.

وَمَا كَانَ اسْتِغْفَارُ إِبْرَاهِيمَ لِأَبِيهِ
إِلَّا عَن مَّوْعِدَةٍ وَعَدَهَا إِيَّاهُ فَلَمَّا تَبَيَّنَ
لَهُ أَنَّهُ عَدُوٌّ لِّلَّهِ تَبَرَّأَ مِنْهُ ۚ إِنَّ إِبْرَاهِيمَ
لَأَوَّاهٌ حَلِيمٌ ﴿١١٤﴾

115. ಜನರಿಗೆ ಸನ್ಮಾರ್ಗದರ್ಶನ ನೀಡಿದ ಬಳಿಕ ಅವರು ವರ್ಜಿಸಬೇಕಾದುದೇನೆಂಬುದನ್ನು ಸುವ್ಯಕ್ತವಾಗಿ ಅವರಿಗೆ ತಿಳಿಸದೆ ಅವರನ್ನು ಪಥಭ್ರಷ್ಟಗೊಳಿಸುವುದು ಅಲ್ಲಾಹನ ರೂಢಿಯಲ್ಲ. ವಾಸ್ತವದಲ್ಲಿ ಅಲ್ಲಾಹನು ಸಕಲ ವಿಷಯಗಳ ಜ್ಞಾನವುಳ್ಳವನಾಗಿರುತ್ತಾನೆ.

وَمَا كَانَ اللَّهُ لِيُضِلَّ قَوْمًا بَعْدَ إِذْ هَدَاهُمْ
حَتَّىٰ يُبَيِّنَ لَهُم مَّا يَتَّقُونَ ۚ إِنَّ اللَّهَ
بِكُلِّ شَيْءٍ عَلِيمٌ ﴿١١٥﴾

116. ಭೂಮಿ-ಆಕಾಶಗಳ ಪ್ರಭುತ್ವವು ವಾಸ್ತವದಲ್ಲಿ ಅಲ್ಲಾಹನ ವಶವಿದೆ. ಬದುಕು ಸಾವುಗಳು ಅವನ ಅಧಿಕಾರದಲ್ಲಿವೆ. ಅವನಲ್ಲದೆ ನಿಮಗಾರೂ ರಕ್ಷಕ ಮಿತ್ರನಾಗಲಿ ಸಹಾಯಕನಾಗಲಿ ಇಲ್ಲ.

إِنَّ اللَّهَ لَهُ مُلْكُ السَّمَاوَاتِ وَالْأَرْضِ ۖ
يُحْيِي وَيُمِيتُ ۚ وَمَا لَكُم مِّن دُونِ اللَّهِ
مِن وَلِيٍّ وَلَا نَصِيرٍ ﴿١١٦﴾

ಪಡುವವರು ಎಂದಾಗಿದೆ. ಆದರೆ ಈ ಪದ ಪ್ರಯೋಗವಾಗಿರುವ ವಾಕ್ಯದ ಶೈಲಿಯನ್ನು ನೋಡಿದರೆ ಪ್ರಾಯಶ್ಚಿತ್ತ ಪಡುವುದು ಸತ್ಯವಿಶ್ವಾಸಿಗಳ ಶಾಶ್ವತ ಗುಣಗಳಲ್ಲೊಂದಾಗಿದೆ ಎಂದು ಸ್ಪಷ್ಟವಾಗುತ್ತದೆ. ಅವರು ಒಮ್ಮೆ ಮಾತ್ರ ಪ್ರಾಯಶ್ಚಿತ್ತ ಪಡುವುದಲ್ಲ, ಬದಲಾಗಿ ಸದಾ ಪ್ರಾಯಶ್ಚಿತ್ತಪಡುತ್ತಲೇ ಇರುತ್ತಾರೆ ಎಂಬುದು ಇದರ ನಿಜವಾದ ವ್ಯಾಖ್ಯೆಯಾಗಿದೆ. ತೌಬಾದ ನಿಜವಾದ ಅರ್ಥ ಮರಳುವುದು ಅಥವಾ ವಾಲುವುದು ಎಂದಾಗಿದೆ. ಆದ್ದರಿಂದ ಈ ಪದದ ನೈಜ ಸ್ಫೂರ್ತಿಯನ್ನು ವ್ಯಕ್ತಪಡಿಸಲಿಕ್ಕಾಗಿ ನಾವು ಅದನ್ನು ವಿವರಣಾತ್ಮಕವಾಗಿ, "ಅಲ್ಲಾಹನೆಡೆಗೆ ಪದೇ ಪದೇ ಮರಳುವವರು" ಎಂದು ಅನುವಾದಿಸಿದ್ದೇವೆ.

40. ಅದರ ಇನ್ನೊಂದು ಅನುವಾದ ಉಪವಾಸ ಆಚರಿಸುವವರು ಎಂದೂ ಆಗಬಹುದು.

117. ಅಲ್ಲಾಹನು ಪ್ರವಾದಿಯವರನ್ನೂ ಅವರ ಕಷ್ಟಕಾಲದಲ್ಲಿ ಅವರಿಗೆ ಸಹಕರಿಸಿದ ಮುಹಾಜಿರ್ ಮತ್ತು ಅನ್ಸಾರರನ್ನೂ ಕ್ಷಮಿಸಿಬಿಟ್ಟನು. ಅವರ ಪೈಕಿ ಕೆಲವರ ಹೃದಯಗಳು ವಕ್ರತೆಯ ಕಡೆಗೆ ವಾಲಿಹೋಗಿದ್ದರೂ[41] (ಆದರೆ ಅವರು ವಕ್ರತೆಯನ್ನನುಸರಿಸದೆ ಪ್ರವಾದಿಯವರನ್ನು ಅನುಸರಿಸಿದಾಗ) ಅಲ್ಲಾಹನು ಅವರನ್ನು ಕ್ಷಮಿಸಿದನು. ನಿಶ್ಚಯವಾಗಿಯೂ ಅವನು ಅವರೊಂದಿಗೆ ವಾತ್ಸಲ್ಯ ಹಾಗೂ ಕರುಣೆಯ ವ್ಯವಹಾರವನ್ನಿರಿಸಿದ್ದಾನೆ.

لَقَدْ تَّابَ اللّٰهُ عَلَى النَّبِيِّ وَ الْمُهٰجِرِيْنَ وَالْاَنْصَارِ الَّذِيْنَ اتَّبَعُوْهُ فِيْ سَاعَةِ الْعُسْرَةِ مِنْۢ بَعْدِ مَا كَادَ يَزِيْغُ قُلُوْبُ فَرِيْقٍ مِّنْهُمْ ثُمَّ تَابَ عَلَيْهِمْ ؕ اِنَّهٗ بِهِمْ رَءُوْفٌ رَّحِيْمٌ ۙ﴿۱۱۷﴾

118. ಪ್ರಕರಣವು ಮುಂದೂಡಲ್ಪಟ್ಟಿದ್ದ ಆ ಮೂವರನ್ನೂ ಅವನು ಕ್ಷಮಿಸಿದನು. ಭೂಮಿಯು ವಿಶಾಲವಾಗಿದ್ದರೂ ಅದು ಅವರ ಪಾಲಿಗೆ ಸಂಕುಚಿತವಾಯಿತು. ಅವರ ಜೀವಗಳೂ ಅವರಿಗೆ ಹೊರೆಯಾಗಿಬಿಟ್ಟವು. ಅಲ್ಲಾಹನಿಂದ ರಕ್ಷಣೆ ಹೊಂದಲು ಸ್ವತಃ ಅಲ್ಲಾಹನ ಕೃಪಾಶ್ರಯದ ವಿನಾ ಬೇರೆ ಆಶ್ರಯವಿಲ್ಲವೆಂದು ಅವರು ತಿಳಿದುಕೊಂಡರು. ಆಗ ಅವರು ತನ್ನ ಕಡೆಗೆ ಮರಳಿ ಬರಲೆಂದು ಅಲ್ಲಾಹನು ತನ್ನ ಕೃಪೆಯೊಂದಿಗೆ ಅವರ ಕಡೆಗೆ ತಿರುಗಿದನು. ನಿಶ್ಚಯವಾಗಿಯೂ ಅಲ್ಲಾಹನು ಪಶ್ಚಾತ್ತಾಪ ಸ್ವೀಕರಿಸುವವನೂ ಕರುಣಾನಿಧಿಯೂ ಆಗಿರುತ್ತಾನೆ.[42]

وَّعَلَى الثَّلٰثَةِ الَّذِيْنَ خُلِّفُوْا ؕ حَتّٰۤى اِذَا ضَاقَتْ عَلَيْهِمُ الْاَرْضُ بِمَا رَحُبَتْ وَضَاقَتْ عَلَيْهِمْ اَنْفُسُهُمْ وَظَنُّوْۤا اَنْ لَّا مَلْجَاَ مِنَ اللّٰهِ اِلَّاۤ اِلَيْهِ ؕ ثُمَّ تَابَ عَلَيْهِمْ لِيَتُوْبُوْا ؕ اِنَّ اللّٰهَ هُوَ التَّوَّابُ الرَّحِيْمُ ﴿۱۱۸﴾

119. ಓ ಸತ್ಯವಿಶ್ವಾಸಿಗಳೇ, ಅಲ್ಲಾಹನನ್ನು ಭಯಪಡಿರಿ, ಸತ್ಯ ಸಂಧರೊಂದಿಗಿರಿ.

يٰۤاَيُّهَا الَّذِيْنَ اٰمَنُوا اتَّقُوا اللّٰهَ وَكُوْنُوْا مَعَ الصّٰدِقِيْنَ ﴿۱۱۹﴾

120. ಅಲ್ಲಾಹನ ರಸೂಲರನ್ನು ಬಿಟ್ಟು ಮನೆಯಲ್ಲಿ ಕೂತಿರುವುದೂ ಅವರಿಂದ ನಿಶ್ಚಿಂತರಾಗಿ ತಮ್ಮ ತಮ್ಮ ಪ್ರಾಣಗಳ ಬಗ್ಗೆ ಯೋಚಿಸುತ್ತಿರುವುದೂ ಮದೀನಾವಾಸಿಗಳಿಗೂ ಆಸುಪಾಸಿನ

مَا كَانَ لِاَهْلِ الْمَدِيْنَةِ وَمَنْ حَوْلَهُمْ مِّنَ الْاَعْرَابِ اَنْ يَّتَخَلَّفُوْا عَنْ رَّسُوْلِ اللّٰهِ وَلَا يَرْغَبُوْا بِاَنْفُسِهِمْ عَنْ نَّفْسِهٖ ؕ

41. ಅರ್ಥಾತ್- ಕೆಲವು ಪ್ರಾಮಾಣಿಕ ಸಂಗಾತಿಗಳೂ ಆ ಸಂಕಷ್ಟದ ಸಂದರ್ಭದಲ್ಲಿ ಯುದ್ಧಕ್ಕೆ ಹೋಗುವುದರಿಂದ ಸ್ವಲ್ಪ ಮಟ್ಟಿಗೆ ಹಿಂಜರಿಯತೊಡಗಿದ್ದರು. ಆದರೆ ಅವರ ಮನಸ್ಸಿನಲ್ಲಿ ವಿಶ್ವಾಸವಿದ್ದುದರಿಂದ ಮತ್ತು ಪ್ರಾಮಾಣಿಕ ಚಿತ್ತದಿಂದ ಅವರು ಸತ್ಯಧರ್ಮವನ್ನು ಪ್ರೀತಿಸುತ್ತಿದ್ದುದರಿಂದ ಕೊನೆಗೂ ಅವರು ತಮ್ಮ ದೌರ್ಬಲ್ಯಗಳನ್ನು ಜಯಿಸಿಕೊಂಡರು.

42. ಈ ಮೂವರು ವ್ಯಕ್ತಿಗಳು ಕಅಬ್ ಬಿನ್ ಮಾಲಿಕ್, ಹಿಲಾಲ್ ಬಿನ್ ಉಮಯ್ಯ ಮತ್ತು ಮುರಾರ ಬಿನ್ ರಬೀಅ್(ರ) ಆಗಿದ್ದರು. ಮೂವರು ನೈಜ ಸತ್ಯವಿಶ್ವಾಸಿಗಳಾಗಿದ್ದರು. ಅದಕ್ಕೆ ಮೊದಲು ಅವರು ತಮ್ಮ ಪ್ರಾಮಾಣಿಕತೆಯನ್ನು ಹಲವು ಬಾರಿ ಸಾಬೀತು ಪಡಿಸಿದ್ದರು. ಅನೇಕ ತ್ಯಾಗಗಳನ್ನು ನೀಡಿದ್ದರು. ಆದರೆ ಅವರ ಈ ಸೇವೆಗಳ ಹೊರತಾಗಿಯೂ ಯುದ್ಧಕ್ಕೆ ಹೋಗಲು ಶಕ್ತರಾದ ಮುಸ್ಲಿಮರೆಲ್ಲರೂ ಯುದ್ಧಕ್ಕೆ ಹೊರಡಬೇಕೆಂದು ತಬೂಕ್ ಯುದ್ಧದ ಸಂದರ್ಭದಲ್ಲಿ ಆಜ್ಞೆ ಬಂದಾಗ ಈ ವ್ಯಕ್ತಿಗಳು ಔದಾಸೀನ್ಯ ಪ್ರದರ್ಶಿಸಿದ್ದರು. ಅದರ ಬಗ್ಗೆ ಉಗ್ರ ಕ್ರಮ ಕೈಗೊಳ್ಳಲಾಯಿತು. ತಬೂಕ್‌ನಿಂದ ಮರಳಿದ ಬಳಿಕ ಪ್ರವಾದಿವರ್ಯರು(ಸ) ಯಾರೂ ಅವರಿಗೆ ಸಲಾಮ್ ಹೇಳದಂತೆ ಮತ್ತು ಅವರೊಂದಿಗೆ ಮಾತನಾಡದಂತೆ ಮುಸ್ಲಿಮರಿಗೆ ಆದೇಶಿಸಿದರು. ನಲವತ್ತು ದಿನಗಳ ನಂತರ ಅವರ ಪತ್ನಿಯರಿಗೂ ಅವರನ್ನು ಬಿಟ್ಟಿರುವಂತೆ ತಾಕೀತು ಮಾಡಲಾಯಿತು. ಈ ಸೂಕ್ತದಲ್ಲಿ ಚಿತ್ರಿಸಲಾಗಿರುವಂತಹ ಪರಿಸ್ಥಿತಿಯನ್ನೇ ಅವರು ಮದೀನಾದಲ್ಲಿ ಸಾಕ್ಷಾತ್ ಎದುರಿಸುತ್ತಿದ್ದರು. ಕೊನೆಗೆ ಅವರೊಂದಿಗೆ ನಿರ್ಬಂಧಕ್ಕೆ 50 ದಿನಗಳಾದಾಗ ಕ್ಷಮೆಯ ಈ ಆದೇಶ ಅವತೀರ್ಣಗೊಂಡಿತು.

ಬದವೀಗಳಿಗೂ ಎಷ್ಟು ಮಾತ್ರಕ್ಕೂ ತಕ್ಕುದಾಗಿರಲಿಲ್ಲ. ಏಕೆಂದರೆ, ಅವರು ಅಲ್ಲಾಹನ ಮಾರ್ಗದಲ್ಲಿ ಹಸಿವು, ಬಾಯಾರಿಕೆ, ದೇಹ ಶ್ರಮಗಳನ್ನೂ- ಯಾವತ್ತು ಕಷ್ಟಗಳನ್ನು ಸಹಿಸಿಯೂ ಅವರು ಸತ್ಯನಿಷೇಧಿಗಳಿಗೆ ಅಪ್ರಿಯವಾದ ಮಾರ್ಗ ದಲ್ಲಿ ದಿಟ್ಟ ಹೆಜ್ಜೆಯಿರಿಸಿಯೂ ಅವರು ಯಾವನಾದರೊಬ್ಬ ವೈರಿಯೊಂದಿಗೆ (ಸತ್ಯದ್ವೇಷದ) ಪ್ರತೀಕಾರ ಪಡೆದೂ ಅದರ ಫಲವಾಗಿ ಅವರಿಗೊಂದು ಸತ್ಕರ್ಮವು ಲಿಖಿತಗೊಳ್ಳದಿರುವುದು ಎಂದಿಗೂ ಸಾಧ್ಯವಿಲ್ಲ. ನಿಶ್ಚಯವಾಗಿಯೂ ಅಲ್ಲಾಹನು ಸಜ್ಜನೋ ತ್ತಮರ ಸೇವಾಫಲವನ್ನು ನಿರರ್ಥಕ ಗೊಳಿಸುವುದಿಲ್ಲ.

ذٰلِكَ بِاَنَّهُمْ لَا يُصِيْبُهُمْ ظَمَاٌ وَّلَا نَصَبٌ وَّلَا مَخْمَصَةٌ فِىْ سَبِيْلِ اللّٰهِ وَلَا يَطَـُٔوْنَ مَوْطِئًا يَّغِيْظُ الْكُفَّارَ وَلَا يَنَالُوْنَ مِنْ عَدُوٍّ نَّيْلًا اِلَّا كُتِبَ لَهُمْ بِهٖ عَمَلٌ صَالِحٌ اِنَّ اللّٰهَ لَا يُضِيْعُ اَجْرَ الْمُحْسِنِيْنَ ۝١٢٠

121. ಅದೇ ರೀತಿಯಲ್ಲಿ ಅವರು (ದೇವಮಾರ್ಗದಲ್ಲಿ) ಹೆಚ್ಚೋ ಕಡಿಮೆಯೋ ಖರ್ಚು ವಹಿಸಿಯೂ (ಧರ್ಮಯುದ್ಧಕ್ಕಾಗಿ) ಅವರು ಯಾವುದಾದರೊಂದು ಕಣಿವೆಯನ್ನು ದಾಟಿಯೂ ಅಲ್ಲಾಹ್ ಅವರ ಈ ಸತ್ಕರ್ಮದ ಪ್ರತಿಫಲ ಅವರಿಗೆ ನೀಡು ವಂತಾಗಲು ಅವರ ಪಾಲಿಗೆ ಸತ್ಕರ್ಮವು ಲಿಖಿತಗೊಳ್ಳದಿರಲು ಎಂದಿಗೂ ಸಾಧ್ಯವಿಲ್ಲ.

وَلَا يُنْفِقُوْنَ نَفَقَةً صَغِيْرَةً وَّلَا كَبِيْرَةً وَّلَا يَقْطَعُوْنَ وَادِيًا اِلَّا كُتِبَ لَهُمْ لِيَجْزِيَهُمُ اللّٰهُ اَحْسَنَ مَا كَانُوْا يَعْمَلُوْنَ ۝١٢١

122. ಇದ್ದ ಸತ್ಯವಿಶ್ವಾಸಿಗಳೆಲ್ಲರೂ ಹೊರಟು ಬಿಡುವ ಅಗತ್ಯವೇನೂ ಇರಲಿಲ್ಲ. ಆದರೆ ಅವರ ವಾಸಸ್ಥಾನಗಳ ಪ್ರತಿಯೊಂದು ಭಾಗದಿಂದ ಕೆಲವರು ಹೊರಟು ಬಂದು ಧರ್ಮಪ್ರಜ್ಞೆಯನ್ನು ಹೊಂದಿ ಹಿಂದಿರುಗಿ ಹೋಗಿ ತಮ್ಮ ಪ್ರದೇಶದ ನಿವಾಸಿಗಳನ್ನು (ಅಮುಸ್ಲಿಮರ ರೀತಿ-ನೀತಿಗಳಿಂದ) ದೂರವಿರಲು ಎಚ್ಚರಿಸು ವಂತಾಗಲಿಲ್ಲವೇಕೆ?[43]

وَمَا كَانَ الْمُؤْمِنُوْنَ لِيَنْفِرُوْا كَآفَّةً فَلَوْلَا نَفَرَ مِنْ كُلِّ فِرْقَةٍ مِّنْهُمْ طَآئِفَةٌ لِّيَتَفَقَّهُوْا فِى الدِّيْنِ وَلِيُنْذِرُوْا قَوْمَهُمْ اِذَا رَجَعُوْٓا اِلَيْهِمْ لَعَلَّهُمْ يَحْذَرُوْنَ ۝١٢٢

123. ಓ ಸತ್ಯವಿಶ್ವಾಸಿಗಳೇ, ನಿಮ್ಮ ಹತ್ತಿರದಲ್ಲೇ ಇರುವ ಸತ್ಯನಿಷೇಧಿಗಳೊಂದಿಗೆ ಯುದ್ಧ ಮಾಡಿರಿ.[44] ಅವರು ನಿಮ್ಮಲ್ಲಿ

يٰٓاَيُّهَا الَّذِيْنَ اٰمَنُوْا قَاتِلُوا الَّذِيْنَ يَلُوْنَكُمْ مِّنَ الْكُفَّارِ وَلْيَجِدُوْا فِيْكُمْ غِلْظَةً

43. ಅರ್ಥಾತ್- ಬದವಿಗಳೆಲ್ಲರೂ ಮದೀನಾಕ್ಕೆ ಬರುವುದು ಅವಶ್ಯಕವಾಗಿರಲಿಲ್ಲ. ಪ್ರತಿಯೊಂದು ಊರು ಮತ್ತು ಪ್ರದೇಶದಿಂದ ಕೆಲವರು ಮದೀನಾಕ್ಕೆ ಬಂದು ಧರ್ಮದ ಜ್ಞಾನ ಸಂಪಾದಿಸಿದ್ದರೆ ಮತ್ತು ಮರಳಿದ ನಂತರ ತಮ್ಮ ಪ್ರದೇಶದ ಜನರಿಗೆ ಧರ್ಮದ ಬೋಧನೆ ನೀಡಿರುತ್ತಿದ್ದರೆ ಬದವಿಗಳಲ್ಲಿ ಅಷ್ಟು ಅಜ್ಞಾನ ಉಳಿಯಲು ಸಾಧ್ಯವಿರಲಿಲ್ಲ. ಕಾಪಟ್ಯದ ರೋಗಕ್ಕೆ ತುತ್ತಾಗಿ, ಮುಸ್ಲಿಮರಾಗಿಯೂ ಕರ್ತವ್ಯಚ್ಯುತಿ ಮಾಡುವಂತಹ ಪರಿಸ್ಥಿತಿ ಅವರಿಗೆ ಬರುತ್ತಿರಲಿಲ್ಲ.

44. ಮಾತಿನ ಹಿನ್ನೆಲೆಯನ್ನು ಗಮನಿಸಿದರೆ ಇಲ್ಲಿ ಸತ್ಯನಿಷೇಧಿಗಳು ಎಂದು ಹೇಳಲಾಗಿರುವುದು ಕಪಟವಿಶ್ವಾಸಿಗಳ ಕುರಿತು ಎಂದು ವ್ಯಕ್ತವಾಗುತ್ತದೆ. ಅವರ ಕಾಪಟ್ಯ ಸಂಪೂರ್ಣವಾಗಿ ಬಹಿರಂಗಗೊಂಡಿತ್ತು. ಅವರು ಇಸ್ಲಾಮೀ ಸಮಾಜದಲ್ಲಿ ಸೇರಿಕೊಂಡಿದ್ದುದರಿಂದ ತೀವ್ರ ನಷ್ಟಗಳನ್ನು ಎದುರಿಸಬೇಕಾಗುತ್ತಿತ್ತು.

ಕಾಠಿಣ್ಯವನ್ನು ಕಾಣಬೇಕು.[45] ಅಲ್ಲಾಹನು 'ಧರ್ಮನಿಷ್ಠ'ರೊಂದಿಗೆ ಇದ್ದಾನೆಂಬುದನ್ನು ತಿಳಿದುಕೊಳ್ಳಿರಿ.

وَاعْلَمُوْٓا اَنَّ اللّٰهَ مَعَ الْمُتَّقِيْنَ ﴿١٢٣﴾ ع

124. ಒಂದು ಹೊಸ ಅಧ್ಯಾಯ ಅವತೀರ್ಣಗೊಳ್ಳುವಾಗ ಅವರಲ್ಲಿ ಕೆಲವರು (ಅಣಕದ ರೂಪದಲ್ಲಿ ಮುಸ್ಲಿಮರೊಡನೆ) "ಹೇಳಿರಿ, ಇದರಿಂದ ನಿಮ್ಮ ಪೈಕಿ ಯಾರ ಈಮಾನಿನಲ್ಲಿ ವೃದ್ಧಿಯಾಯಿತು?" ಎಂದು ವಿಚಾರಿಸುತ್ತಾರೆ. ಈಮಾನ್ ಇಟ್ಟವರ ಈಮಾನಿನಲ್ಲಂತು (ಅವತೀರ್ಣಗೊಳ್ಳುವ ಪ್ರತಿಯೊಂದು ಅಧ್ಯಾಯವು) ವಾಸ್ತವದಲ್ಲಿ ವೃದ್ಧಿಯನ್ನೇ ಉಂಟು ಮಾಡಿದೆ ಮತ್ತು ಅವರು ಅದರಿಂದ ಸಂತುಷ್ಟರಾಗಿದ್ದಾರೆ.

وَاِذَا مَآ اُنْزِلَتْ سُوْرَةٌ فَمِنْهُمْ مَّنْ يَّقُوْلُ اَيُّكُمْ زَادَتْهُ هٰذِهٖٓ اِيْمَانًا ۚ فَاَمَّا الَّذِيْنَ اٰمَنُوْا فَزَادَتْهُمْ اِيْمَانًا وَّهُمْ يَسْتَبْشِرُوْنَ ﴿١٢٤﴾

125. ಆದರೆ ಯಾರ ಹೃದಯಗಳಿಗೆ (ಕಾಪಟ್ಯದ) ರೋಗ ತಗಲಿತ್ತೋ ಅವರ ಹಿಂದಿನ ಮಾಲಿನ್ಯದ ಮೇಲೆ (ಪ್ರತಿಯೊಂದು ಹೊಸ ಅಧ್ಯಾಯವು) ಇನ್ನೊಂದು ಮಾಲಿನ್ಯವನ್ನು ಹೆಚ್ಚಿಸಿತು ಮತ್ತು ಅವರು ಸಾಯುವವರೆಗೂ 'ಸತ್ಯನಿಷೇಧ'ದಲ್ಲೇ ಇದ್ದರು.

وَاَمَّا الَّذِيْنَ فِيْ قُلُوْبِهِمْ مَّرَضٌ فَزَادَتْهُمْ رِجْسًا اِلٰى رِجْسِهِمْ وَمَاتُوْا وَهُمْ كٰفِرُوْنَ ﴿١٢٥﴾

126. ಇವರನ್ನು ಪ್ರತಿವರ್ಷವೂ ಒಂದೆರಡು ಸಲ ಪರೀಕ್ಷೆಗೆ ಗುರಿಪಡಿಸಲಾಗುತ್ತಿರುವುದನ್ನು ಇವರು ಕಾಣುವುದಿಲ್ಲವೇ?[46] ಆದರೆ ಇಷ್ಟಾಗಿಯೂ ಇವರು ಪಶ್ಚಾತ್ತಾಪ ಪಡುವುದೂ ಇಲ್ಲ. ಪಾಠ ಕಲಿಯುವುದೂ ಇಲ್ಲ.

اَوَلَا يَرَوْنَ اَنَّهُمْ يُفْتَنُوْنَ فِيْ كُلِّ عَامٍ مَّرَّةً اَوْ مَرَّتَيْنِ ثُمَّ لَا يَتُوْبُوْنَ وَلَا هُمْ يَذَّكَّرُوْنَ ﴿١٢٦﴾

127. ಯಾವುದಾದರೂ ಅಧ್ಯಾಯ ಅವತೀರ್ಣಗೊಳ್ಳುವಾಗ "ನಿಮ್ಮನ್ನಾರಾದರೂ ನೋಡುತ್ತಿಲ್ಲವಷ್ಟೆ" ಎಂದು ಇವರು ಪರಸ್ಪರ ಕಣ್ಣುಸನ್ನೆಗಳಿಂದಲೇ ಮಾತಾಡಿಕೊಳ್ಳುತ್ತಾರೆ. ಅನಂತರ ಸದ್ದಿಲ್ಲದೆ ಎದ್ದು ಓಡುತ್ತಾರೆ. ಅಲ್ಲಾಹನು ಇವರ ಹೃದಯಗಳನ್ನು ತಿರುಚಿ ಬಿಟ್ಟಿರುತ್ತಾನೆ. ಏಕೆಂದರೆ ಇವರು ತಿಳಿಗೇಡಿಗಳು.

وَاِذَا مَآ اُنْزِلَتْ سُوْرَةٌ نَّظَرَ بَعْضُهُمْ اِلٰى بَعْضٍ ؕ هَلْ يَرٰىكُمْ مِّنْ اَحَدٍ ثُمَّ انْصَرَفُوْا ؕ صَرَفَ اللّٰهُ قُلُوْبَهُمْ بِاَنَّهُمْ قَوْمٌ لَّا يَفْقَهُوْنَ ﴿١٢٧﴾

128. ನೋಡಿರಿ, ನಿಮ್ಮ ಬಳಿಗೆ ಓರ್ವ ಸಂದೇಶವಾಹಕರು ಬಂದಿರುತ್ತಾರೆ. ಅವರು ನಿಮ್ಮವರಿಂದಲೇ ಆಗಿರುತ್ತಾರೆ. ನೀವು ನಷ್ಟಹೊಂದುವುದು ಅವರಿಗೆ ಅಸಹನೀಯವಾಗಿದೆ. ಅವರು ನಿಮ್ಮ ಯಶಸ್ಸಿಗೆ

لَقَدْ جَآءَكُمْ رَسُوْلٌ مِّنْ اَنْفُسِكُمْ عَزِيْزٌ عَلَيْهِ مَا عَنِتُّمْ حَرِيْصٌ عَلَيْكُمْ بِالْمُؤْمِنِيْنَ رَءُوْفٌ رَّحِيْمٌ ﴿١٢٨﴾

45. ಅರ್ಥಾತ್- ಆ ತನಕ ಅವರೊಂದಿಗೆ ಕೈಗೊಳ್ಳಲಾದ ಮೃದು ಧೋರಣೆ ಇನ್ನು ಕೊನೆಗೊಳ್ಳಬೇಕಾಗಿದೆ.

46. ಅರ್ಥಾತ್- ಒಂದೆರಡು ಸಲವಾದರೂ ಅವರ ಸತ್ಯವಿಶ್ವಾಸದ ವಾದ ಪರೀಕ್ಷೆಯ ಒರೆಗಲ್ಲಿಗೆ ಹಚ್ಚಲ್ಪಟ್ಟು ಅದರ ಹುಳುಕು ಬಹಿರಂಗವಾಗದಂತಹ ಯಾವುದೇ ವರ್ಷವೂ ಕಳೆದಿರಲಿಲ್ಲ.

ಹಂಬಲಿಸುವವರಾಗಿದ್ದಾರೆ. ಅವರು ಸತ್ಯವಿಶ್ವಾಸಿಗಳಿಗೆ ವತ್ಸಲರೂ ಕರುಣಾಳುವೂ ಆಗಿರುತ್ತಾರೆ.

129. ಓ ಪೈಗಂಬರರೇ, ಇನ್ನಿವರು ನಿಮ್ಮಿಂದ ವಿಮುಖರಾಗುತ್ತಾರಾದರೆ ಇವರೊಡನೆ ಹೀಗೆ ಹೇಳಿಬಿಡಿರಿ. "ನನಗೆ ಅಲ್ಲಾಹನೇ ಸಾಕು. ಅವನ ಹೊರತು ಅನ್ಯ ಆರಾಧ್ಯನಿಲ್ಲ. ನಾನು ಅವನ ಮೇಲೆಯೇ ಭರವಸೆಯನ್ನಿರಿಸಿದ್ದೇನೆ ಮತ್ತು ಅವನು 'ವಿಶ್ವ ಮಹಾ ಸಿಂಹಾಸನ'ದ ಮಾಲಿಕನಾಗಿರುತ್ತಾನೆ."

فَإِنْ تَوَلَّوْا فَقُلْ حَسْبِيَ اللّٰهُ ۖ لَآ إِلٰهَ
إِلَّا هُوَ ۖ عَلَيْهِ تَوَكَّلْتُ وَهُوَ رَبُّ
الْعَرْشِ الْعَظِيمِ ﴿١٢٩﴾
